ಶನಿವಾರ, ಜನವರಿ 8, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೊದಲ ಡೋಸ್
ಪಶ್ಚಿಮ ಬಂಗಾಳದ ದಕ್ಷಿಣ ದಿನಾಜ್‌ಪುರ ಜಿಲ್ಲೆಯ ಶಾಲೆಯೊಂದರಲ್ಲಿ ಶುಕ್ರವಾರ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದ ವಿದ್ಯಾರ್ಥಿನಿಯರು ವಿಜಯದ ಸಂಕೇತ ಪ್ರದರ್ಶಿಸಿದರು



ಮುಕುಂದರಾಜ್‌ಗೆ 'ಕುವೆಂಪು ಅನಿಕೇತನ ಪ್ರಶಸ್ತಿ'


ಎಲ್.ಎನ್. ಮುಕುಂದರಾಜ್


ಯಶಸ್ವಿನಿ ಕೆ.ಆರ್.


ಸಂಗಮೇಶ ಉಪಾಸೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಕುವೆಂಪು ಅನಿಕೇತನ ಪ್ರಶಸ್ತಿ'ಗೆ ಲೇಖಕ ಎಲ್.ಎನ್. ಮುಕುಂದರಾಜ್ ಆಯ್ಕೆಯಾಗಿದ್ದಾರೆ.

'ಕುವೆಂಪು ಯುವಕವಿ ಪ್ರಶಸ್ತಿ'ಗೆ ಕವಯಿತ್ರಿ ಯಶಸ್ವಿನಿ ಕೆ.ಆರ್ ಹಾಗೂ 'ನಂ.ನಂಜಪ್ಪ ಚಿರಂತನ ಪ್ರಶಸ್ತಿ'ಗೆ ಲೇಖಕ ಸಂಗಮೇಶ ಉಪಾಸೆ ಆಯ್ಕೆಯಾಗಿದ್ದಾರೆ.

ಇದೇ 14ರಂದು ಸಂಜೆ 5.30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕುವೆಂಪು ಮತ್ತು ದ.ರಾ.ಬೇಂದ್ರೆ ಅವರ ಜನ್ಮದಿನದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನುಗ್ಗೇಹಳ್ಳಿ ಪಂಕಜಾಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ.ಬಿ.ಸರೋಜಾದೇವಿ ದತ್ತಿ ಪ್ರಶಸ್ತಿ'ಗೆ ಲೇಖಕಿ ನುಗ್ಗೇಹಳ್ಳಿ ಪಂಕಜಾ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಈ ಆಯ್ಕೆ ನಡೆದಿದೆ. ಪ್ರಶಸ್ತಿಯು ₹ 15 ಸಾವಿರ ನಗದು ಒಳಗೊಂಡಿದೆ.


ನುಗ್ಗೇಹಳ್ಳಿ ಪಂಕಜಾ

93 ವರ್ಷದ ಪಂಕಜಾ ಅವರು, ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಕಾವೇರಿಯ ಅರ್ಥರವ, ಉಷಾನಿಷಿ, ಮಲಯ ಮಾರುತ, ವೀಣಾ ಓಹ್ ವೀಣಾ!, ಮುಗಿಲಮಿಂಚು ಸೇರಿದಂತೆ ವಿವಿಧ ಕಾದಂಬರಿಗಳು, ಅರ್ಧ ಚಂದ್ರ, ಇಪ್ಪತ್ತು ವರ್ಷಗಳ ಹಿಂದೆ, ತಾಯಿ ಮರ, ಸೇವಕಿಯ ಶಿಕ್ಷಣ ಮುಂತಾದ ಸಣ್ಣಕಥೆಗಳನ್ನು ರಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜ.12ರಿಂದ ಯುವ ಸಪ್ತಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನಾಚರಣೆ ಹಾಗೂ 'ಅಜಾದಿ ಕಾ ಅಮೃತ ಮಹೋತ್ಸವ'ದ ಅಂಗವಾಗಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಒಂದು ವಾರ ಯುವ ಸಪ್ತಾಹ ಹಮ್ಮಿಕೊಳ್ಳಲಾಗುವುದು ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ನಾರಾಯಣಗೌಡ ತಿಳಿಸಿದರು.

ಜ.12ರಿಂದ 18ರವರೆಗೂ ಯುವ ಸಪ್ತಾಹ ಹಮ್ಮಿಕೊಳ್ಳಲಾಗಿದ್ದು, ಗ್ರಾಮ ಮಟ್ಟದಿಂದ ರಾಜ್ಯಮಟ್ಟದವರೆಗೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಜ.12ರಂದು ಎಲ್ಲ ಶಾಲೆಗಳು-ಕಾಲೇಜುಗಳಲ್ಲಿ 'ಯುವ ಸಂಸತ್' ಮತ್ತು ಗ್ರಾಮ ಮಟ್ಟದಲ್ಲಿ ಯುವ ಗ್ರಾಮ ಸಭೆಗಳನ್ನು ಆಯೋಜಿಸಲಾಗುವುದು. 13ರಂದು ಸ್ವಾಮಿ ವಿವೇಕಾನಂದರ ವಿಚಾರಧಾರೆ, ಉದ್ದೇಶಗಳು ಮತ್ತು ತಾತ್ವಿಕ ಆಶಯಗಳ ಕುರಿತು ಸಾಂಸ್ಕೃತಿಕ ಕಾರ್ಯಕ್ರಮ, 14ರಂದು ಪೌಷ್ಟಿಕಾಂಶ ಮತ್ತು ಆರೋಗ್ಯ ಶಿಬಿರಗಳು, ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮತ್ತು 15ರಂದು ಸ್ಥಳೀಯ ಗ್ರಾಮೀಣ ಕ್ರೀಡಾ ಉತ್ಸವ,16ರಂದು ಮಾದಕ ವ್ಯಸನ, ಮಹಿಳಾ ದೌರ್ಜನ್ಯ ಮತ್ತು ಸೈಬರ್ ಅಪರಾಧಗಳ ತಡೆಗಟ್ಟುವ ಬಗ್ಗೆ ಜಾಗೃತಿ ಮತ್ತು 17ರಂದು ಕಾನೂನು ನೆರವು ಸೇವೆಗಳ ಬಗ್ಗೆ ಜಾಗೃತಿ ಹಾಗೂ 18ರಂದು ಕೌಶಲ ಅಭಿವೃದ್ಧಿ ಕುರಿತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಪೌರ ಕಾರ್ಮಿಕರ ಸಂಘಕ್ಕೆ ಮುನಿರಾಜ್ ಅಧ್ಯಕ್ಷ


ಮುನಿರಾಜ್

ಬೆಂಗಳೂರು: ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ, ಪೌರ ಕಾರ್ಮಿಕರ ಮಹಾಸಂಘದ ಬಿಬಿಎಂಪಿ ಪೌರ ಕಾರ್ಮಿಕರ ಘಟಕದ ಅಧ್ಯಕ್ಷರಾಗಿ ಮುನಿರಾಜ್ ಆಯ್ಕೆಯಾಗಿದ್ದಾರೆ.

ಸಂಘದ ಅಧ್ಯಕ್ಷ ನಾರಾಯಣ (ಮೈಸೂರು) ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಜ.10ಕ್ಕೆ ಅಂಗನವಾಡಿ ನೌಕರರ ಪ್ರತಿಭಟನೆ


ಎಸ್.ವರಲಕ್ಷ್ಮಿ

ಬೆಂಗಳೂರು: 'ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳ ಉಸ್ತುವಾರಿಗೆ ವಹಿಸುವುದನ್ನು ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಜನವರಿ 10ರಿಂದ ಅಂಗನವಾಡಿ ನೌಕರರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಶುಕ್ರವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ (ಐಸಿಡಿಎಸ್) ಪೂರಕವಾಗಿಲ್ಲ. ಸರ್ಕಾರಗಳು ಅಂಗನವಾಡಿಗಳ ಉಳಿವಿನತ್ತ ಗಮನ ಹರಿಸಿ, ಐಸಿಡಿಎಸ್ ಯೋಜನೆಯನ್ನು ಬಲಗೊಳಿಸಬೇಕು' ಎಂದು ಒತ್ತಾಯಿಸಿದರು. 'ಕೋವಿಡ್ ಉಲ್ಬಣಗೊಂಡಿರುವುದರಿಂದ ಬೆಂಗಳೂರಿನಲ್ಲಿ ಮಾತ್ರ ಪ್ರತಿಭಟನೆ ಮುಂದೂಡಿದ್ದೇವೆ' ಎಂದು ವರಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

WE HAVE Good Clients/ Files for Loan Against Properties. 1Cr to 10Cr. Direct Financiers, Genuine Consultants, Freelancers, Welcome for pvt. fin/ Bank/ Co-op Banks. No Upfront. Contact:- 8867203488.

Business Offers

Distributors



Finance

'AISHWARYA GROUP' Invest 25L- 50L in Trading, Multiple Businesses. Property Security. Monthly 5% Fixed Returns. Investors Welcome. Contact:-7892818780.

REAL ESTATE SELLING

Commercial Building

General

HOTEL FOR sale in Belgaum. 32000 Sqft, Monthly sale Rs 30 Lacs, 31 AC Rooms, Restaurant, Bar (CL7), Banquet, Parking, Contact 9845273435

J P Nagar

TENENTED COMMERCIAL, NEW BUILDING 12,000 Sft SALE, J.P.Nagar, Getting 7L, 10 Years Agreement, 13Cr. 9980577227.

Commercial Land

General

Land For Sale 36000 sqft in Gandhinagar Belagavi, Single Layout, NA, NH4 adjacent, Near Hotel Sankam Contact 9845273435 Suitable: Showrooms, Hospitals, Hotels Etc

Commerical

Basavanagudi

FOR SALE 20x35, 700 Sqft Clear Tittle Ashok Nagar Near to N.R.Colony, 600 Sqft Built Up Independent, Suits for Residential, Office, Fast Food Restaurant, Godown, Clinic, etc. 24K per Sqft. Call 9886019240/ 080-26603673.

HRBR Layout

AVAILABLE For Sale HRBR Layout, I Block, 2nd Cross, North Facing BDA Commercial 60 x 40 Plot with residential building. Contact 9980117302

Jayanagar

COMMERCIAL SITE, Sale 30x55 west facing 80 feet road 9th block Jayangar 4.25 cr. 9972039995

Vijayanagar

COMMERCIAL GOOD Rental Building Sale Vijayanagar. Rent 4.5 Lakhs Pm Prize 6.5 Crores: 9986170790/ 9535555699

Flat

Sunkadakatte

FOR Sale: Janapriya Apartment, III Block, Ground Floor, Anjana Nagar, Sunkadakatte, Bangalore, Builtup area 690 Sqft. Contact: Gopal 8277072557.

Sahakarnagar

LUXURY HIGH Rise Flats, Sahakar Nagar, 60 Feet Road, F-Block. 8088330330, www.govianu.com

Sanjaynagar

VAASTU DUPLEX 3500 sft 4 BHK Flat Sale 2,65,00,000/- HOYSALA VIJAYA ENCLAVE APARTMENTS. 8050276328/ 9900660159

3 BHK Luxury Flats Sanjaynagar, near RMV Hospital Park. 8088330330 www.govianu.com

Bommasandra

LOOKING FOR BUILDERS/ INVESTORS For Bulk Booking in Eletronic City Bommsandra, 80% Project Completed in Prime Location Surrounded in 600 Companies & Metro Station with RERA & BMRDA Approved, A Katha with 1/ 2/ 3 BHK Apartment with Assured Profit. Contact: 9108910278/ 9741832215

Dollars Colony

3 BHK Luxury Flats Dollars Colony, 2nd cross, Pebble Bay. 8088330330. www.govianu.com

HRBR Layout

FLATS FOR Sale @ HRBR BDA Layout 2/ 3 BHK in Good Location 9538828808 9845066608

Jayanagar

NEW FLATS For Sale Jayanagar 1st Block East 2 & 3BHK Call 9538848828, 9845066608.

J P Nagar

NEW FLATS for sale- J.P.Nagar 9th Phase, 2&3 BHK, now 20% Less price,possession- 3 months, Contact- 8867255121/ 9902673417.

SALE NEW East 3 BHK FLATS (1500, 1800 sft) SANJAYNAGAR 1,13,00,000- 1,35,00,000. All inclusive- 9590893080

Rajarajeshwari Nagar

3BHK FLATS, 75L, Opposite Gopalan Arcade, Metro Station. OC + CC, Canara Bank Approved: 9611374397

Farm House/ Land/ Resorts

Out-Station

SALE- CHIKKAMAGALUR Farm House with Resort, 29 Lakh per acre. 8103990990. www.govianu.com

House

Banashankari

40X60 BDA independent house for sale in Banashankari Contact 9886846877 / 8123259015

Hebbal

KEMPAPURA: 3 Floors House builted 30x30 1,40,00,000/-. JUDGES LAYOUT, Yelahanka: 40x60 EF Site 12,500/-: 9845387114

Jayanagar

JAYANAGAR 3RD Block 40x60 Old House, East Facing, 26,500/-. 40x60 7th and 8th Block. 9740148870.

J P Nagar

4 BHK independent house west facing,modern interiors at JP Nagar 3rd phase. Genuine buyers may contact owner 9108152220

Kumaraswamy Layout

NEW BUILDING for sale, BDA Kumarswamy layout. 25x40 GF 1 BHK, First and Second 2 BHK 3rd Floor 3 BHK Duplex with lift Contact: 9035279845 Price- 2.70CR

Joint Development

Multiple Locations

JD, OUT RATE Land Available, Residential, Industrial, Agriculture, Malur, Hoskote, Devanahalli, Bidadi, Ramanagar, Mysur. 9980577227.

Residential/ Commercial

Rajajinagar

28000 SQFT Residential Land Sale Rajajinagar Suitable High Raised Apartments. Near Orian Mall: 9986170790/ 9535555699

Sites

Banashankari

BANASHANKARI 6TH Stage, Anjanapura, Vishweswaraiah Layout, BDA/ A Katha 20x30, 30x40, 40x60, 50x80, BUYING/ SELLING, IMMEDIATE SETTLEMENT. SHIVARAJU: 9845390290, 9591369367.

"PRIME COMMERCIAL Site Banashankari 2nd Stage 40x65 East Rs. 23500/- P.Sft. 'Sri Ganesh Estate'- 9845286505"

BANASHANKARI 6TH Stage,7th Block,30x40, West, 6th Block, 40x60, Sites For sale. 9632822225 9148553232

Basaweshwaranagar

SALE 60X40 NE Corner Site, BBMP 'A' Khata, Near KPT Shrusti Apartment. KAMALANAGAR, 9980928179, 9739950950

HSR Layout

SITE FOR Sale East Facing 30x40, HSR Layout Sector- 1 Close to 27th main Contact: 9742666777

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Kanakapura Road



BMRDA APPROVED
Rs. 1649/- Per Sq.feet
Near Art of Living
Ready to Reg & Const.,
upto 90% Bank Loan
Contact: 9513850029

Kempegowda Layout

SITE FOR Sale Two Sites 30x40 BDA 1st K Sector Kempe gowda Layout Contact: 7019486153

Magadi Road

SITES FOR SALE
@ Tavarekere Town
BMRDA 'A' Katha
Sites Available
Ready for Registration & Construction
Bank loan Available...
Contact
9535311817 / 7650076571

SITE FOR Sale. Kodigehalli village & panchayath near Magadi Road, 1 km. site no. 29, E- khatha. property. E/W: 80 Ft, S/N: 55 Ft, Rate. 3000 Rs for 1 sq. feet. Negotiable. Contact No. 9902295769/ 9902314873.

Nagarabhavi

A KHATA 40X65 Site for Sale East Facing Rs 9500/- Sqft at Mallathahalli Deepa Complex Next Mahesh PU College Contact: 9845989058

NAGARABHAVI 10TH Block 50X80 SOUTH FACE, Good Location BDA SITE SALE. 10,500/- Sqft. Contact. 9945079777

Nelamangala

SALE 60X65 Site at Arashinakunte, Near BELLayout, Nelamangala Main Road. Contact Owner: 9886789567

Rajajinagar

PRIME PROPERTY near Rajajinagar ShankarMutt (Kurubarahalli): 22x49 ft. with building for sale. 8660976767, 7259527187.

Rajarajeshwari Nagar

IDEAL HOMES 40X60 & 30X40 sites & 4 BHK Duplex House for Sale. Contact: 9164403999

Sarjapur Road

SARJAPURA AGS Layout. 40x60 BMRD Approved 2700 Psqft. Mob: 9986745808.

Ulsoor

SALE: TWO Independent adjacent East facing houses, Ulsoor Road, Yellappa Chetty Layout. 1) Site 3360 Sft 4 BHK 2) Site 4507 sft, 3 BHK. G.N. Properties: 9845044179.

Vishweshwariah Layout

AVAILABLE/ WANTED, BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

VISHVESHWARAIAH LAYOUT 40x60 West 40 Feet Road, 50x80 East BDA Site Immediate Registration. 'Raju'- 9845862388

Whitefield

SALE: CORNER Plot No. 38, Prestige Whistling Palms, ECC Road, 5360 Sft. Special reduced price only this month G.N. Properties: 9845044179.

Yelahanka

FOR SALE 30x50, 35x50, 45x60, 45x70, 60x90 KHB sites at YELAHANKA NEWTOWN. GURU ESTATE- 9845046038

Villas/Bunglows

Kanakapura Road

NANADA PRAKRUTHI Gated Community Independent Villa BMRDA Approved 30x40 Duplex 3BHK, Wardrobes, kitchenette 85Lakhs Off Kanakapura Road Before Ravishankar Ashram 9901011122 9845064043

REAL ESTATE BUYING

Sites

Multiple Locations

BDA SITES WANTED Arkavathi, Anjanapura, Banashankari 6th Stage, Vishweswaraiah, Kempegowda, any BDA Layout. Contact: SAPTHAGIRI. 9900268073, 9448068073.

BUILDERS ESSENTIAL

Water Proofing Materials

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Flats

PALACE GARDEN Apartments (Near Vasanthnagar) 3 BHK Semi- Furnished With Carparking on Rent Rs. 45000/- per Month Contact: 9341256711

COOKE TOWN Wheeler Road for Rent 3 BHK semi furnished flat absolute new construction expected Rs. 55k per month inclusive of maintenance. Brokers Excuse. Contact: 9880459141.

Villas/Bunglows

FOR RENT Three Bedroom 1250 Sqft Independent Villa in Cox Town. Contact: 9845930444.



PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಹೆಚ್.ಬಿ. ಶಿವಕುಮಾರ್‌ರವರು ಬನಶಂಕರಿ 2ನೇ ಹಂತ, 16ನೇ ಕ್ರಾಸ್ 6ನೇ ಮೈನ್, ಬೆಂಗಳೂರು–70 ರಲ್ಲಿ ರುವ ಖಾತಾ ಸಂಖ್ಯೆ 2779, ಪಿ.ಐ.ಡಿ. ನಂ. 56–13–2779 ಹೊಂದಿರುವ 40 ಅಡಿ x 60 ಅಡಿ ಅಳತೆಯ ಸ್ಥಿರಾಸ್ತಿಯ ಮಾಲೀಕರಾದ ಶ್ರೀ. ಅರವಿಂದ್. ಕೆ ರವರೊಂದಿಗೆ ದಿನಾಂಕ 29–12–2021 ರಂದು ಕ್ರಯ ಕರಾರು ಮಾಡಿಕೊಂಡಿರುತ್ತಾರೆ. ಹಾಗೂ ಇದೇ ಸ್ವಿರಾಸ್ತಿಯನ್ನು ನೋಂದಾಯಿತ ಕ್ರಯ ಪತ್ರದ ಮೂಲಕವಾಗಿ ಖರೀದಿಸಲಿದ್ದಾರೆ. ಈ ಕ್ರಯದ ಬಗ್ಗೆ ಯಾರಿಗಾದರು ಆಕ್ಷೇಪವಿದ್ದಲ್ಲಿ ಈ ಪತ್ರಿಕೆಯಲ್ಲಿ ಪ್ರಕಟಣೆಗೊಂಡ 15 ದಿವಸಗಳೊಳಗೆ ಕೆಳಕಂಡ ವಿಳಾಸವನ್ನು ಸಂಪರ್ಕಿಸಬಹುದು.

ಟಿ.ಬಿ.ಕಿರಣ್ ಕುಮಾರ್, ವಕೀಲರು
ನಂ.3/2, 3ನೇ ಕ್ರಾಸ್, ಎಡಿಯೂರು
ಬೆಂಗಳೂರು–70.
Mob: 98450-17236
Email: tbkiran@gmail.com

ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವಿಜಯಪುರ ಹೋಬಳಿ, ವೆಂಕಟಗಿರಿಕೋಟೆ ಗ್ರಾಮದ ವಾಸಿಯಾದ ಎಸ್.ಗೋವಿಂದರಾಜು ಬಿನ್ ಲೇಟ್ ಸಂಜೀವಪ್ಪ ಆದ ನನಗೆ ಸಂಬಂಧಿಸಿದ ದೊಡ್ಡಸಾಗರಹಳ್ಳಿ ಗ್ರಾಮದ ಸ.ನಂ.31/3, 31/4, 31/5, 31/6 ರ ಮೂಲ ಸಾಗುವಳಿ ಪತ್ರ, ಜಿ.ಪಿ.ಎ ಪತ್ರ, ಮೂಲ ಕ್ರಯದ ದಾಖಲೆಗಳು ನಮ್ಮ ಮನೆಗೆ ಬಣ್ಣ ಬಳಿಯುವಾಗ ಆಕಸ್ಮಿಕವಾಗಿ ಕಳೆದು ಹೋಗಿದೆ. ಈ ಬಗ್ಗೆ ವಿಜಯಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ. ಮೇಲ್ಕಂಡ ದಾಖಲೆಗಳು ಸಿಕ್ಕಿದರೆ ಮೇಲಿನ ವಿಳಾಸ ಹಾಗೂ ಮೊ. 9845943456 ಸಂಖ್ಯೆಗೆ ಸಂಪರ್ಕಿಸಲು ಕೋರುತ್ತೇನೆ.

JOB OPPORTUNITIES

Hospital & Medical Jobs

WANTED PHARMACIST'S to work in MSIL (JANA AOSHADI KENDRA'S) all over Karnataka With certificate of B-Pharma/ D-Pharma/ M-Pharma Contact immediately @ 9845996744 /7760137876 or mail: poojyaya2005@gmail.com

Part-Time Jobs

THOSE WHO Are Residing Malleswaram, 30 to 35k MNC Provide Work From Home: 7019215243/ 9886641282

Teachers/ Professors

NEW HOLY SAINT HIGH SCHOOL Trained Experienced Maths, Science, Teacher 18000/- Salary Hampinagar Bangalore: 7892461960

Wanted

WANTED FULL Time Junior Advocate, Full Time or Part Time Stenographer/ Full Time Typist with Kannada, English Typing Qualification is Required Immediately in the Advocate Office: No. 22, 2nd Floor, Near Reddy Petrol Bunk, Nehru Nagar, Sheshadripuram, Bangalore. Raghavendra G. Gayatri, Advocate: 9880033254/ 08023564231.

EDUCATIONAL

Coaching Classes

WANTED TALLY TUTORS, THE CORPORATE ACCOUNTANT is an academy managed by professionals for training aspiring accountants to gain experience before a job. We offer to students 100% practical training using computers. Experienced/ retired tally tutors may apply. Attractive salary offered. Contact 9880173407



PERSONAL

Change of Name

I, J. Stanley Paul, S/o Joseph Sahaya Seelan, R/at Flat No. 207, 2nd Floor, Carbon Corner Stone Apartment, A Block, 1st Cross, Kanakashree Layout, Byrathi, Near Cottage Loaf, Kothanur, Dr. Shivarama Karanth Nagar, Bangalore-560077 declare that the names J. Stanley Paul and Stanleypaul Josph Sahaya Seelan belongs to me and refers to one and the same person vide Affidavit dated: 05/01/2022 before Notary Uday Kumar. K, Bengaluru.

I, BIJO PAUL Residing at #41, 2nd floor, 7th Main, 3rd Cross, Behind Koshy Hospital, RaghavendraNagar, DoorvaniNagar, Bangalore-16 have changed my name to BIJO JOSEPH vide affidavit dated 07-01-2022 before Notary Uday Kumar.K, Bangalore.

I, TATYASAHEB Kamble alias Tatyasab Kamble S/o Jinnappa, R/o: Nej Chikodi, Belgaum- 591239, changed my name to Atish Kamble for all purposes.

I, BHOOMIKA HORKERI residing at Srisadguru Krupa Nilaya,#305 KHB1 and E Silicon-City,Hampapura, Kengeri-Hobli,Bangalore-562109 have changed my name from BHOOMIKA PRAVEENA to BHOOMIKA HORKERI vide affidavit dated:27.12.2021 sworn before-notary Arun.R.Naik, Bangalore.Henceforth I shall be called as BHOOMIKA HORKERI only.

I, RAGHAVENDRA RAMDAS R/a. D403, Rohan Jharoka, Kempapura Village, Varthur Hobli, Bangalore- 560037, have changed my name from V.R. RAGHAVENDRA to RAGHAVENDRA RAMDAS vide affidavit dated 07.01.2022, before notary Veena. K, Bangalore.

I, AKANSH SHUBAN R/a. #285, 2nd Main, Behind Brundavana School, BrundavanaNagar, Gavipuram Extn. Bangalore-19, have changed my name to AKANKSH SHUBHAN. J vide affidavit 07.01.2022, notary S.N.Madhu, Bangalore.

DH DECCAN HERALD ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani



SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಶನಿವಾರ, ಜನವರಿ 8, 2022 | ₹ 6.00

● www.prajavani.net

f /prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಕ್ರಾಂತಿಗೆ ಸಿದ್ಧತೆ
ಚೆನ್ನೈನ ಬೀದಿಬದಿಯಲ್ಲಿ ಶುಕ್ರವಾರ ಮಹಿಳಾ ವ್ಯಾಪಾರಿಯೊಬ್ಬರು ಸಂಕ್ರಾಂತಿ ನಿಮಿತ್ತ ಮಡಕೆಯೊಂದಕ್ಕೆ ಬಣ್ಣ ಹಚ್ಚುವಲ್ಲಿ ನಿರತರಾಗಿದ್ದರು.



ಜಾಹೀರಾತು

ಮೇಕೆದಾಟು ವಿವಾದ: ಒಂದು ಸತ್ಯ ದರ್ಶನ

ಯಾರ ಆಡಳಿತ ಕಾಲದಲ್ಲಿ ಕಾಲಹರಣದಿಂದ ಕಾವೇರಿ ಕಣ್ಣೀರು?

ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ 3127/2018 ಬಾಕಿ ಇರುವಾಗ ಪಾದಯಾತ್ರೆ ಎಷ್ಟು ಸರಿ?

ಕಾವೇರಿ ಜಲ ವಿವಾದದಲ್ಲಿ ಕರ್ನಾಟಕಕ್ಕೆ ಯಾವಾಗಲೂ ಸಂಕಷ್ಟ ಯಾಕೆ? ಇದೊಂದು ಮಿಲಿಯನ್ ಡಾಲರ್ ಪ್ರಶ್ನೆ. ಕಾವೇರಿ ಜಲ ವಿವಾದದಲ್ಲಿ ನ್ಯಾಯಾಧೀಕರಣದ ರಚನೆ ಮೊದಲು, ನಂತರ ನ್ಯಾಯಾಧೀಕರಣದ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಹಾಗೂ ನ್ಯಾಯಾಧೀಕರಣದ ಅಂತಿಮ ತೀರ್ಪು ಪ್ರಕಟವಾದ ಮೇಲೆ ಹಾಗೂ ಪ್ರಕಟಿತ ತೀರ್ಪು ಗೆಜೆಟ್‌ನಲ್ಲಿ ಪ್ರಕಟವಾದ ಮೇಲೆ ಎಲ್ಲಾ ಹಂತಗಳಲ್ಲೂ ಒಂದಿಲ್ಲೊಂದು ಸಂಕಷ್ಟದ ಪರಿಸ್ಥಿತಿಯನ್ನು ಕರ್ನಾಟಕ ಕಾಲಕಾಲಕ್ಕೆ ಎದುರಿಸುತ್ತಲೇ ಬಂದಿದೆ. ಏಕೆ ಹೀಗೆ ಎಂಬ ಪ್ರಶ್ನೆಗೆ ಉತ್ತರ ಇನ್ನೂ ದೊರೆತಿಲ್ಲ. ಬಹುಶಃ ಅಂತಹ ಉತ್ತರ ಹುಡುಕುವ ಕಾಲ ಸನ್ನಿಹಿತವಾಗಿದೆ. ಕಾವೇರಿ ನದಿಯಲ್ಲಿ ಅಗಸ್ತ್ಯ ಮಹಾಮುನಿಗಳು ಲೋಪಾ ಮುದ್ರೆಯನ್ನು ಪಡೆದರೆಂಬ ಪ್ರಖ್ಯಾತಿ ಇದೆ. ಹಾಗಾಗಿ ಕರ್ನಾಟಕದ ಪಾಲಿಗೆ ಕಾವೇರಿಯಲ್ಲಿ ಲೋಪವು ಇದೆ, ಮುದ್ರೆಯೂ ಅದಕ್ಕೆ ಇದೆ. ಕವೇರಾ ಎಂಬ ಋಷಿಯ ಸಾಕು ಮಗಳಾದ ಲೋಪಾಮುದ್ರೆ ಕಾವೇರಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳೆಂದು ಅಗಸ್ತ್ಯ ಮಹಾಮುನಿಯ ಪತ್ನಿಯಾಗಿದ್ದ ಈಕೆ ಲೋಕಕಲ್ಯಾಣಕ್ಕಾಗಿ ನದಿಯಾಗಿ ಹರಿದಳೆಂದು ಪುರಾಣಗಳ ಕಾಲದ ಒಂದು ಕಥೆ. ಅದೇನೆ ಇರಲಿ ಲೋಪಾಮುದ್ರೆ ಎಂಬ ಹೆಸರಿನಿಂದ ಹಿಡಿದು ಇಂದಿನವರೆಗೂ ವಿವಾದದ ಸರಮಾಲೆಯನ್ನೇ ಹಾಕಿಕೊಂಡಿರುವ ಕಾವೇರಿ ಎಷ್ಟೆಯಾದರೂ ಕರ್ನಾಟಕದ ಪಾಲಿಗೆ ಜೀವದಾಯಿನಿ, ಜೀವವಾಹಿನಿ, ಜಲಧಾರಿಣಿಯಾಗಿದ್ದಾಳೆ. ರಾಜ್ಯದ ಜನತೆ ಕಾವೇರಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದೊಂದಿಗೆ ಕಾವೇರಿ ಕಣಿವೆಯ ಕಥೆ–ವ್ಯಥೆ ಓತ–ಪ್ರೋತವಾಗಿದೆ. 1983ರಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ಅಂದು ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರಿಗೆ ಬಹುಮತವಿಲ್ಲದೇ ಇದ್ದುದ್ದೇ ಒಂದು ಸಮಸ್ಯೆಯಾಗಿತ್ತು. ರಾಷ್ಟ್ರೀಯ ಜಲನೀತಿಯ ಅನುಷ್ಠಾನಕ್ಕೆ ಮುನ್ನ ಕಾವೇರಿ ಜಲ ವಿವಾದವನ್ನು ನ್ಯಾಯಾಧೀಕರಣಕ್ಕೆ ಒಪ್ಪಿಸುವುದು ಸಾಧುವಲ್ಲ ಎಂಬುದು ಕರ್ನಾಟಕದ ಒಕ್ಕೊರಲಿನ ನಿಲುವಾಗಿತ್ತು. ಮುಂದೆ ಕಾಂಗ್ರೆಸ್ ಸರ್ಕಾರ ಮರಳಿ ಬಂದಾಗ ಕರ್ನಾಟಕದ ರಾಜಕಾರಣದ ಪಾಲಿಗೆ ಅಂದಿನ ಕಾಂಗ್ರೆಸ್ ಪಕ್ಷಕ್ಕೆ ಪ್ರಚಂಡ ಬಹುಮತವೇ ಸಮಸ್ಯೆಯಾಗಿತ್ತು. ಈ ಎರಡೂ ಸಂದರ್ಭಗಳನ್ನು ಇಲ್ಲಿ ಉಲ್ಲೇಖಿಸುತ್ತಿರುವುದರ ಉದ್ದೇಶವಿಷ್ಟೇ ಕಾವೇರಿ ವಿವಾದದ ಸಮಸ್ಯೆಗಳಿಗೆ ಈ ಎರಡೂ ಕಾಲಘಟ್ಟಗಳು ಮಹತ್ವದ ತಿರುವನ್ನು ನೀಡಿದೆ.

1. **ಬಹುಮತವಿಲ್ಲದ ಜನತಾ ಸರ್ಕಾರದ ಆಡಳಿತ ಕಾಲದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು.**
2. **ರಾಜ್ಯದಲ್ಲಿ 89ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಕೇಂದ್ರದಲ್ಲಿ ವಿರೋಧಪಕ್ಷದ ವಿ.ಪಿ.ಸಿಂಗ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು.**


1984ರಲ್ಲಿಯೇ ಕರ್ನಾಕಟದ ಒಪ್ಪಿತ ನಿಲುವಿನ ವಿರುದ್ಧವಾಗಿ ಅಂದಿನ ತಮಿಳುನಾಡಿನ ಎಂ.ಜಿ.ರಾಮಚಂದ್ರನ್ ಸರ್ಕಾರದ ಅಘೋಷಿತ ಬೆಂಬಲದೊಂದಿಗೆ "ತಮಿಳ್ನಾಡು ವಿಲುಪೊರೈಗಳ್ ನಿರುಪಸನ್ ವ್ಯವಸಾಯಿಗಳ್ ಪಾದುಕಾಪ್ಪಾಂ ಸಂಘಂ" ಎಂಬ ಉಸಿರು ಕಟ್ಟಿಸುವಷ್ಟು ಉದ್ದದ ತಂಜಾವೂರಿನ ರೈತ ಸಂಘ ಸರ್ವೋನ್ನತ ನ್ಯಾಯಾಲಯದಲ್ಲಿ ದೂರು ದಾಖಲಿಸಿ ತಮಿಳುನಾಡಿನ ಕಾವೇರಿ ಅಚ್ಚು ಕಟ್ಟು ಪ್ರದೇಶದ ರೈತರಿಗೆ ನೀರು ಸುನಿಶ್ಚಿತಗೊಳಿಸಬೇಕೆಂದು ಹಠ ಹಿಡಿಯಿತು. ಕೇಂದ್ರ ಸರ್ಕಾರ ಕಾವೇರಿ ಜಲ ವಿವಾದ ಬಗೆಹರಿಸಲು ಹಲವಾರು ಪ್ರಯತ್ನಗಳನ್ನು ಮಾಡಿತು. ಮುಖ್ಯಮಂತ್ರಿಗಳ ಮಟ್ಟದ ಹತ್ತಾರು ಮಾತುಕತೆಗಳು ನಡೆದವು. ಯಾವ ಪ್ರಯತ್ನವೂ ತಮಿಳುನಾಡಿನ ಧೋರಣೆಯಿಂದಾಗಿ ಫಲಕಾರಿಯಾಗಲಿಲ್ಲ. ತಮಿಳುನಾಡು 1986ರಲ್ಲಿ ಅಂತರರಾಜ್ಯ ಜಲವಿವಾದ ಕಾಯ್ದೆ 1956ರನ್ವಯ ನ್ಯಾಯಪಂಚಾಯತಿ ರಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಮನವಿ ಸಲ್ಲಿಸಿತು. ರಾಷ್ಟ್ರೀಯ ಜಲನೀತಿಯ ಅನುಪಸ್ಥಿತಿಯಲ್ಲಿ ಕಾವೇರಿ ಜಲವಿವಾದವನ್ನು ನ್ಯಾಯಪಂಚಾಯತಿಗೆ ಒಪ್ಪಿಸುವುದನ್ನು ಕರ್ನಾಟಕ ನಿರಂತರವಾಗಿ ವಿರೋಧಿಸುತ್ತಲೇ ಬಂದಿತ್ತು. ಈ ಹಂತದಲ್ಲಿ ಕಾವೇರಿ ಜಲವಿವಾದಕ್ಕೆ "ಚರ್ಚಿತ ಪರಿಹಾರ ಅಥವಾ ರಾಜಕೀಯ ಪರಿಹಾರ" ಕಂಡು ಹಿಡಿಯುವ ಹಲವಾರು ಪ್ರಯತ್ನಗಳು ನಡೆದಿದ್ದವು. ಆದರೆ, ಫಲ ದೊರೆಯಲಿಲ್ಲ.

ಇದಾದ 4 ವರ್ಷಗಳ ನಂತರ ಅಂದರೆ, 02–06–1990ರಂದು ನ್ಯಾಯಮೂರ್ತಿ ಚಿತ್ತಘೋಷ್ ಮುಖರ್ಜಿಯವರ ನೇತೃತ್ವದಲ್ಲಿ, ಕಾವೇರಿ ಜಲವಿವಾದ ನ್ಯಾಯಾಧೀಕರಣದ ರಚನೆಯಾಯಿತು. 17 ವರ್ಷಗಳ ಸುದೀರ್ಘ ಅವಧಿಯ ನಂತರ 05.02.2007ರಂದು ನ್ಯಾಯಾಧೀಕರಣ ಅಂತಿಮ ತೀರ್ಪನ್ನು ನೀಡಿತು. ಇದಾದ 6 ವರ್ಷಗಳ ನಂತರ ನ್ಯಾಯಾಧೀಕರಣದ ತೀರ್ಪು ಗೆಜೆಟ್ಟಿನಲ್ಲಿ ಪ್ರಕಟಗೊಂಡಿತು. ಅಂದು ಇದು ಚುನಾವಣಾ ಸಮಯ.

ವಿಳಂಬ ದ್ರೋಹಕ್ಕೆ ಯಾರು ಹೊಣೆ?

ನ್ಯಾಯಾಧೀಕರಣದ ಅಂತಿಮ ತೀರ್ಪಿನಿಂದ ಆಶೀರ್ವದಿತವಾಗಿದ್ದ ಕರ್ನಾಟಕದಲ್ಲಿ

ಅಂತರ ರಾಜ್ಯ ಜಲ ವಿವಾದದಂತಹ ಸೂಕ್ಷ್ಮ, ಗಂಭೀರ ಮತ್ತು ದೂರಗಾಮಿ ಪರಿಣಾಮ ಬೀರುವ ವಿವಾದಗಳ ಕುರಿತು ಕರ್ನಾಟಕ ಸರ್ಕಾರ ಯಾವಾಗಲೂ ವಿವೇಕಯುತವಾದ ನಿಲುವುಗಳನ್ನು ತಳೆಯುತ್ತಲೇ ಬಂದಿದೆ.



ಸುವರ್ಣ ರೇಖೆ/ಹೊಸಪರ್ವ

2019ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಭಾರತೀಯ ಜನತಾ ಪಕ್ಷದ ಸರ್ಕಾರ ಚೆನ್ನೈನ ಹಸಿರು ಪೀಠ ನೀಡಿದ ತಡೆಯಾಜ್ಞೆಯನ್ನು 17.06.2021ರಂದು ತೆರವುಗೊಳಿಸುವಲ್ಲಿ ಯಶಸ್ವಿಯಾಯಿತು. ಈ ಕೆಳಕಂಡಂತೆ ಆದೇಶ ಹೊರಡಿಸಿತು

"

.........there is no need for this Tribunal to continue the suomoto proceedings"

"Accordingly, proceedings before this Tribunal are closed without prejudice to the rival contentions of the parties on the subject in proceedings pending before the concerned statutory authority and before the Honorable Supreme Court."

ಹಸಿರು ಪೀಠದ ಆದೇಶ ವಜಾ ಆದ ನಂತರ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಲ್ಲಿ ಕರ್ನಾಟಕ ಸರ್ಕಾರ ಸಲ್ಲಿಸಿದ ಯೋಜನಾ ವರದಿಯ ಪರಿಶೀಲನೆಯಾಗುತ್ತಿದೆ ಎಂದು ಕೇಂದ್ರ ಜಲ ಆಯೋಗದ ಅಧ್ಯಕ್ಷರು ಹಾಗೂ ಕಾವೇರಿ ಪ್ರಾಧಿಕಾರದ ಅಧ್ಯಕ್ಷರು ದಿನಾಂಕ:25.09.2020ರಂದು ಜರುಗಿದ 9ನೇ ಸಭೆಯಲ್ಲಿ ತಿಳಿಸಿರುತ್ತಾರೆ.

* ಮೇಕೆದಾಟು ಯೋಜನೆಯ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ಎಲ್ಲಾ ಅಗತ್ಯತೆಗಳನ್ನು ಪಡೆಯಲು ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಲಯದಲ್ಲಿರುವ ಪ್ರಕರಣಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಗತ್ಯವಿರುವ ಎಲ್ಲಾ ಪ್ರಕ್ರಿಯೆಗಳನ್ನು ಉನ್ನತ ಹಂತದಲ್ಲಿ ಪ್ರಸ್ತಾಪಿಸಿ ಮಂಜೂರಾತಿಗಳನ್ನು ಪಡೆಯಲು ಕ್ರಮಗಳನ್ನು ಕೈಗೊಳ್ಳುತ್ತಿದೆ.

ಸುವರ್ಣಯುಗವೊಂದು ಪ್ರಾರಂಭವಾಗಿ, ಕಾವೇರಿ ಕಣಿವೆಯ ಯೋಜನೆಗಳಿಗೆಲ್ಲ ತ್ವರಿತಗತಿಯ ಚಲನಶೀಲತೆ ದೊರಕಬೇಕಾಗಿದ್ದಿತು. ಆದರೆ, ರಾಜಕೀಯ ಕಾರಣಗಳಲ್ಲಿ ಕರ್ನಾಟಕದ ಕಾವೇರಿ ಕಣಿವೆಯ ಹಿತ, ಜೀವನದಿಯು ಪಾತಾಳಕ್ಕೆ ಕುಸಿದು ಹೋಯಿತು. ಸೆಪ್ಟೆಂಬರ್ 10, 2013ರಂದು ಮೇಕೆದಾಟು ಯೋಜನೆಯು ವಿಸ್ತೃತ ಯೋಜನಾ ವರದಿ (Detailed Project Report) ಸಿದ್ಧಪಡಿಸಲು ತನ್ಮೂಲಕ, ಮೇಕೆದಾಟು ಯೋಜನೆಯನ್ನು ಕಲ್ಪಿಸಿ, ರೂಪಿಸಿ, ಅನುಷ್ಠಾನಗೊಳಿಸುವ ಮಹತ್ವಾಕಾಂಕ್ಷೆಯನ್ನು ಸಾಕಾರಗೊಳಿಸುವ ಪ್ರಕ್ರಿಯೆ ಚಾಲನೆಗೊಂಡು ವೇಗೋತ್ಕರ್ಷ ಪಡೆಯಬೇಕಾಗಿದ್ದಿತು.

ಮುಂದಿನ 2 ತಿಂಗಳಲ್ಲಿ ಅಂದರೆ 5–11–2013ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಧಿನಿಯಮ ದನ್ವಯ 4ಜಿ ವಿನಾಯ್ತಿ ಪಡೆದು, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಮುಂದಡಿ ಇಡುವ ಉದ್ದೇಶದಿಂದ ಕಾವೇರಿ ನೀರಾವರಿ ನಿಗಮ ಸರ್ಕಾರಕ್ಕೆ ಪ್ರಸ್ತಾವನೆಯನ್ನೇನೂ ಸಲ್ಲಿಸಿತು.

...2ನೇ ಪುಟಕ್ಕೆ



2013 ರಿಂದ 2018 ಕರಾಳ ಅಧ್ಯಾಯ

ಆಳುವ ಪಕ್ಷದಲ್ಲಿ ಇದ್ದಾಗ ಆಲಸ್ಯ

ಕಡತಯಜ್ಞದ ಬದಲು ಕಾಲಹರಣ

ವಿರೋಧ ಪಕ್ಷದಲ್ಲಿ ಇದ್ದಾಗ ಆಂದೋಲನ

ಮೇಕೆದಾಟು ಯೋಜನೆಯ ವರದಿ ತಯಾರಿಸಲು ಮೊದಲು 2014 ರಲ್ಲಿ Global Expression of Interest ಕರೆಯಲಾಗಿತ್ತು. 2014 ರಿಂದ 2018 ರವರೆಗೆ ಈ ಕುರಿತು ಯಾವುದೇ ನಿರ್ಣಯ ಆಗಲಿಲ್ಲ. ಕಾವೇರಿ ಜಲ ವಿವಾದ ತಾರ್ಕಿಕ ಅಂತ್ಯ ಕಂಡು ವಿವಾದ ಬಗೆ ಹರಿದಿದ್ದರೂ 4 ನಾಲ್ಕು ಅಮೂಲ್ಯ ವರ್ಷಗಳು ವ್ಯರ್ಥವಾದವು. ಈ ಸಂದರ್ಭದಲ್ಲಿ ನ್ಯಾಯಲಯದ ಯಾವುದೇ ಆದೇಶ ಇರಲಿಲ್ಲ ಆದರೂ ಯೋಜನಾ ವರದಿಯಾಗಲಿ ಯೋಜನೆಯ ಕಲ್ಪನೆಯಾಗಲಿ ರೂಪುಗೊಳ್ಳಲಿಲ್ಲ. ಯೋಜನಾ ವರದಿ ಸಿದ್ದಪಡಿಸಲು ಕಲ್ಪಿಸಿ, ರೂಪಿಸಿ ಅನುಷ್ಠಾನಗೊಳಿಸಲು ನಿರ್ಧರಿಸುವ ಹಂತದಲ್ಲಿ ಚನ್ನೈ ಹಸಿರು ಪೀಠ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತಡೆಹಿಡಿಯಿತು.

4 ನಾಲ್ಕು ಅಮೂಲ್ಯ ವರ್ಷಗಳ ವ್ಯರ್ಥದಿಂದ ನಾವು ನ್ಯಾಯಾಲಯದಲ್ಲಿ ಮತ್ತೊಮ್ಮೆ ತೊಂದರೆ ಅನುಭವಿಸುವಂತಾಯಿತು.

ಸರ್ಕಾರಿ ಕಡತಗಳಲ್ಲಿ ಹೂತುಹೋದ ಈ Global Expression of Interest ವಿಳಂಬ ರಾಕ್ಷಸನ ಕಾಕ ದೃಷ್ಟಿಯಿಂದ ಕರ್ನಾಟಕಕ್ಕೆ ಐತಿಹಾಸಿಕ ಅನ್ಯಾಯ ಎರಗಿಬಂತು ಕನ್ನಡ ನಾಡಿನ ಜೀವ ನದಿ ಕಾವೇರಿ ಮಾತೆ ಮತ್ತೊಮ್ಮೆ ಕಣ್ಣೀರು ಸುರಿಸುವಂತಾಯಿತು. ಈ 4 ವರ್ಷಗಳ ಮಹತ್ವದ ಘಟ್ಟ ಮೇಕೆದಾಟುವಿನ ಯೋಜನಾ ವರದಿ ಸಿದ್ಧವಾಗಿ ಅಗತ್ಯವಾದ ಎಲ್ಲಾ ಮಂಜೂರಾತಿಗಳನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕಾದ ಅಮ್ಯೂಲ ಅವಧಿಯಲ್ಲಿ ನಿದ್ದೆ ಮತ್ತು ಅಪ್ರಮಾಣಿಕತನದ ಐತಿಹಾಸಿಕ ಪ್ರಮಾದ ಕರ್ನಾಟಕದ ಪಾಲಿಗೆ ಕರಾಳ ಅಧ್ಯಾಯವಾಗಿ ಪರಿಣಮಿಸಿತು. (ಈ ಅವಧಿ 2014ರಿಂದ 2018)

ಶನಿವಾರ, ಜನವರಿ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 8 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಚುಮುಚುಮು ಚಳಿಗೆ ನಾಲಿಗೆಯಷ್ಟೇ ಬಿಸಿಯಾದರೆ ಸಾಲದು. ಆಹಾರ ಆರೋಗ್ಯವನ್ನೂ ಬೆಚ್ಚಗಾಗಿಸಬೇಕು. ಚಳಿಗಾಲದ ಬಿಸಿ ಆಹಾರ, ಪೇಯ ಏನಿರಬೇಕು? ಹೇಗಿರಬೇಕು?



ಚರ್ಚೆ
ದೇವಾಲಯಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವುದು ಸರಿಯಾದ ಕ್ರಮವೇ? 9

ಉತ್ತರ ಪ್ರದೇಶ: ಎಸ್‌ಪಿ-ಬಿಜೆಪಿ ಜಾಹೀರಾತು ಸಮರ 6

‘ಬುಲ್ಲಿ ಬಾಯಿ’: ಕಾಲೇಜಿನಿಂದ ನೀರಜ್ ಅಮಾನತು 6

ಸೆನ್ಸೆಕ್ಸ್	ನಿಫ್ಟಿ	₹/$
59,744 ▲	17,812 ▲	74.34 ▲

ನೀಟ್: ಕೌನ್ಸೆಲಿಂಗ್‌ಗೆ ಅವಕಾಶ

ಒಬಿಸಿ, ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿ ಎತ್ತಿಹಿಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ನೀಟ್ ಮೂಲಕ 2021–22ನೇ ಸಾಲಿನ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್ ಪ್ರವೇಶದ ಕೌನ್ಸೆಲಿಂಗ್ ಅನ್ನು ಆರಂಭಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಅವಕಾಶ ಮಾಡಿಕೊಟ್ಟಿದೆ. ಪ್ರವೇಶ ಪ್ರಕ್ರಿಯೆಯು ತುರ್ತಾಗಿ ಆರಂಭವಾಗಬೇಕಾದ ಅಗತ್ಯ ಇದೆ ಎಂದಿದೆ. ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಅಖಿಲ ಭಾರತ ಕೋಟಾದಡಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27ರಷ್ಟು ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿಯ ಆಧಾರದಲ್ಲೇ ಕೌನ್ಸೆಲಿಂಗ್ ನಡೆಸಲು ಮಧ್ಯಂತರ ಆದೇಶದಲ್ಲಿ ಹೇಳಿದೆ.

ನೀಟ್ ಮೂಲಕ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ದಾಖಲಾತಿಯಲ್ಲಿ ಮೀಸಲಾತಿ ಇರಬಾರದು ಎಂದು ಸಲ್ಲಿಸಲಾಗಿದ್ದ ಹಲವು ಅರ್ಜಿಗಳಲ್ಲಿನ ವಾದವನ್ನು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠವು ತಳ್ಳಿಹಾಕಿದೆ. ಒಬಿಸಿ ಮತ್ತು ಇಡಬ್ಲ್ಯುಎಸ್ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವುದನ್ನು ಸುಪ್ರೀಂ ಕೋರ್ಟ್ ಪೀಠವು ಈ ಮೂಲಕ ಎತ್ತಿಹಿಡಿದಿದೆ.

2021–22ನೇ ಸಾಲಿನ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ಈಗಾಗಲೇ ಪರೀಕ್ಷೆ ಬರೆದು, ಕೌನ್ಸೆಲಿಂಗ್‌ಗಾಗಿ ಕಾದಿರುವ ಅಭ್ಯರ್ಥಿಗಳಿಗೆ ಸುಪ್ರೀಂ ಕೋರ್ಟ್‌ನ ಈ ಆದೇಶದಿಂದ ಅನುಕೂಲವಾಗಲಿದೆ. ಇದರಿಂದ ದೇಶದ ಎಲ್ಲಾ ರಾಜ್ಯಗಳ ವೈದ್ಯಕೀಯ ಕಾಲೇಜುಗಳಲ್ಲಿ ಸಾವಿರಾರು ಕಿರಿಯ ವೈದ್ಯರು ಸೇವೆಗೆ ಲಭ್ಯವಾಗಲಿದ್ದಾರೆ. ‘ಕೋವಿಡ್ ವಿರುದ್ಧ ಹೋರಾಟದಲ್ಲಿ ಇದು ಬಲ ನೀಡಲಿದೆ’ ಎಂದು ಶೀಘ್ರ ಕೌನ್ಸೆಲಿಂಗ್‌ಗಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ವೈದ್ಯರು ಹೇಳಿದ್ದಾರೆ.

2021–22ನೇ ಸಾಲಿನ ವೈದ್ಯಕೀಯ ಸ್ನಾತಕೋತ್ತರ ಮತ್ತು ಪದವಿ ಕೋರ್ಸ್‌ಗಳ ಪ್ರವೇಶಾತಿಗಾಗಿ ಅಧಿಸೂಚನೆ ಹೊರಡಿಸಲಾಗಿತ್ತು. 2021ರ ಸೆಪ್ಟೆಂಬರ್‌ನಲ್ಲಿ ಪರೀಕ್ಷೆಗಳು ನಡೆದಿದ್ದವು. ನಂತರ ಕೌನ್ಸೆಲಿಂಗ್ ನಡೆಸಿ, ದಾಖಲಾತಿಯನ್ನು ಅಂತಿಮಗೊಳಿಸಬೇಕಿತ್ತು.

ಆದರೆ, ‘ವೈದ್ಯಕೀಯ ಉನ್ನತ ಕೋರ್ಸ್‌ಗಳಲ್ಲಿ ಒಬಿಸಿ ಮತ್ತು ಇಡಬ್ಲ್ಯುಎಸ್‌ಗೆ ಮೀಸಲಾತಿ ನೀಡಿರುವುದು ಸಂವಿಧಾನಬಾಹಿರ. ಇಡಬ್ಲ್ಯುಎಸ್ ಆದಾಯ ಮಿತಿಯನ್ನು ₹8 ಲಕ್ಷಕ್ಕೆ ನಿಗದಿ ಮಾಡಿರುವುದರ ಹಿಂದೆ ವೈಜ್ಞಾನಿಕ ಆಧಾರಗಳಿಲ್ಲ’ ಎಂದು ನೀಟ್–ಸ್ನಾತಕೋತ್ತರ ಅಭ್ಯರ್ಥಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೀಗಾಗಿ ಕೌನ್ಸೆಲಿಂಗ್ ಅನ್ನು ಮುಂದೂಡಲಾಗಿತ್ತು.

ಇಡಬ್ಲ್ಯುಎಸ್ ಮೀಸಲಾತಿ ನೀಡಲು ನಿಗದಿ ಮಾಡಿದ್ದ ಗರಿಷ್ಠ ₹8 ಲಕ್ಷದ ಆದಾಯ ಮಿತಿಯ ಬಗ್ಗೆ ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಿತ್ತು. ಸಮಿತಿಯು 2021ರ ಡಿಸೆಂಬರ್ 31ರಂದು ವರದಿಯನ್ನು ಸಲ್ಲಿಸಿತ್ತು. ‘ಇಡಬ್ಲ್ಯುಎಸ್ ಕುಟುಂಬಗಳಿಗೆ ವಿಧಿಸಿರುವ ವಾರ್ಷಿಕ ₹8 ಲಕ್ಷ ಆದಾಯದ ಗರಿಷ್ಠ ಮಿತಿಯನ್ನು ಉಳಿಸಿಕೊಳ್ಳಬಹುದು. ₹ 8 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಕುಟುಂಬದ ಅಭ್ಯರ್ಥಿಗಳಿಗೆ ಮಾತ್ರವೇ ಈ ಮೀಸಲಾತಿಯ ಅನುಕೂಲ ದೊರೆಯುತ್ತದೆ’ ಎಂದು ಸಮಿತಿಯು ಶಿಫಾರಸು ಮಾಡಿತ್ತು.

ಸಮಿತಿಯ ಶಿಫಾರಸನ್ನು ಒಪ್ಪಿಕೊಳ್ಳುವುದಾಗಿ ಕೇಂದ್ರ ಸರ್ಕಾರವು ಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿತ್ತು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಒಬಿಸಿ ಅಭ್ಯರ್ಥಿಗಳಿಗೆ ಮೀಸಲಾತಿ ನೀಡಬಾರದು ಎಂಬ ವಾದಕ್ಕೆ ಕಾನೂನಿನ ಬಲವಿಲ್ಲ’ ಎಂದು ವಾದಿಸಿದ್ದರು. ಸರ್ಕಾರದ ಈ ವಾದವನ್ನು ಪೀಠವು ಮಾನ್ಯ ಮಾಡಿತು. ಕೌನ್ಸೆಲಿಂಗ್ ನಡೆಸಲು ಆದೇಶಿಸಿತು.

ಪೀಠ ಹೇಳಿದ್ದು



‘2021ರ ಜುಲೈ 29ರಂದು ಹೊರಡಿಸಲಾಗಿರುವ ಅಧಿಸೂಚನೆಯಲ್ಲಿ ಒಬಿಸಿಗೆ ಶೇ 27 ಮತ್ತು ಇಡಬ್ಲ್ಯುಎಸ್‌ಗೆ ಶೇ 10ರಷ್ಟು ಮೀಸಲಾತಿ ಘೋಷಿಸಲಾಗಿತ್ತು. ಆ ಅಧಿಸೂಚನೆಯ ಅನ್ವಯವೇ 2021–22ನೇ ಸಾಲಿನ ಕೋರ್ಸ್‌ಗಳಿಗೆ ಕೌನ್ಸೆಲಿಂಗ್ ನಡೆಯಬೇಕು’ ಎಂದು ಪೀಠವು ಹೇಳಿದೆ.

2021–22ನೇ ಸಾಲಿನ ಅಧಿಸೂಚನೆಯಲ್ಲಿ ಇಡಬ್ಲ್ಯುಎಸ್‌ಗೆ ₹8 ಲಕ್ಷ ವಾರ್ಷಿಕ ಆದಾಯದ ಮಿತಿ ವಿಧಿಸಲಾಗಿದೆ. ಈ ಸಾಲಿನ ಪ್ರವೇಶಾತಿಗೆ ಈ ಆದಾಯದ ಮಿತಿಯೇ ಅನ್ವಯವಾಗಲಿದೆ. ಆದರೆ, ₹8 ಲಕ್ಷ ಆದಾಯ ಮಿತಿಯ ವಿರುದ್ಧ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದ ಅಂತಿಮ ವಿಚಾರಣೆಯನ್ನು ಮಾರ್ಚ್ 3ನೇ ವಾರದಲ್ಲಿ ನಡೆಸಲಾಗುತ್ತದೆ. ಅರ್ಜಿಗೆ ಸಂಬಂಧಿಸಿದಂತೆ ನೀಡಲಾಗುವ ತೀರ್ಪು ಮುಂದಿನ ಸಾಲಿನ ಪ್ರವೇಶಾತಿಗೆ ಅನ್ವಯವಾಗಲಿದೆ ಎಂದು ಪೀಠವು ಹೇಳಿದೆ.

ಆರೋಗ್ಯ ಸಚಿವ ಡಾ.ಸುಧಾಕರ್ ಪ್ರತಿಪಾದನೆ

ಕೋವಿಡ್: ಲಾಕ್‌ಡೌನ್ ಪರಿಹಾರವಲ್ಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್‌ವೊಂದೇ ಪರಿಹಾರವಲ್ಲ. ಇನ್ನು ಮುಂದೆ ರಾಜ್ಯದಲ್ಲಿ ಲಾಕ್‌ಡೌನ್ ಜಾರಿ ಮಾಡುವುದಿಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು ‘ಲಾಕ್‌ಡೌನ್ ಮುಗಿದುಹೋಗಿರುವ ನೀತಿ. ಆರಂಭದ ಹಂತದಲ್ಲಿ ಕೋವಿಡ್ ಸೋಂಕು, ವೈರಾಣುವಿನ ಗುಣ ಮತ್ತು ಸ್ವಭಾವ, ಚಿಕಿತ್ಸಾ ವಿಧಾನ ಯಾವುದೂ ಗೊತ್ತಿರಲಿಲ್ಲ. ಆಗ ಅನುಭವದ ಕೊರತೆಯಿಂದಾಗಿ ಲಾಕ್‌ಡೌನ್ ಜಾರಿಗೊಳಿಸಿದ್ದೆವು. ಇನ್ನು ಮುಂದೆ ಹಾಗಾಗುವುದಿಲ್ಲ’ ಎಂದರು.

‘ಎರಡು ವರ್ಷಗಳ ಅನುಭವದಿಂದ ಕೋವಿಡ್ ನಿಯಂತ್ರಣ ಮತ್ತು ಚಿಕಿತ್ಸೆಯ ವಿಧಾನದ ಕುರಿತು ಅರಿವು ಇದೆ. ಕೋವಿಡ್ ಹರಡುವುದನ್ನು ಲಾಕ್‌ಡೌನ್ ಜಾರಿಗೊಳಿಸುವುದರಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಲಸಿಕೆ, ನಿಯಮಗಳ ಪಾಲನೆ ಮತ್ತು ಮುನ್ನೆಚ್ಚರಿಕೆಯಿಂದ ಮಾತ್ರವೇ ಕೋವಿಡ್ ನಿಯಂತ್ರಣ ಸಾಧ್ಯ’ ಎಂದು ಸುಧಾಕರ್ ಹೇಳಿದರು.

‘ಓಮೈಕ್ರಾನ್ ತಳಿಯ ಕೊರೊನಾ ವೈರಾಣುವಿನ ಸೋಂಕು ಹರಡದಂತೆ ತಡೆಯುವುದು ಅಸಾಧ್ಯ. ಸಹಜವಾಗಿಯೇ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಲಿದೆ. ಆದರೆ, ಯಾವುದೇ ತೊಂದರೆ ಆಗುವುದಿಲ್ಲ. ಜನರು ಹೆಚ್ಚು ಮುನ್ನೆಚ್ಚರಿಕೆಯಿಂದ ಇರಬೇಕು’ ಎಂದು ಅವರು ತಿಳಿಸಿದರು.

‘ಕೋವಿಡ್ ಮೂರನೇ ಅಲೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸರ್ಕಾರ ಎಲ್ಲ ತಯಾರಿ ಮಾಡಿಕೊಂಡಿದೆ. ಕೋವಿಡ್ ನಿಯಂತ್ರಣಕ್ಕಾಗಿ ಅಧಿಕಾರಿಗಳಿಗೆ ಹಲವು ಜವಾಬ್ದಾರಿ ಕೊಟ್ಟಿದ್ದೇವೆ. ಎಲ್ಲಾ ಅಧಿಕಾರಿಗಳ ಸಮನ್ವಯ ಕುರಿತು ಸಭೆ ಮಾಡಲಾಗಿದೆ. ಕಳೆದ ಎರಡು ಅಲೆಗಳ ವೇಳೆ ಅನುಭವ ಪಡೆದ ಅಧಿಕಾರಿಗಳು ಈ ಬಾರಿ ಯಾವುದೇ ಲೋಪ ಆಗದಂತೆ ಕೆಲಸ ಮಾಡಲಿದ್ದಾರೆ’ ಎಂದು ಕೋವಿಡ್ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.



831 ಮಂದಿಯಷ್ಟೇ ಆಸ್ಪತ್ರೆಗೆ

ರಾಜ್ಯದಲ್ಲಿ 14,416 ಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 831 ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದು, ಅದರಲ್ಲಿ 700 ಮಂದಿ ಸಾಮಾನ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಚಿವ ಸುಧಾಕರ್ ಹೇಳಿದರು.

ಈ ಅಂಕಿ–ಅಂಶವನ್ನು ಗಮನಿಸಿದಾಗ, ಈ ಬಾರಿ ಕೋವಿಡ್ ತೀವ್ರ ಸ್ವರೂಪದ್ದಾಗಿಲ್ಲ. ಕೋವಿಡ್ ಸೋಂಕಿಗೆ ಒಳಗಾಗುವ ಎಲ್ಲರನ್ನೂ ಈ ಬಾರಿ ಆಸ್ಪತ್ರೆಗೆ ದಾಖಲಿಸುವುದಿಲ್ಲ. ಅಗತ್ಯ ಇದ್ದವರಿಗೆ ಮಾತ್ರ ಆಸ್ಪತ್ರೆಗೆ ದಾಖಲಿಸಲಾಗುವುದು ಎಂದರು.

ಇದೇ 10 ರಿಂದ 60 ವರ್ಷ ಮೇಲ್ಪಟ್ಟ ಅಗತ್ಯ ಇರುವವರಿಗೆ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್ ನೀಡಲಾಗುವುದು. ಮುಂದಿನ ಏಳು ದಿನ ಕೋವಿಡ್ ಸೋಂಕಿತರಿಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂದು ಟೆಲಿ ಕೌನ್ಸೆಲಿಂಗ್ ಮೂಲಕ ಕ್ರಮ ತೆಗೆದುಕೊಳ್ಳಲಾಗುವುದು. ಇದಕ್ಕಾಗಿ 10 ಸಾವಿರ ವೈದ್ಯರನ್ನು (ಹೌಸ್ ಸರ್ಜನ್) ನಿಯೋಜನೆ ಮಾಡಲಾಗುವುದು ಎಂದು ಹೇಳಿದರು.

6ನೇ ಪುಟ ನೋಡಿ

7 ದಿನ ‘ಹೋಂ ಕ್ವಾರಂಟೈನ್’ ಕಡ್ಡಾಯ

ನವದೆಹಲಿ: ಭಾರತಕ್ಕೆ ಬಂದಿಳಿಯುವ ಅಂತರರಾಷ್ಟ್ರೀಯ ಪ್ರಯಾಣಿಕರು ಕಡ್ಡಾಯವಾಗಿ ಏಳು ದಿನಗಳ ಕಾಲ ‘ಹೋಂ ಕ್ವಾರಂಟೈನ್’ಗೆ ಒಳಗಾಗಬೇಕು. ಎಂಟನೇ ದಿನ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ದೇಶದಲ್ಲಿ ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಚಿವಾಲಯವು ಪ್ರಯಾಣಕ್ಕೆ ಸಂಬಂಧಿಸಿ ಪರಿಷ್ಕೃತ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಹೊಸ ಮಾರ್ಗಸೂಚಿಗಳು ಜ.11ರಿಂದ ಜಾರಿಗೆ ಬರಲಿವೆ.

150 ಕೋಟಿಗೂ ಅಧಿಕ ಡೋಸ್ ನೀಡಿಕೆ: ‘ಶುಕ್ರವಾರದವರೆಗೆ ನೀಡಲಾದ ಕೋವಿಡ್ ಲಸಿಕೆಯ ಒಟ್ಟು ಡೋಸ್‌ಗಳು 150 ಕೋಟಿ ಗಡಿ ದಾಟಿದ್ದು, ಭಾರತ ಹೊಸ ಮೈಲುಗಲ್ಲು ಸಾಧಿಸಿದಂತಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

1,17,100 ಹೊಸ ಪ್ರಕರಣ ಪತ್ತೆ: ಶುಕ್ರವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ 24 ಗಂಟೆಗಳಲ್ಲಿ ದೇಶದಲ್ಲಿ ಕೋವಿಡ್–19ನ 1,17,100 ಹೊಸ ಪ್ರಕರಣಗಳು ಪತ್ತೆಯಾಗಿವೆ. 214 ದಿನಗಳ ನಂತರ ಲಕ್ಷಕ್ಕೂ ಅಧಿಕ ಪ್ರಕರಣಗಳು ವರದಿಯಾದಂತಾಗಿದೆ. ಒಟ್ಟು ಪ್ರಕರಣಗಳ ಸಂಖ್ಯೆ 3,52,26,386 ಆಗಿದ್ದು, ಈ ಪೈಕಿ ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳ ಸಂಖ್ಯೆ 3,007 ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕನಕಪುರಕ್ಕೆ ಇಂದು ಶಿವಕುಮಾರ್, ಸಿದ್ದರಾಮಯ್ಯ ಆಗಮನ

ಮೇಕೆದಾಟು ಪಾದಯಾತ್ರೆಗೆ ಭರದ ಸಿದ್ಧತೆ

ಪ್ರಜಾವಾಣಿ ವಾರ್ತೆ

ರಾಮನಗರ: ಕಾಂಗ್ರೆಸ್ ನೇತೃತ್ವದಲ್ಲಿ ಕನಕಪುರ ತಾಲ್ಲೂಕಿನ ಸಂಗಮದಿಂದ ಬೆಂಗಳೂರಿನವರೆಗೆ ಹಮ್ಮಿಕೊಂಡಿರುವ ಮೇಕೆದಾಟು ಪಾದಯಾತ್ರೆ ಆರಂಭಕ್ಕೆ ಇನ್ನೊಂದೇ ದಿನ ಬಾಕಿ ಉಳಿದಿದ್ದು, ಸಿದ್ಧತೆಗಳು ಭರದಿಂದ ಸಾಗಿವೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಪಾದಯಾತ್ರೆಗೆ ಚಾಲನೆ ದೊರೆಯಲಿದೆ. ಅರ್ಕಾವತಿ, ವೃಷಭಾವತಿ ಹಾಗೂ ಕಾವೇರಿ ನದಿಗಳು ಸೇರುವ ಸಂಗಮದಲ್ಲಿ ನದಿ ದಂಡೆಯಲ್ಲೇ ಬೃಹತ್ ವೇದಿಕೆ ನಿರ್ಮಿಸಲಾಗಿದೆ. ‘ನೀರಿನಾಗಿ ನಡಿಗೆ’ ಎಂಬ ಧ್ಯೇಯದೊಂದಿಗೆ 11 ದಿನ ಪಾದಯಾತ್ರಿಗರು ಬೆಂಗಳೂರಿನತ್ತ ಹೆಜ್ಜೆ ಹಾಕಲಿದ್ದಾರೆ. ಸಂಗಮದಿಂದ ಕನಕಪುರ, ರಾಮನಗರ, ಬಿಡದಿ, ಕೆಂಗೇರಿ ಮಾರ್ಗವಾಗಿ ಪಾದಯಾತ್ರೆ ಸಾಗಲಿದೆ.

ಮೂಲಸೌಕರ್ಯ ವ್ಯವಸ್ಥೆ: ಸಂಸದ ಡಿ.ಕೆ.ಸುರೇಶ್ ನೇತೃತ್ವದಲ್ಲಿ ಪಾದಯಾತ್ರಿಕರಿಗೆ ಸವಲತ್ತುಗಳನ್ನು ಕಲ್ಪಿಸಲಾಗುತ್ತಿದೆ. ಪಾದಯಾತ್ರೆ ಹಾದುಹೋಗುವ ರಸ್ತೆಗಳನ್ನು ಈಗಾಗಲೇ ದುರಸ್ತಿ ಮಾಡಲಾಗುತ್ತಿದೆ. ಈ ಮಾರ್ಗದಲ್ಲಿ ಈಗಾಗಲೇ ಇರುವ ಸಮುದಾಯ ಶೌಚಾಲಯಗಳನ್ನು ದುರಸ್ತಿಗೊಳಿಸಲಾಗಿದ್ದು, ಅಲ್ಲಲ್ಲಿ ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ.

ಕನಕಪುರದ ರೂರಲ್ ಕಾಲೇಜು ಮೈದಾನದಲ್ಲಿ ನೂರಾರು ತಾತ್ಕಾಲಿಕ ಶೌಚಾಲಯಗಳು ಹಾಗೂ ಸ್ನಾನಗೃಹಗಳನ್ನು ನಿರ್ಮಿಸಲಾಗಿದೆ. ಜೊತೆಗೆ, ಊಟೋಪಚಾರದ ವ್ಯವಸ್ಥೆಗಾಗಿ ಸಮಿತಿಗಳನ್ನು ರಚಿಸಲಾಗಿದೆ.

> **ವಾರಾಂತ್ಯ ಕರ್ಫ್ಯೂ ಹಿನ್ನೆಲೆಯಲ್ಲಿ ಸಂಗಮ ಪ್ರದೇಶದಲ್ಲಿ ಈಗಾಗಲೇ ಜಿಲ್ಲಾಡಳಿತ ನಿಷೇಧಾಜ್ಞೆ ಹೇರಿದ್ದು, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ**
> **ಎಸ್. ಗಿರೀಶ್,** ಎಸ್‌ಪಿ, ರಾಮನಗರ

ಮಾರ್ಗದಲ್ಲಿನ ಗ್ರಾಮಗಳ ಕಾಂಗ್ರೆಸ್ ಮುಖಂಡರಿಗೂ ವಿವಿಧ ಜವಾಬ್ದಾರಿ ನೀಡಲಾಗಿದೆ. ಪ್ರತಿದಿನ ಸರಾಸರಿ 14ರಿಂದ 16 ಕಿ.ಮೀ. ಪಾದಯಾತ್ರೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ್ದು, ಮಾರ್ಗದಲ್ಲಿನ ಎಲ್ಲ ಹೋಟೆಲ್, ರೆಸಾರ್ಟ್‌ಗಳನ್ನು ಕಾಯ್ದಿರಿಸಲಾಗಿದೆ. ಅಲ್ಲಲ್ಲಿ ತಾತ್ಕಾಲಿಕ ಟೆಂಟ್‌ಗಳನ್ನು ಹಾಕಲಾಗುತ್ತಿದೆ.

ಮೊದಲ ದಿನ ಡಿ.ಕೆ. ಶಿವಕುಮಾರ್ ಹುಟ್ಟೂರು ದೊಡ್ಡಾಲಹಳ್ಳಿಯಲ್ಲಿ ಪಾದಯಾತ್ರಿಗಳು ತಂಗಲಿದ್ದಾರೆ. ಇದಕ್ಕಾಗಿ ಇಡೀ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ ನಡೆದಿದ್ದು, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುತ್ತಿದೆ. ಪಾದಯಾತ್ರೆ ಕುರಿತು ಅಲ್ಲಲ್ಲಿ ಗೋಡೆ ಬರಹಗಳು ಗಮನ ಸೆಳೆಯುತ್ತಿವೆ. ಕನಕಪುರದ ತುಂಬೆಲ್ಲ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ.

‘ಸಂಗಮದ ಕಡೆ ಪ್ರವೇಶಿಸದಂತೆ ನಿರ್ಬಂಧ’

ಪಾದಯಾತ್ರೆ ನಡೆಯಲಿರುವ ಸಂಗಮ ಪ್ರದೇಶದಲ್ಲಿ ವಾರಾಂತ್ಯದ ಕರ್ಫ್ಯೂ ಅಂಗವಾಗಿ ಜಿಲ್ಲಾಡಳಿತವು ನಿಷೇಧಾಜ್ಞೆ ಜಾರಿಗೊಳಿಸಿದ್ದು, ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿದೆ. ಪೊಲೀಸರು ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಇಟ್ಟು ಕಾಯತೊಡಗಿದ್ದು, ಸದ್ಯ ಯಾರನ್ನೂ ಸಂಗಮದ ಕಡೆಗೆ ಬಿಡುತ್ತಿಲ್ಲ.

ಪಾದಯಾತ್ರೆ ಮೇಲೆ ಕಣ್ಣಿಡಲು ಬರೋಬ್ಬರಿ 2 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ. ಜಿಲ್ಲಾಡಳಿತ ಹಾಗೂ ಪೊಲೀಸರು ಸರ್ಕಾರದ ಮುಂದಿನ ನಿರ್ದೇಶನಕ್ಕಾಗಿ ಕಾಯುತ್ತಿದ್ದಾರೆ. ಜಿಲ್ಲಾ ಗಡಿಗಳಲ್ಲಿಯೇ ಕಾರ್ಯಕರ್ತರನ್ನು ತಡೆಯುವ ಪ್ರಯತ್ನವೂ ಆಗುವ ನಿರೀಕ್ಷೆ ಇದೆ. ಅಗತ್ಯ ಬಿದ್ದಲ್ಲಿ ಪಾದಯಾತ್ರಿಗಳ ಬಂಧನಕ್ಕೂ ಪೊಲೀಸರು ಸಜ್ಜಾಗಿದ್ದಾರೆ.

ಕಾಂಗ್ರೆಸ್ ನಾಯಕರ ದಂಡು

ವಾರಾಂತ್ಯ ಕರ್ಫ್ಯೂ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿಯೇ ಹಲವು ಕಾರ್ಯಕರ್ತರು ಕನಕಪುರಕ್ಕೆ ಬಂದಿಳಿದಿದ್ದು, ಅವರಿಗೆ ವಸತಿ ವ್ಯವಸ್ಥೆ ಮಾಡಲಾಗಿದೆ. ಪಾದಯಾತ್ರೆ ನೇತೃತ್ವ ವಹಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಬೆಳಿಗ್ಗೆ ಕನಕಪುರಕ್ಕೆ ಬರಲಿದ್ದು, ಅವರೊಂದಿಗೆ ಕಾಂಗ್ರೆಸ್ ನಾಯಕರ ದಂಡೇ ಬರುವ ನಿರೀಕ್ಷೆ ಇದೆ.

30 ಸಾವಿರ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 8,449 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 30 ಸಾವಿರ (30,113) ದಾಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಿದ್ದು, ದಿನವೊಂದಕ್ಕೆ 2.03 ಲಕ್ಷ ಮಾದರಿಗಳನ್ನು ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 4.15ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ವಾರದಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಈ ತಿಂಗಳ 7 ದಿನಗಳಲ್ಲಿ 23,715 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

107 ಓಮೈಕ್ರಾನ್ ಪ್ರಕರಣ ದೃಢ: ರಾಜ್ಯದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಪ್ರಕರಣಗಳೂ ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ. ಹೊಸ ತಳಿಯ ಸೋಂಕು 107 ಮಂದಿಯಲ್ಲಿ ಹೊಸದಾಗಿ ದೃಢಪಟ್ಟಿದೆ. ಈ ಮಾದರಿಯ ಪ್ರಕರಣಗಳ ಒಟ್ಟು ಸಂಖ್ಯೆ 333ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಈವರೆಗೆ 2,937 ಡೆಲ್ಟಾ ಪ್ರಕರಣಗಳು ಹಾಗೂ ಡೆಲ್ಟಾ ಉಪತಳಿಯ 1,350 ಪ್ರಕರಣಗಳು ವರದಿಯಾಗಿವೆ.

ಸಚಿವ ಅಶೋಕಗೆ ಕೋವಿಡ್: ಸಂಪರ್ಕಿತರಿಗಿಲ್ಲ ಪ್ರತ್ಯೇಕವಾಸ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಂದಾಯ ಸಚಿವ ಆರ್.ಅಶೋಕ ಅವರಿಗೆ ಕೋವಿಡ್ ದೃಢಪಟ್ಟಿದೆ. ಆದರೆ, ಕಳೆದ ಎರಡು ದಿನಗಳಿಂದ ಅವರ ಪ್ರಾಥಮಿಕ ಸಂಪರ್ಕಕ್ಕೆ ಬಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಹಲವು ಸಚಿವರು ಪ್ರತ್ಯೇಕವಾಸಕ್ಕೆ ಒಳಗಾಗದೇ ಅಧಿಕಾರಿಗಳ ಜತೆ ಸಭೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

‘ನನಗೆ ಕೋವಿಡ್ ದೃಢವಾಗಿದ್ದು, ತಮ್ಮ ಸಂಪರ್ಕಕ್ಕೆ ಬಂದ ಎಲ್ಲರೂ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ’ ಎಂದು ಟ್ವಿಟರ್ ಮೂಲಕ ಅಶೋಕ ಅವರು ಶುಕ್ರವಾರ ಮಧ್ಯಾಹ್ನ 2.50 ಕ್ಕೆ ಮನವಿ ಮಾಡಿದ್ದಾರೆ. ಈ ಮಾಹಿತಿ ಹೊರ ಬೀಳುತ್ತಿದ್ದಂತೆ, ಅವರ ಸಂಪರ್ಕಕ್ಕೆ ಬಂದಿದ್ದ ಮುಖ್ಯಮಂತ್ರಿ, ಆರೋಗ್ಯ ಡಾ. ಕೆ. ಸುಧಾಕರ್ ಸೇರಿದಂತೆ ಹಲವು ಸಚಿವರು ಕೋವಿಡ್ ಪರೀಕ್ಷೆ ಮಾಡಿಸಿ, ಪ್ರತ್ಯೇಕವಾಸಕ್ಕೆ ಒಳಗಾಗಬೇಕಿತ್ತು. ಆದರೆ ಯಾರೂ ಪ್ರತ್ಯೇಕವಾಸಕ್ಕೆ ಮೊರೆ ಹೋದ ಮಾಹಿತಿಯನ್ನು ಬಹಿರಂಗಪಡಿಸಿಲ್ಲ. ಸಚಿವ ಸುಧಾಕರ್ ಒಳಗೊಂಡಂತೆ ಕೆಲವು ಸಚಿವರು ಸಂಜೆಯವರೆಗೆ ವಿವಿಧ ಸಭೆಗಳನ್ನು ನಡೆಸಿದ್ದಾರೆ.

ಅಶೋಕ ಅವರಲ್ಲಿ ಕೋವಿಡ್‌ನ ಸೌಮ್ಯ ಲಕ್ಷಣಗಳು ಕಂಡುಬಂದಿದ್ದು, ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರ ಆಪ್ತ ಮೂಲಗಳು ಹೇಳಿವೆ.

ಎರಡು ದಿನಗಳ ಹಿಂದೆ ನಡೆದ ಕೋವಿಡ್ ಕುರಿತ ಸಭೆಯಲ್ಲಿ ಅಶೋಕ ಭಾಗವಹಿಸಿದ್ದರು. ಅಲ್ಲಿ ಬೊಮ್ಮಾಯಿ ಅಲ್ಲದೆ, ಆರೋಗ್ಯ ಸಚಿವ ಸುಧಾಕರ್, ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಇದರ ಜೊತೆಗೆ, ಸಂಸದ ಜಿ.ಎಂ. ಸಿದ್ದೇಶ್ವರ ಅವರ ಸಂಸ್ಥೆಯ ಕಾರ್ಯಕ್ರಮದಲ್ಲೂ ಭಾಗಿಯಾಗಿದ್ದರು. ಅಲ್ಲೂ ಹಲವು ಸಚಿವರು ಇದ್ದರು. ಗುರುವಾರ ಬೆಳಿಗ್ಗೆ ವಿಧಾನಪರಿಷತ್‌ನ ನೂತನ ಸದಸ್ಯರ ಪ್ರಮಾಣ ವಚನ ಕಾರ್ಯಕ್ರಮದಲ್ಲೂ ಹಾಜರಾಗಿದ್ದರು.

ಒಂದು ಕಡೆ ಸರ್ಕಾರ ಸಭೆ ಸಮಾರಂಭಗಳಲ್ಲಿ 50 ಕ್ಕೂ ಹೆಚ್ಚು ಜನರ ಸೇರಬಾರದು ಎಂದು ಕೋವಿಡ್ ನಿಯಮಗಳ ಪಾಲನೆಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದರೂ ಸಚಿವರು ಮತ್ತು ಅವರ ಸಂಬಂಧಿಗಳು, ಅಧಿಕಾರಿಗಳು ಪಾಲನೆ ಮಾಡದೇ ಇರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಟೀಕೆ ವ್ಯಕ್ತವಾಗಿದೆ.

ಭದ್ರತಾ ಲೋಪ: ತನಿಖೆ ನಿಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ಅವರು ಇದೇ 5ರಂದು ಪಂಜಾಬ್‌ಗೆ ನೀಡಿದ್ದ ಭೇಟಿಯ ಸಂದರ್ಭದ ಸಂಚಾರದ ವಿವರ ಮತ್ತು ಅಲ್ಲಾಗಿರುವ ಭದ್ರತಾ ಲೋಪಗಳ ಬಗ್ಗೆ ಈಗ ಸಂಗ್ರಹಿಸಿರುವ ವಿವರಗಳನ್ನು ತಕ್ಷಣವೇ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ಸಲ್ಲಿಸಿ’ ಎಂದು ಪಂಜಾಬ್ ಪೊಲೀಸ್ ಇಲಾಖೆ, ಕೇಂದ್ರದ ತನಿಖಾ ಸಂಸ್ಥೆಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ಮೋದಿ ಅವರ ಪಂಜಾಬ್ ಭೇಟಿಯ ವೇಳೆ ಆದ ಭದ್ರತಾ ಲೋಪದ ವಿರುದ್ಧ ಸ್ವತಂತ್ರ ತನಿಖೆ ನಡೆಸಬೇಕು. ಈ ಬಗ್ಗೆ ತನಿಖೆ ನಡೆಸಲು ಪಂಜಾಬ್ ಸರ್ಕಾರವು ರಚಿಸಿರುವ ಸಮಿತಿಯನ್ನು ವಜಾ ಮಾಡಬೇಕು ಎಂದು ‘ಲಾಯರ್ಸ್ ವಾಯ್ಸ್’ ಎಂಬ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಸೂಚನೆ ನೀಡಿದೆ.

ಪಂಜಾಬ್ ಸರ್ಕಾರ ಮತ್ತು ಕೇಂದ್ರ ಸರ್ಕಾರವು ಈ ಘಟನೆ ಕುರಿತು ತನಿಖೆ ನಡೆಸಲು ರಚಿಸಿರುವ ಸಮಿತಿಗಳು ತಮ್ಮ ತನಿಖೆಯನ್ನು, ಅರ್ಜಿಯ ಮುಂದಿನ ವಿಚಾರಣೆಯವರೆಗೆ ನಿಲ್ಲಿಸುವಂತೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಆದೇಶಿಸಿದೆ.

‘ಪ್ರಧಾನಿ ಸಂಚಾರದ ವಿವರ ಮತ್ತು ಘಟನೆಗೆ ಸಂಬಂಧಿಸಿದಂತೆ ಈವರೆಗೆ ಕಲೆಹಾಕಿರುವ ವಿವರಗಳನ್ನು ತಕ್ಷಣವೇ ಸಂಗ್ರಹಿಸಿ, ಭದ್ರಪಡಿಸಿ’ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ಪೀಠವು ಸೂಚನೆ ನೀಡಿದೆ.

‘ಇದು ಅಪರೂಪದಲ್ಲೇ ಅಪರೂಪದ ಘಟನೆ. ಜಾಗತಿಕ ಸಮುದಾಯದ ಎದುರು ಅಪಮಾನಕ್ಕೆ ತುತ್ತಾಗುವಂತಹ ಘಟನೆ. ಇದು ಗಡಿಯಾಚೆಗಿನ ಭಯೋತ್ಪಾದನೆಯಾಗಿರುವ ಸಾಧ್ಯತೆಯೂ ಇದೆ. ನಿಷೇಧಿತ ಉಗ್ರ ಸಂಘಟನೆ ‘ಸಿಖ್ ಫಾರ್ ಜಸ್ಟೀಸ್’ ಇಂತಹದ್ದೇ ಚಟುವಟಿಕೆಗೆ ಕರೆ ನೀಡಿರುವ ವಿಡಿಯೊ ಬುಧವಾರದಿಂದ ವೈರಲ್ ಆಗಿದೆ. ಹೀಗಾಗಿ ಈ ಬಗ್ಗೆ ಸ್ವತಂತ್ರ ತನಿಖೆ ಅಗತ್ಯವಿದೆ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪ್ರತಿಪಾದಿಸಿದರು.

ಸಾಕ್ಷ್ಯ ಸಂಗ್ರಹ: ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಕೇಂದ್ರ ಸರ್ಕಾರವು ರಚಿಸಿರುವ ಉನ್ನತ ಸಮಿತಿಯು ಶುಕ್ರವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ ವಿವರಗಳನ್ನು ಕಲೆಹಾಕಿದೆ. ಆದರೆ ಈಗ ಸಮಿತಿಯು ಸಂಗ್ರಹಿಸಿರುವ ವಿವರಗಳನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಸಲ್ಲಿಸಬೇಕಾಗುತ್ತದೆ.

ವರದಿ ಸಲ್ಲಿಕೆ: ಘಟನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಿದ್ಧಪಡಿಸಿರುವ ವರದಿಯನ್ನು ಪಂಜಾಬ್ ಮುಖ್ಯಕಾರ್ಯದರ್ಶಿಯು ಕೇಂದ್ರ ಸರ್ಕಾರಕ್ಕೆ ಶುಕ್ರವಾರ ಸಲ್ಲಿಸಿದ್ದಾರೆ.



ಹಿಮದ ಹೊದಿಕೆ ಮನಾಲಿಯ ಸೋಲಂಗ್ ಕಣಿವೆಯ ಹಿಮಾವೃತ ಪ್ರದೇಶಕ್ಕೆ ಶುಕ್ರವಾರ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು –ಪಿಟಿಐ ಚಿತ್ರ

ಒಳ ಪುಟ



‘ಸಮನ್ವಯ ಕೊರತೆಯಿಂದ ಭದ್ರತಾ ಲೋಪ’ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲಾಕ್‌ಡೌನ್ ನಂತರದ ಉದ್ಯೋಗ ಚಿತ್ರಣ ಕುರಿತು ಸಿಎಂಐಇ ವರದಿ

ತಿಂಗಳ ಸಂಬಳದ 95 ಲಕ್ಷ ಉದ್ಯೋಗ ಮಾಯ!

• ವಿಜಯ್ ಜೋಷಿ

ಬೆಂಗಳೂರು: ಕೋವಿಡ್–19 ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಮೊದಲ ಲಾಕ್‌ಡೌನ್ ನಂತರದಲ್ಲಿ ತಿಂಗಳ ಸಂಬಳದ ಉದ್ಯೋಗಗಳ ಸಂಖ್ಯೆಯು ದೇಶದಲ್ಲಿ 95 ಲಕ್ಷದಷ್ಟು ಕಡಿಮೆ ಆಗಿದೆ. ಆದರೆ, ಇದೇ ಅವಧಿಯಲ್ಲಿ ದಿನಗೂಲಿ ಆಧಾರಿತ ಉದ್ಯೋಗಗಳಲ್ಲಿ ಹಾಗೂ ಕೃಷಿ ಕೆಲಸಗಳ ಸಂಖ್ಯೆಯಲ್ಲಿ ಹೆಚ್ಚಳ ಆಗಿದೆ.

ದೇಶದಲ್ಲಿ ಮೊದಲ ಲಾಕ್‌ಡೌನ್ ಪೂರ್ಣಗೊಂಡು ಒಂದೂವರೆ ವರ್ಷಗಳು ಕಳೆದಿದ್ದರೂ, ಎಲ್ಲ ಬಗೆಯ ಉದ್ಯೋಗಗಳ ಸಂಖ್ಯೆಯು ಕೋವಿಡ್ ಪೂರ್ವದ ಸ್ಥಿತಿಯನ್ನು ತಲುಪಿಲ್ಲ. 2019–20ರಲ್ಲಿ ದೇಶದಲ್ಲಿ ಒಟ್ಟು 40.89 ಕೋಟಿ ಉದ್ಯೋಗಗಳು ಇದ್ದವು. 2021ರ ಡಿಸೆಂಬರ್ ವೇಳೆಗೆ ಉದ್ಯೋಗಗಳ ಸಂಖ್ಯೆಯು 40.60 ಕೋಟಿಯಷ್ಟಾಗಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆ ಸಿದ್ಧಪಡಿಸಿರುವ ವರದಿ ಹೇಳಿದೆ.

ಅಂದರೆ, ಒಟ್ಟು ಉದ್ಯೋಗಗಳ ಸಂಖ್ಯೆಯಲ್ಲಿ 29 ಲಕ್ಷದಷ್ಟು ಕಡಿಮೆ ಆಗಿದೆ. ತಿಂಗಳ ಸಂಬಳದ ಉದ್ಯೋಗಗಳ ಸಂಖ್ಯೆ ದೊಡ್ಡಮಟ್ಟದಲ್ಲಿ ಕಡಿಮೆ ಆಗಿದ್ದರೂ, ದಿನಗೂಲಿ ಹಾಗೂ ಕೃಷಿ ಉದ್ಯೋಗಗಳ ಸಂಖ್ಯೆಯಲ್ಲಿ ಒಂದಿಷ್ಟು ಏರಿಕೆ ಕಂಡುಬಂದ ಪರಿಣಾಮ ಒಟ್ಟು ಉದ್ಯೋಗ ನಷ್ಟವು 29 ಲಕ್ಷಕ್ಕೆ ಸೀಮಿತವಾಗಿದೆ.

> **ಸದ್ಯಕ್ಕೆ ಕೈಗಾರಿಕೆಗಳ ಚಟುವಟಿಕೆಗೆ ಅವಕಾಶ ಇದೆ. ಆದರೆ ಮತ್ತೆ ಲಾಕ್‌ಡೌನ್ ಜಾರಿಗೆ ತಂದರೆ ಕೈಗಾರಿಕೆಗಳಿಗೆ ಬಹಳ ಕಷ್ಟ ಆಗಲಿದೆ**
> **ಐ.ಎಸ್. ಪ್ರಸಾದ್,** ಎಫ್‌ಕೆಸಿಸಿಐ ಅಧ್ಯಕ್ಷ

ಪ್ರಜಾವಾಣಿ ವಿಶೇಷ

2019–20ರಲ್ಲಿ ದೇಶದ ಒಟ್ಟು ಉದ್ಯೋಗಗಳ ಸಂಖ್ಯೆಯಲ್ಲಿ ತಿಂಗಳ ವೇತನದ ಉದ್ಯೋಗಗಳ ಪ್ರಮಾಣವು ಶೇಕಡ 21.2ರಷ್ಟು ಇತ್ತು. 2021ರ ಡಿಸೆಂಬರ್ ವೇಳೆಗೆ ಇದು ಶೇ 19ಕ್ಕೆ ಇಳಿಕೆ ಆಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಕಟ್ಟಡ ನಿರ್ಮಾಣ ಮತ್ತು ಕೃಷಿ ವಲಯದ ಉದ್ಯೋಗಗಳ ಗುಣಮಟ್ಟಕ್ಕೆ ಹೋಲಿಸಿದರೆ, ತಯಾರಿಕಾ ವಲಯದಲ್ಲಿನ ಉದ್ಯೋಗಗಳ ಗುಣಮಟ್ಟ ಚೆನ್ನಾಗಿರುತ್ತದೆ’ ಎಂದು ವರದಿಯು ಉಲ್ಲೇಖಿಸಿದೆ. ಆದರೆ, ಸಿಎಂಐಇ ವರದಿ ಪ್ರಕಾರ, ಮೊದಲ ಲಾಕ್‌ಡೌನ್ ನಂತರದಲ್ಲಿ ತಯಾರಿಕಾ ವಲಯದಲ್ಲಿಯೇ ದೊಡ್ಡ ಮಟ್ಟದಲ್ಲಿ ಉದ್ಯೋಗ ನಷ್ಟ ಕಂಡುಬಂದಿದೆ.

2021ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ದೇಶದಲ್ಲಿ ತಿಂಗಳ ವೇತನ ಸಿಗುವ ಉದ್ಯೋಗಗಳ ಸಂಖ್ಯೆಯು 8.4 ಕೋಟಿಗೆ ಹೆಚ್ಚಳ ಆಗಿತ್ತು. ಆದರೆ, ನವೆಂಬರ್ ಮತ್ತು ಡಿಸೆಂಬರ್ ವೇಳೆಗೆ ಇಂತಹ ಉದ್ಯೋಗಗಳ ಸಂಖ್ಯೆಯು 7.7 ಕೋಟಿಗೆ ಇಳಿಕೆ ಆಗಿದೆ. ಡಿಸೆಂಬರ್‌ನಲ್ಲಿ ದೇಶದಲ್ಲಿ ಹೊಸದಾಗಿ 39 ಲಕ್ಷ ಉದ್ಯೋಗ ಸೃಷ್ಟಿ ಆಯಿತಾದರೂ, ಸಂಸ್ಥೆಯು ಸಿದ್ಧಪಡಿಸಿರುವ ವರದಿ ಪ್ರಕಾರ, ತಿಂಗಳ ವೇತನದ ಉದ್ಯೋಗಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿಲ್ಲ.

10ನೇ ಪುಟ ನೋಡಿ

ಎಲ್ಲ ವಿ.ವಿ, ಕಾಲೇಜುಗಳಿಗೆ ನಿರ್ದೇಶನ

‘ಡಿಜಿಲಾಕರ್’ ಖಾತೆಯಲ್ಲಿನ ದಾಖಲೆ ಸ್ವೀಕರಿಸಲು ಯುಜಿಸಿ ಸೂಚನೆ

ನವದೆಹಲಿ(ಪಿಟಿಐ): ‘ಡಿಜಿಲಾಕರ್’ ಖಾತೆಯಲ್ಲಿ ಲಭ್ಯವಿರುವ ಪದವಿ ಪ್ರಮಾಣಪತ್ರ, ಅಂಕಪಟ್ಟಿ ಹಾಗೂ ಇತರ ದಾಖಲೆಗಳು ಸಿಂಧುತ್ವ ಹೊಂದಿದ್ದು, ಅವುಗಳನ್ನು ಸ್ವೀಕರಿಸುವಂತೆ ಎಲ್ಲ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸೂಚಿಸಿದೆ.

ಈ ಸಂಬಂಧ ಎಲ್ಲ ವಿ.ವಿಗಳು ಹಾಗೂ ಕಾಲೇಜುಗಳಿಗೆ ಯುಜಿಸಿ ಪತ್ರ ಬರೆದಿದೆ.

‘ನ್ಯಾಷನಲ್ ಅಕಾಡೆಮಿಕ್ ಡೆಪಾಜಿಟರಿಯು (ಎನ್‌ಎಡಿ) ಪದವಿ ಪ್ರಮಾಣಪತ್ರಗಳು ಹಾಗೂ ಅಂಕಪಟ್ಟಿಗಳನ್ನು ಡಿಜಿಟಲ್‌ನ ಮೂನೆಯಲ್ಲಿ ಆನ್‌ಲೈನ್ ವಿಧಾನದಲ್ಲಿ ಸಂಗ್ರಹಿಸುವ ವ್ಯವಸ್ಥೆಯಾಗಿದೆ. ವಿದ್ಯಾರ್ಥಿಗಳು ಯಾವುದೇ ವೇಳೆಯಲ್ಲಿ ಹಾಗೂ ಎಲ್ಲಿಯೇ ಇದ್ದರೂ ಅಧಿಕೃತ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಪಡೆಯಲು ಇದರಿಂದ ಸಾಧ್ಯವಾಗಲಿದೆ’ ಎಂದು ವಿವರಿಸಿದೆ.



ಕೇಂದ್ರ ಶಿಕ್ಷಣ ಸಚಿವಾಲಯವು ‘ಎನ್‌ಎಡಿ’ ಯೋಜನೆ ಅನುಷ್ಠಾನಕ್ಕೆ ಯುಜಿಸಿಯನ್ನು ಅಧಿಕೃತ ಸಂಸ್ಥೆಯನ್ನಾಗಿ ನಿಯೋಜನೆ ಮಾಡಿದೆ. ‘ಡಿಜಿಲಾಕರ್’ ನೆರವಿನೊಂದಿಗೆ ಯುಜಿಸಿ ಈ ಯೋಜನೆಯನ್ನು ಜಾರಿಗೊಳಿಸಿದ್ದು, ಈ ಸೇವೆ ಪಡೆಯಲು ಬಳಕೆದಾರರು ಯಾವುದೇ ಶುಲ್ಕ ಭರಿಸಬೇಕಾಗಿಲ್ಲ.

ಶೈಕ್ಷಣಿಕ ಸಂಸ್ಥೆಗಳು ನೋಂದಣಿ ಮಾಡಿಸಿಕೊಂಡ ನಂತರ, ತಾವು ನೀಡುವ ಪದವಿಗಳ ಪ್ರಮಾಣಪತ್ರಗಳು, ಅಂಕಪಟ್ಟಿಗಳನ್ನು ಡಿಜಿಲಾಕರ್ ಎನ್‌ಎಡಿ ಪೋರ್ಟಲ್ ಮೂಲಕ ಎನ್‌ಎಡಿಯಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ.

ಹಳಿ ತಪ್ಪಿದ ಗೂಡ್ಸ್ ರೈಲು

ಬೆಂಗಳೂರು: ನಾಯಂಡಹಳ್ಳಿ-ಕೆಎಸ್‌ಆರ್ ರೈಲು ನಿಲ್ದಾಣದ ನಡುವಿನ ಮಾರ್ಗದಲ್ಲಿ ಸರಕು ಸಾಗಣೆ ರೈಲು ಹಳಿ ತಪ್ಪಿ ಕೆಲ ಕಾಲ ರೈಲು ಸಂಚಾರಕ್ಕೆ ತೊಡಕಾಗಿತ್ತು.

ರೈಲಿನ ನಾಲ್ಕು ಚಕ್ರಗಳು ಮಧ್ಯಾಹ್ನ 3.10ರ ವೇಳೆಗೆ ಹಳಿ ತಪ್ಪಿದ್ದವು. ಕೂಡಲೇ ಸರಿಪಡಿಸುವ ಕಾರ್ಯವನ್ನು ರೈಲು ಸಿಬ್ಬಂದಿ ಆರಂಭಿಸಿದರು. ಸಂಜೆ 5.34ರ ವೇಳೆಗೆ ಸರಿಪಡಿಸಲಾಯಿತು.

ರೈಲ್ವೆ ಮಾರ್ಗಕ್ಕಾಗಲಿ, ರೈಲಿನಲ್ಲಿ ಇದ್ದ ಸಿಬ್ಬಂದಿಗಾಗಲಿ ಯಾವುದೇ ತೊಂದರೆ ಆಗಿಲ್ಲ. ರೈಲು ಹಳಿ ತಪ್ಪಲು ಕಾರಣ ಏನು ಎಂಬುದನ್ನು ಪತ್ತೆ ಹಚ್ಚಲು ತನಿಖೆ ಆರಂಭಿಸಲಾಗಿದೆ ಎಂದು ನೈರುತ್ಯ ರೈಲ್ವೆ ಸ್ಪಷ್ಟಪಡಿಸಿದೆ.

‘ಪ್ರತಿಭೆಗೆ ಆಧುನಿಕ ತಂತ್ರಜ್ಞಾನ ವೇದಿಕೆಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ತಂತ್ರಜ್ಞಾನಗಳ ಆವಿಷ್ಕಾರದಿಂದ ಬರವಣಿಗೆ ಸುಲಭವಾಗಿದೆ. ಆನ್‌ಲೈನ್ ಯುಗದಲ್ಲಿ ಪ್ರತಿಭೆಗೆ ವೇದಿಕೆಗಳನ್ನು ಕಂಡುಕೊಂಡು, ವಿದ್ವತ್ತನ್ನು ಹೆಚ್ಚಿಸಿಕೊಳ್ಳಬೇಕು’ ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 55 ಯುವ ಬರಹಗಾರರ ಚೊಚ್ಚಲ ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು. ‘ಆನ್‌ಲೈನ್ ವೇದಿಕೆಗಳೂ ಬರವಣಿಗೆಗೆ ಅವಕಾಶಗಳನ್ನು ಒದಗಿಸುತ್ತಿವೆ. ಈ ಕಾಲದಲ್ಲಿ ಬರವಣಿಗೆಗೆ ವಿಪುಲ ಅವಕಾಶಗಳಿವೆ. ಸಾಕಷ್ಟು ಸಂಪನ್ಮೂಲಗಳೂ ಲಭ್ಯವಾಗುತ್ತವೆ. ನಮ್ಮ ಕೈಯಲ್ಲಿರುವ ಮೊಬೈಲ್ ಫೋನ್ ನೆರವಿನಿಂದ ಜಗತ್ತಿನ ಆಗುಹೋಗುಗಳನ್ನು ತಿಳಿದುಕೊಳ್ಳಬಹುದು. ಬರಹಗಾರರ ಪ್ರಥಮ ಕೃತಿಯ ಬಿಡುಗಡೆ ಚೊಚ್ಚಲ ಹೆರಿಗೆಯ ಸಂಭ್ರಮ ನೀಡಲಿದೆ. 1964ರಲ್ಲಿ ಪ್ರಕಟವಾದ ‘ನಾಗಶ್ರೀ’ ಕಾದಂಬರಿ ನನ್ನ ಚೊಚ್ಚಲ ಕೃತಿ’ ಎಂದು ತಿಳಿಸಿದರು.

ಕವಿ ಜಯಂತ ಕಾಯ್ಕಿಣಿ, ‘ಬರಹಗಾರ ಬದುಕಿನ ಕಟ್ಟಳೆಗಳಿಂದ ಹೊರಗೆ ಬಂದು ಬರೆಯಬೇಕು. ಬದುಕಿನ ಕಟ್ಟಳೆಗಳನ್ನು ಮುರಿದು ಬರೆದರೆ ಮಾತ್ರ ಅದು ಅನುಭವದ್ರವ್ಯವಾಗುತ್ತದೆ. ಕಟ್ಟಳೆಗಳು ಸೃಜನಶೀಲತೆಯನ್ನು ಕಟ್ಟಿಹಾಕುತ್ತದೆ. ತಾವು ಬರೆದದ್ದನ್ನು ತಾವೇ ವಿಮರ್ಶಿಸಿ, ಕಾವ್ಯ ಗುಣ-ದೋಷಗಳನ್ನು ಗುರುತಿಸಿದಾಗ ಮಾತ್ರ ಲೇಖಕ ಬೆಳೆಯಲು ಸಾಧ್ಯ. ಬರಹಗಾರರಿಗೆ ಓದುವ ಹವ್ಯಾಸ ಇರಬೇಕು. ಸಹಬಾಳ್ವೆ ಮತ್ತು ಸಮಾನ ಮನಸ್ಸು ಇದ್ದಾಗ ಮಾತ್ರ ಒಳ್ಳೆಯ ಸಾಹಿತ್ಯ ಸೃಷ್ಟಿಯಾಗುತ್ತದೆ’ ಎಂದು ಹೇಳಿದರು.

‘ಧಾರವಾಡದ ವಸತಿ ನಿಲಯದಲ್ಲಿ ರಾತ್ರಿ ಜೋಳದ ರೊಟ್ಟಿಗೆ ತಾಟು ಹಿಡಿದುಕೊಂಡು ನಿಂತಿದ್ದಾಗ ನನ್ನ ಮೊದಲ ಪುಸ್ತಕ ಪ್ರಕಟವಾದ ವಿಷಯ ತಿಳಿಯಿತು. ಪುಸ್ತಕ ಮಳಿಗೆಯಲ್ಲಿ ನನ್ನ ಪುಸ್ತಕ ನೋಡಿ ರೋಮಾಂಚನವಾಯಿತು. ಸ್ನೇಹಿತರೊಂದಿಗೆ ಪೂರಿ ಬಾಜಿ ತಿಂದು ಸಂಭ್ರಮಿಸಿದ್ದೆ’ ಎಂದು ಕಾಲೇಜು ದಿನಗಳನ್ನು ನೆನಪಿಸಿಕೊಂಡರು.



ಯುವ ಬರಹಗಾರರ ಚೊಚ್ಚಲ ಕೃತಿಗಳನ್ನು ಹಂ.ಪ. ನಾಗರಾಜಯ್ಯ ಬಿಡುಗಡೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಸೌಭಾಗ್ಯ, ಜಯಂತ ಕಾಯ್ಕಿಣಿ, ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಹಾಗೂ ಎಂ.ಎನ್. ನಂದೀಶ್ ಹಂಚೆ ಇದ್ದಾರೆ –ಪ್ರಜಾವಾಣಿ ಚಿತ್ರ

900 ಶಾಲಾ–ಕಾಲೇಜುಗಳಿಗೆ ಪುಸ್ತಕ

‘ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆಗೆ 221 ಹಸ್ತಪ್ರತಿಗಳು ಪ್ರಾಧಿಕಾರಕ್ಕೆ ಬಂದಿದ್ದವು. 135 ಹಸ್ತಪ್ರತಿಗಳು ಕವಿತೆಗೆ ಸಂಬಂಧಿಸಿವೆ. 55 ಹಸ್ತಪ್ರತಿಗಳನ್ನು ಬಿಡುಗಡೆಗೆ ಆಯ್ಕೆ ಮಾಡಿಕೊಳ್ಳಲಾಯಿತು. ಹೆಚ್ಚಿನವರು ಬರವಣಿಗೆ ಪ್ರಾರಂಭಿಸುವಾಗ ಕಾವ್ಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಯುವ ಬರಹಗರರು ಸಂಶೋಧನೆ ಮತ್ತು ಸಂಸ್ಕೃತಿಯ ಚಿಂತನೆಗೆ ಗಮನಹರಿಸಬೇಕು’ ಎಂದು ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ ತಿಳಿಸಿದರು.

‘ಈ ವರ್ಷ ಪ್ರಾಧಿಕಾರದಿಂದ ರಾಜ್ಯದ 900 ಶಾಲಾ–ಕಾಲೇಜುಗಳಿಗೆ ಪುಸ್ತಕಗಳನ್ನು ನೀಡಲಾಗುವುದು. ಒಂದು ಶಾಲೆ ಅಥವಾ ಕಾಲೇಜಿಗೆ ₹ 20 ಸಾವಿರ ಮೊತ್ತದಷ್ಟು ಪುಸ್ತಕಗಳನ್ನು ಕೊಡುತ್ತಿದ್ದೇವೆ’ ಎಂದು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಸ್ ರಸ್ತೆಯ ವೀರಭದ್ರನಗರ ವೃತ್ತದ ಬಳಿ ನಿತ್ಯವೂ ದಟ್ಟಣೆ: ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ಕಿರಿಕಿರಿ

ಸಾಲುಗಟ್ಟಿ ನಿಲ್ಲುವ ವಾಹನ: ಸವಾರರು ಹೈರಾಣ

• ಜಿ.ಶಿವಕುಮಾರ



ವೀರಭದ್ರನಗರ ವೃತ್ತದ ಬಳಿ ಶುಕ್ರವಾರ ಸಂಚಾರ ದಟ್ಟಣೆ —ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ಕೆಂಪು ದೀಪ ಬೆಳಗುವುದರೊಳಗೆ ದಟ್ಟಣೆಯಿಂದ ಪಾರಾಗಬೇಕೆಂಬ ಧಾವಂತದಲ್ಲಿ ಮುಂದಕ್ಕೆ ದಾಂಗುಡಿ ಇಡುವ ವಾಹನಗಳು. ಅಣತಿ ದೂರ ಕ್ರಮಿಸಿದೊಡನೆಯೇ ಧಕ್ಕನೆ ನಿಂತು ಮತ್ತೆ ಹಸಿರು ದೀಪದತ್ತ ದೃಷ್ಟಿ ನೆಟ್ಟು ಕಾಯುವ ಸವಾರರು...

ನೈಸ್ ರಸ್ತೆ ಬಳಿಯ ವೀರಭದ್ರನಗರ ವೃತ್ತದಲ್ಲಿ ಕಂಡುಬರುವ ದೃಶ್ಯವಿದು.

ರೇಷ್ಮೆ ಸಂಸ್ಥೆಯಿಂದ ಮೈಸೂರು ರಸ್ತೆ ವೃತ್ತಕ್ಕೆ ಸಂಪರ್ಕ ಬೆಸೆಯುವ ಈ ಹೊರ ವರ್ತುಲ ರಸ್ತೆಯಲ್ಲಿ ನಿತ್ಯವೂ ನೂರಾರು ವಾಹನಗಳು ಸಂಚರಿಸುತ್ತವೆ. ನಾಗರಬಾವಿಯಿಂದ ಬನಶಂಕರಿ, ಜೆ.ಪಿ.ನಗರ, ಕನಕಪುರ ಹೀಗೆ ನಗರದ ಪ್ರಮುಖ ಸ್ಥಳಗಳು ಹಾಗೂ ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ಬೆಸೆಯುವ ಈ ರಸ್ತೆ ವಾಹನಗಳಿಂದ ಸದಾ ಗಿಜಿಗುಡುತ್ತಿರುತ್ತದೆ. ಶಾಲೆ, ಕಾಲೇಜು, ಆಸ್ಪತ್ರೆ ಹಾಗೂ ಇತರ ಕಾರ್ಯಗಳಿಗೆ ಹೋಗುವವರೂ ಇದೇ ಮಾರ್ಗವನ್ನು ಅವಲಂಬಿಸುತ್ತಾರೆ. ಹೀಗಾಗಿ, ವೀರಭದ್ರನಗರ ವೃತ್ತದ ಬಳಿ ನಿತ್ಯವೂ ದಟ್ಟಣೆ ಉಂಟಾಗುತ್ತಿದೆ. ದಟ್ಟಣೆಯಲ್ಲಿ ಸಿಲುಕಿ ಪ್ರಯಾಣಿಕರು ಹೈರಾಣಾಗುವುದು ಸಾಮಾನ್ಯವಾಗಿದೆ.

ಇದು ಹೆಸರಿಗಷ್ಟೇ 'ಸಿಗ್ನಲ್ ಫ್ರಿ' ಕಾರಿಡಾರ್. ದಟ್ಟಣೆ ತಗ್ಗಿಸುವ ಉದ್ದೇಶದಿಂದ ಹೊಸಕೆರೆಹಳ್ಳಿ ಬಳಿಯ ಕೆ.ಇ.ಬಿ.ಜಂಕ್ಷನ್ ಹತ್ತಿರ 300 ಮೀಟರ್ ಉದ್ದದ ಮೇಲ್ಸೇತುವೆ

ಪ್ರಯಾಣ ಪ್ರಯಾಸ

ನಿರ್ಮಿಸಲಾಗಿದೆ. ಅದರಿಂದ ಹೇಳಿಕೊಳ್ಳುವಂತಹ ಪ್ರಯೋಜನ ಆಗಿಲ್ಲ. ಅಲ್ಲಿ ಏಕಮುಖ ಸಂಚಾರಕ್ಕಷ್ಟೇ ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಬನಶಂಕರಿ, ಕತ್ರಿಗುಪ್ಪೆ, ಜೆ.ಪಿ.ನಗರ, ಕುಮಾರಸ್ವಾಮಿ ಲೇಔಟ್ ಕಡೆಯಿಂದ ನಾಗರಬಾವಿ, ನಾಯಂಡಹಳ್ಳಿ ಹಾಗೂ ಕೆಂಗೇರಿ ಕಡೆ ಹೋಗುವವರಿಗೆ ಸಮಸ್ಯೆ ತಪ್ಪಿಲ್ಲ. ಈ ಭಾಗಗಳಿಂದ ಬರುವ ನೂರಾರು ವಾಹನಗಳು ಪಿಇಎಸ್ ವಿಶ್ವವಿದ್ಯಾಲಯ ದಾಟಿದೊಡನೆಯೇ ದಟ್ಟಣೆಯಲ್ಲಿ ಸಿಲುಕುತ್ತವೆ. ಮುಂಜಾನೆ ಹಾಗೂ ಸಂಜೆಯ ಹೊತ್ತಿನಲ್ಲಿ ಪಿಇಎಸ್ ವಿಶ್ವವಿದ್ಯಾಲಯದಿಂದ ವೀರಭದ್ರನಗರದವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ.

ಪ್ರಯೋಜನಕ್ಕಿಲ್ಲದ ಸರ್ವಿಸ್ ರಸ್ತೆ: ಪಿಇಎಸ್ ವಿಶ್ವವಿದ್ಯಾಲಯದಿಂದ ವೀರಭದ್ರನಗರ ವೃತ್ತದವರೆಗೂ ರಸ್ತೆಯ ಎರಡೂ ಬದಿಗಳಲ್ಲಿ 'ಸರ್ವಿಸ್' ರಸ್ತೆಗಳಿವೆ. ಅವುಗಳ ಸ್ಥಿತಿ ಶೋಚನೀಯವಾಗಿದೆ. ಈ ರಸ್ತೆಗಳಿಗೆ ಹಾಕಲಾಗಿರುವ ಡಾಂಬರು ಕಿತ್ತು ಹೋಗಿ ಜಲ್ಲಿ ಕಲ್ಲುಗಳೆಲ್ಲಾ ಹರಡಿಕೊಂಡಿವೆ. ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ರಸ್ತೆಯ ಇಕ್ಕೆಲಗಳಲ್ಲಿ ಗಿಡಗಂಟಿಗಳೂ ಬೆಳೆದುಕೊಂಡಿವೆ. ಆದ್ದರಿಂದ ವಾಹನ ಸವಾರರು ಅತ್ತ ತಿರುಗಿಯೂ ನೋಡುತ್ತಿಲ್ಲ. ಹೀಗಾಗಿ, ಈ ರಸ್ತೆಗಳು ತ್ಯಾಜ್ಯ ಸಂಗ್ರಹಿಸುವ ಟಿಪ್ಪರ್‌ಗಳ ನಿಲುಗಡೆ ತಾಣವಾಗಿ ಮಾರ್ಪಟ್ಟಿವೆ.

'ಸಂಜೆ ಹಾಗೂ ಬೆಳಿಗ್ಗೆಯ ಸಮಯದಲ್ಲಿ ಈ ರಸ್ತೆಯಲ್ಲಿ ಸಾಗುವುದೇ ದೊಡ್ಡ ಸವಾಲು. ಒಮ್ಮೊಮ್ಮೆ ಆಂಬುಲೆನ್ಸ್‌ಗಳೂ ದಟ್ಟಣೆಯಲ್ಲಿ ಸಿಲುಕಿ ಅದರೊಳಗಿರುವ ರೋಗಿಗಳೂ ಪರದಾಡಿದ ಉದಾಹರಣೆಗಳಿವೆ. ಈ ಸಮಸ್ಯೆಗೆ ಶೀಘ್ರವೇ ಮುಕ್ತಿ ದೊರೆಯಬೇಕು' ಎಂದು ವೀರಭದ್ರನಗರ ನಿವಾಸಿ ನಂಜುಂಡಸ್ವಾಮಿ ಆಗ್ರಹಿಸಿದರು.

'ಸರ್ವಿಸ್ ರಸ್ತೆ' ಸರಿಪಡಿಸಲು ಆಗ್ರಹ



'ದಟ್ಟಣೆ ನಿಯಂತ್ರಿಸುವ ಸಲುವಾಗಿ ಸರ್ವಿಸ್ ರಸ್ತೆ ನಿರ್ಮಿಸಲಾಗಿದೆ. ಆ ರಸ್ತೆಗಳು ಸಂಚಾರ ಯೋಗ್ಯವಾದರೆ ವಾಹನ ಸವಾರರು ಸಹಜವಾಗಿಯೇ ಆ ಮಾರ್ಗಗಳನ್ನು ಬಳಸುತ್ತಾರೆ. ಅದರಿಂದ ದಟ್ಟಣೆ ಸಮಸ್ಯೆಯೂ ನೀಗುತ್ತದೆ. ಈಗಲಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು ಅವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು' ಎಂದು ಗಿರಿನಗರ ನಿವಾಸಿ ಟಿ.ವಿನೋದ್ ಒತ್ತಾಯಿಸಿದರು.

'ದಟ್ಟಣೆಯಲ್ಲಿ ಸಿಲುಕುವ ವಾಹನಗಳು ವಿಷಯುಕ್ತ ಅನಿಲ ಹೊರ ಸೂಸುತ್ತವೆ. ಜೊತೆಗೆ ಕರ್ಕಶ ಶಬ್ದಗಳನ್ನೂ ಹೊರಹೊಮ್ಮಿಸುತ್ತವೆ. ಅದರಿಂದಾಗಿ ರಸ್ತೆಗೆ ಹೊಂದಿಕೊಂಡಂತಿರುವ ಬಡಾವಣೆಗಳ ನಿವಾಸಿಗಳು ವಿಷಗಾಳಿ ಸೇವಿಸುವಂತಾಗಿದೆ. ಅವರ ಆರೋಗ್ಯದ ಮೇಲೂ ದುಷ್ಪರಿಣಾಮಗಳು ಉಂಟಾಗುತ್ತಿವೆ' ಎಂದು ಅವರು ದೂರಿದರು. 'ವೀರಭದ್ರನಗರ ವೃತ್ತದಿಂದ ಕೆರೆಕೋಡಿ ಹಾಗೂ ಶ್ರೀನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಕಿರಿದಾಗಿವೆ. ಹೀಗಾಗಿ ಈ ರಸ್ತೆಗಳಲ್ಲಿಯೂ ದಟ್ಟಣೆ ಏರ್ಪಡುತ್ತದೆ. ಈ ರಸ್ತೆಗಳ ಅಗಲೀಕರಣ ಕಾರ್ಯ ನಡೆದರೆ ಎಲ್ಲರಿಗೂ ಅನುಕೂಲವಾಗುತ್ತದೆ' ಎಂದರು.

'ದ್ವಿಪಥ ಮೇಲ್ಸೇತುವೆ ನಿರ್ಮಾಣಕ್ಕೆ ಯೋಜನೆ'



'ಪಿಇಎಸ್ ವಿಶ್ವವಿದ್ಯಾಲಯದ ಎದುರಿನ ಸಿಗ್ನಲ್ ಬಳಿಯಿಂದ ವೀರಭದ್ರನಗರ ವೃತ್ತದವರೆಗೂ ದ್ವಿಪಥದ ಮೇಲ್ಸೇತುವೆ ನಿರ್ಮಿಸುವ ಸಂಬಂಧ ಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ಸೇತುವೆಯ ಇಕ್ಕೆಲಗಳಲ್ಲಿ ಸರ್ವಿಸ್ ರಸ್ತೆ ಕೂಡ ಇರಲಿದೆ. ಈಗಾಗಲೇ ಮಣ್ಣಿನ ಪರೀಕ್ಷೆಯನ್ನೂ ನಡೆಸಲಾಗಿದೆ. ಈ ಯೋಜನೆ ಪೂರ್ಣಗೊಂಡರೆ ಸಂಚಾರ ಸಮಸ್ಯೆ ತಪ್ಪಲಿದೆ' ಎಂದು ಸಿ.ವಿ.ಕಾಂಡ್ ಕನ್ಸಲ್ಟೆನ್ಸ್ ಕಂಪನಿಯ ಎಂಜಿನಿಯರ್ ವರುಣ್ ಕುಮಾರ್ ಹೇಳಿದರು.

'ಗಿರಿನಗರ, ಶ್ರೀನಗರ, ಆವಲಹಳ್ಳಿ ಹಾಗೂ ಇತರ ಬಡಾವಣೆಗಳಿಗೆ ಹೋಗುವವರು ಸರ್ವಿಸ್ ರಸ್ತೆ ಬಳಸಬಹುದು. ಈ ಭಾಗದ ಸಂಚಾರವನ್ನು ಅಧ್ಯಯನ ಮಾಡಲಾಗಿದೆ. ಮೇಲ್ಸೇತುವೆ ನಿರ್ಮಾಣದ ಬಳಿಕ ದಟ್ಟಣೆ ಎಷ್ಟು ತಗ್ಗಲಿದೆ, ವಾಯು ಮಾಲಿನ್ಯ ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗಲಿದೆ ಎಂಬುದರ ಕುರಿತೂ ಅಧ್ಯಯನ ನಡೆಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

ಯುಪಿಎಸ್‌ಸಿ: ಪ್ರವೇಶಪತ್ರ ತೋರಿಸಿದರೆ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) 2021ರ ನಾಗರಿಕ ಸೇವೆಯ ಮುಖ್ಯ ಪರೀಕ್ಷೆ ಜ.7ರಿಂದ ಆರಂಭವಾಗಿದೆ. ವಾರಾಂತ್ಯದ ಕರ್ಫ್ಯೂ ವೇಳೆ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಬಸ್‌ನಲ್ಲಿ ಪ್ರಯಾಣಿಸಲು ಅವಕಾಶ ಇದೆ ಎಂದು ಬಿಎಂಟಿಸಿ ಸ್ಪಷ್ಟಪಡಿಸಿದೆ.

ಜ.7, 8, 9, 15 ಮತ್ತು 16ರಂದು ಪರೀಕ್ಷೆ ನಡೆಯಲಿದೆ. ಶನಿವಾರ ಮತ್ತು ಭಾನುವಾರ ವಾರಾಂತ್ಯದ ಕರ್ಫ್ಯೂ ಇದ್ದರೂ ಪರೀಕ್ಷೆಗೆ ಹಾಜರಾಗುವ ಪರೀಕ್ಷಾರ್ಥಿಗಳಿಗೆ ತೊಂದರೆ ಆಗುವುದಿಲ್ಲ ಎಂದು ಸಂಸ್ಥೆ ಹೇಳಿದೆ. ಅಗತ್ಯ ಸೇವೆ ಒದಗಿಸುವ ಸಿಬ್ಬಂದಿ ಸಂಚಾರಕ್ಕೆ ಶೇ 10ರಷ್ಟು ಬಸ್‌ಗಳು ಕಾರ್ಯಾಚರಣೆ ಮಾಡಲಿವೆ. ಅದೇ ಬಸ್‌ಗಳಲ್ಲಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ಪರೀಕ್ಷಾರ್ಥಿಗಳು ಸಂಚಾರ ಮಾಡಬಹುದಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜರಗನಹಳ್ಳಿ ಕೆರೆ ಪ್ರದೇಶದಲ್ಲಿ ಸುರಿಯಲಾಗಿದ್ದ ತ್ಯಾಜ್ಯಕ್ಕೆ ಬೆಂಕಿ



ಬೆಂಗಳೂರು: ನಗರದ ಕನಕಪುರ ರಸ್ತೆಯಲ್ಲಿ ಜರಗನಹಳ್ಳಿ ಕೆರೆ ಪ್ರದೇಶದಲ್ಲಿ ಸುರಿಯಲಾಗಿದ್ದ ಗುರುವಾರ ರಾತ್ರಿ ಬೆಂಕಿ ಹೊತ್ತಿಕೊಂಡು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಸುಮಾರು ಒಂದು ಎಕರೆ ಪ್ರದೇಶದಲ್ಲಿ ಬೆಂಕಿ ವ್ಯಾಪಿಸಿಕೊಂಡಿತ್ತು. ರಾತ್ರಿ ಸುಮಾರು 10 ಗಂಟೆಗೆ ಬೆಂಕಿ ಕಾಣಿಸಿಕೊಂಡಿತು. ಬೆಂಕಿಯ ಜ್ವಾಲೆಗಳು ಇಡೀ ಪ್ರದೇಶವನ್ನು ಆವರಿಸಿಕೊಂಡಿತ್ತು. ಅಗ್ನಿಶಾಮಕ ಮತ್ತು ತುರ್ತು ಸೇವೆ ಸಿಬ್ಬಂದಿ ಬೆಂಕಿ ನಂದಿಸಲು ಅರ್ಧ ಗಂಟೆಗೂ ಹೆಚ್ಚು ಸಮಯ ತೆಗೆದುಕೊಂಡರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಈ ಕೆರೆ ಒಟ್ಟು ಆರು ಎಕರೆ ಪ್ರದೇಶ ಹೊಂದಿದೆ. ಹಲವು ವರ್ಷಗಳಿಂದ ತ್ಯಾಜ್ಯಗಳನ್ನು ಕೆರೆ ಆವರಣದಲ್ಲಿ ಸುರಿಯಲಾಗುತ್ತಿದೆ. ಇದರಿಂದ, ಸುಮಾರು 25 ಲಾರಿಯಷ್ಟು ತ್ಯಾಜ್ಯ ಇದೆ. ಕಟ್ಟಡ ತ್ಯಾಜ್ಯವನ್ನು ಸಹ ಇಲ್ಲಿ ಹಾಕಲಾಗಿದೆ. ಕೆರೆ ಒತ್ತುವರಿ ತೆರವುಗೊಳಿಸಿ ಸಂರಕ್ಷಣೆಗೆ ಜಿಲ್ಲಾಡಳಿತ ಕ್ರಮಕೈಗೊಳ್ಳಬೇಕು' ಎಂದು ಚೇಂಜ್ ಮೇಕರ್ಸ್ ಆಫ್ ಕನಕಪುರ ರೋಡ್‌ನ ಅಧ್ಯಕ್ಷ ಅಬ್ದುಲ್ ಅಲೀಂ ಒತ್ತಾಯಿಸಿದ್ದಾರೆ.

ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿಕೆ


ಅಪರಾಧ ಪ್ರಕರಣಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದಿನ ವರ್ಷಗಳಿಗೆ ಹೋಲಿಸಿದರೆ 2021ರಲ್ಲಿ ಬೆಂಗಳೂರಿನಲ್ಲಿ ಅಪರಾಧ ಚಟುವಟಿಕೆಗಳು ಕಡಿಮೆಯಾಗಿವೆ. ಉದ್ಯಾನ ನಗರಿಯು ಈಗ ಸುರಕ್ಷಿತ ನಗರವಾಗಿ ಮಾರ್ಪಟ್ಟಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು 'ನಟ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿಧನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು. 2020ಕ್ಕೆ ಹೋಲಿಸಿದರೆ 2021ರಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ. ಶೇ 99ರಷ್ಟು ಪ್ರಕರಣಗಳನ್ನು ನಮ್ಮ ಸಿಬ್ಬಂದಿ ಬೇಧಿಸಿದ್ದಾರೆ' ಎಂದು ತಿಳಿಸಿದರು.

'ಮಹಿಳೆಯರ ಭದ್ರತೆಯ ಸಲುವಾಗಿ ಕೇಂದ್ರ ಸರ್ಕಾರವು ನಿರ್ಭಯಾ ನಿಧಿಯ ಅಡಿಯಲ್ಲಿ ಬಿಡುಗಡೆ ಮಾಡಿದ್ದ ಅನುದಾನ ಸದುಪಯೋಗಪಡಿಸಿಕೊಳ್ಳಲಾಗಿದೆ. ಇದರ ಅಡಿಯಲ್ಲಿ 'ಸೇಫ್ ಸಿಟಿ' ಯೋಜನೆ ಆರಂಭಿಸಲಾಗಿದೆ. ₹497 ಕೋಟಿ ವೆಚ್ಚದ ಗುತ್ತಿಗೆಯನ್ನು ಹನಿವೆಲ್ ಕಂಪನಿಗೆ ನೀಡಲಾಗಿದೆ. ಕಮಿಷನರ್ ಕಚೇರಿಯ ಪಕ್ಕದಲ್ಲಿ ಶೀಘ್ರವೇ 'ಕಮಾಂಡ್ ಸೆಂಟರ್' ತಲೆ ಎತ್ತಲಿದೆ. ನೊಂದ ಮಹಿಳೆಯರು, ಮಕ್ಕಳಿಗೆ ಈ ಕೇಂದ್ರದಲ್ಲಿ ವಸತಿ ಸೌಲಭ್ಯದ ಜೊತೆಗೆ ಕಾನೂನು ಸಲಹೆಗಾರರ ನೆರವು ನೀಡಲಾಗುತ್ತದೆ. ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆಯೂ ಇರಲಿದೆ' ಎಂದು ಮಾಹಿತಿ ನೀಡಿದರು.







ಕಮಲ್ ಪಂತ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ ಇದ್ದಾರೆ—ಪ್ರಜಾವಾಣಿ ಚಿತ್ರ

7 ದಿನಗಳಲ್ಲಿ 19,568 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಈ ತಿಂಗಳ ಏಳು ದಿನಗಳಲ್ಲಿ 19,568 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಶುಕ್ರವಾರ 6,812 ಕೋವಿಡ್ ಪ್ರಕರಣಗಳು ಖಚಿತಪಟ್ಟಿವೆ. 7 ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ನಗರದಲ್ಲಿ ಈವರೆಗೆ ವರದಿಯಾದ ಪ್ರಕರಣಗಳ ಒಟ್ಟು ಸಂಖ್ಯೆ 12.83 ಲಕ್ಷ ದಾಟಿದೆ. ಸೋಂಕಿತರಾದವರಲ್ಲಿ ಈವರೆಗೆ 12.41 ಲಕ್ಷ ಮಂದಿ ಗುಣಮುಖರಾಗಿದ್ದಾರೆ. ಸದ್ಯ 25,370 ಸಕ್ರಿಯ ಪ್ರಕರಣಗಳಿವೆ.

ಸೋಂಕಿತರ ಸಂಖ್ಯೆ ಏರಿಕೆ ಕಂಡರೂ ಮರಣ ಪ್ರಮಾಣ ದರ ನಿಯಂತ್ರಣದಲ್ಲಿದೆ. ಏಳು ದಿನಗಳಲ್ಲಿ 17 ಮರಣ ಪ್ರಕರಣಗಳು ದೃಢಪಟ್ಟಿವೆ.

ಸರ್ಕಾರಿ ಕೋಟಾ: ಹಾಸಿಗೆ ಲಭ್ಯತೆ ವಿವರ (ಜ.07)

ವಿವಿಧ ಮಾದರಿ ಒಟ್ಟು ಹಾಸಿಗೆಗಳು	1,836
ದಾಖಲಾದವರು	166
ಬ್ಲಾಕ್ ಮಾಡಲಾಗಿರುವ ಹಾಸಿಗೆಗಳು	03
ಲಭ್ಯವಿರುವ ವಿವಿಧ ಮಾದರಿ ಒಟ್ಟು ಹಾಸಿಗೆಗಳು	1,667
ಸಾಮಾನ್ಯ ಹಾಸಿಗೆ ವಿವರ	
ಒಟ್ಟು ಸಾಮಾನ್ಯ ಹಾಸಿಗೆಗಳು	684
ದಾಖಲಾದವರು	73
ಬ್ಲಾಕ್ ಮಾಡಿರುವ ಹಾಸಿಗೆಗಳು	02
ಲಭ್ಯವಿರುವ ಹಾಸಿಗೆಗಳು	609
ಎಚ್‌ಡಿಯು ಹಾಸಿಗೆ ವಿವರ	
ಒಟ್ಟು ಎಚ್‌ಡಿಯು ಹಾಸಿಗೆ	831
ದಾಖಲಾದವರು	64
ಬ್ಲಾಕ್ ಮಾಡಿರುವ ಹಾಸಿಗೆ	01
ಲಭ್ಯವಿರುವ ಹಾಸಿಗೆಗಳು	766
ಐಸಿಯು ಹಾಸಿಗೆ ವಿವರ	
ಒಟ್ಟು ಐಸಿಯು ಹಾಸಿಗೆಗಳು	114
ದಾಖಲಾದವರು	20
ಬ್ಲಾಕ್ ಮಾಡಿರುವ ಹಾಸಿಗೆ	00
ಲಭ್ಯವಿರುವ ಒಟ್ಟು ಹಾಸಿಗೆ	94
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ವಿವರ	
ಒಟ್ಟು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	207
ದಾಖಲಾದವರು	09
ಬ್ಲಾಕ್ ಮಾಡಿರುವ ಹಾಸಿಗೆ	00
ಲಭ್ಯವಿರುವ ಹಾಸಿಗೆ	198

*ಆಧಾರ: ಬಿಬಿಎಂಪಿ ಹಾಸಿಗೆ ಹಂಚಿಕೆ ಪೋರ್ಟಲ್

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,83,186 ಒಟ್ಟು ಸೋಂಕಿತರು (12,76,374 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
25,370	12,41,398	16,417

ದಿನದ ಏರಿಕೆ

ಹೊಸ ಪ್ರಕರಣ	6,812
ಗುಣಮುಖ	352
ಸಾವು	03

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

- ಇಟಲಿಯ ರೋಮ್‌ನಿಂದ ಅಮೃತಸರಕ್ಕೆ ಶುಕ್ರವಾರ ಬಂದ ವಿಮಾನದಲ್ಲಿದ್ದವರ ಪೈಕಿ ಕನಿಷ್ಠ 173 ಪ್ರಯಾಣಿಕರಿಗೆ ಕೋವಿಡ್ ದೃಢಪಟ್ಟಿದೆ
- ದೆಹಲಿಯಲ್ಲಿ ಹೊಸದಾಗಿ 17,335, ಮುಂಬೈ- 20,971, ಪಶ್ಚಿಮ ಬಂಗಾಳ-18,213 ಪ್ರಕರಣಗಳು ವರದಿ
- ಒಡಿಶಾದ ಪುರಿಯಲ್ಲಿರುವ ಪ್ರಸಿದ್ಧ ಜಗನ್ನಾಥ ದೇವಸ್ಥಾನ ಜ.31ರ ವರೆಗೆ ಬಂದ್
- ಬ್ರಿಟನ್: ಸಿಬ್ಬಂದಿ ಕೊರತೆ– ಆಸ್ಪತ್ರೆಗಳಲ್ಲಿ ಸೇವೆಗೆ ಸೈನಿಕರ ನಿಯೋಜನೆ

ಆಸ್ಪತ್ರೆಯಿಂದ ಕೋವಿಡ್ ರೋಗಿ ನಾಪತ್ತೆ


ಬೆಂಗಳೂರು: ಕೋವಿಡ್ ದೃಢಪಟ್ಟಿದ್ದ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಪುತ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ತಾಲ್ಲೂಕಿನ ಖಾಸಗಿ ಆಸ್ಪತ್ರೆಯಿಂದ ಆಶ್ಚರ್ಯಕರ ರೀತಿಯಲ್ಲಿ ಪರಾರಿಯಾಗಿದ್ದಾರೆ.

ಆದಿತ್ಯ ವಿರ್ಾಣಿ (28) ಪರಾರಿಯಾಗಿದ್ದು, ಮನೆಯಲ್ಲಿ ಪ್ರತ್ಯೇಕವಾಗಿ ವಾಸವಾಗಿರುವುದು ಗೊತ್ತಾಗಿದೆ. ಕೋವಿಡ್–19 ಸೋಂಕಿನಿಂದ ಗುಣಮುಖರಾಗುವವರೆಗೂ ಮನೆಯಲ್ಲೇ ಪ್ರತ್ಯೇಕವಾಗಿ ಇರುವುದಾಗಿ ಆರೋಗ್ಯ ಅಧಿಕಾರಿಗಳಿಗೆ ಆದಿತ್ಯ ತಿಳಿಸಿದ್ದಾರೆ.

ಜನವರಿ 3ರಂದು ಬ್ರಿಟನ್‌ನಿಂದ ಬಂದಿದ್ದ ಇವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ಕೋವಿಡ್ ದೃಢಪಟ್ಟಿತ್ತು. ಅದೇ ದಿನ ಅವರನ್ನು ದೊಡ್ಡಬಳ್ಳಾಪುರದ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಎಂದು ಪೊಲೀಸ್ ಮತ್ತು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಆದರೆ, ಅಂದೇ ಮಧ್ಯಾಹ್ನ 11.55 ಮತ್ತು 12 ಗಂಟೆ ನಡುವೆ, ಯಾರಿಗೂ ಗೊತ್ತಾಗದಂತೆ ಆಸ್ಪತ್ರೆಯಿಂದ ಪರಾರಿಯಾಗಿದ್ದಾರೆ. ಈ ಬಗ್ಗೆ ದೊಡ್ಡಬಳ್ಳಾಪುರ ಪೊಲೀಸರಿಗೆ ಜ.4ರಂದು ಆಸ್ಪತ್ರೆಯಿಂದ ದೂರು ಸಲ್ಲಿಸಲಾಗಿದ್ದು, ಎಫ್‌ಐಆರ್ ದಾಖಲಾಗಿದೆ.

'ಆದಿತ್ಯ ವಿರ್ಾಣಿ ಆಸ್ಪತ್ರೆಗೆ ಮರಳುವುದಾಗಿ ಭರವಸೆ ನೀಡಿದ್ದರು. ಆದರೆ, ವಾಪಸ್ ಬರಲಿಲ್ಲ. ಬದಲಾಗಿ, ಆರೋಗ್ಯ ಮತ್ತು ಇತರ ಇಲಾಖೆ ಅಧಿಕಾರಿಗಳ ಜತೆ ಸಂಪರ್ಕ ಸಾಧಿಸಿ ಮನೆಯಲ್ಲೇ ಪ್ರತ್ಯೇಕವಾಗಿ ಇರುವ ಬಗ್ಗೆ ಮನವರಿಕೆ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.



₹2 ಕೋಟಿ ಮೌಲ್ಯದ ಕೈಗಡಿಯಾರಗಳ ಕಳವು

ಬೆಂಗಳೂರು: ಅಂಗಡಿಯೊಂದರ ಬಾಗಿಲು ಮುರಿದ ದುಷ್ಕರ್ಮಿಗಳು ಅದರಲ್ಲಿಟ್ಟಿದ್ದ ₹2 ಕೋಟಿ ಮೌಲ್ಯದ ಕೈಗಡಿಯಾರಗಳನ್ನು ಕದ್ದು ಪರಾರಿಯಾಗಿದ್ದಾರೆ. ಈ ಸಂಬಂಧ ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಫ್ರೇಜರ್ ಟೌನ್ ನಿವಾಸಿಯಾಗಿರುವ ಶಾಮೋಯಿಲ್ ಎಂಬುವರು 100 ಅಡಿ ರಸ್ತೆಯ ಬದಿಯಲ್ಲಿ ಜಿಮ್ಸನ್ ಟೈಮ್ಸ್ ಹೆಸರಿನ ಅಂಗಡಿಯೊಂದನ್ನು ನಡೆಸುತ್ತಿದ್ದರು. ಮಂಗಳವಾರ ರಾತ್ರಿ ಅವರು ಅಂಗಡಿ ಬಾಗಿಲು ಹಾಕಿ ಮನೆಗೆ ಹೋಗಿದ್ದರು. ಈ ವೇಳೆ ಬಾಗಿಲು ಮುರಿದು ಒಳಗೆ ನುಗ್ಗಿರುವ ದುಷ್ಕರ್ಮಿಗಳು 129 ರ್ಯಾಡೊ, 29 ಲಾಂಗಿನೆಸ್ ಮತ್ತು 13 ಓಮೆಗಾ ವಾಚ್‌ಗಳನ್ನು ಕದ್ದೊಯ್ದಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ನಾನು ಬಾಡಿಗೆ ಕಟ್ಟಡವೊಂದರಲ್ಲಿ ಅಂಗಡಿ ನಡೆಸುತ್ತಿದ್ದೆ. ಕಟ್ಟಡದ ಮಾಲೀಕರು ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಕೆಳಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಕೂಡಲೇ ಅವರು ನನಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ನೋಡಿದಾಗ ದುಬಾರಿ ಬೆಲೆಯ ಕೈಗಡಿಯಾರಗಳು ಕಳವಾಗಿದ್ದವು ಎಂದು ಶಾಮೋಯಿಲ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಅವರು ಹೇಳಿದರು.

'ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಶ್ವಾನ ದಳದ ಸಿಬ್ಬಂದಿ ಅಂಗಡಿ ಸುತ್ತಲಿನ ಪ್ರದೇಶಗಳಲ್ಲಿ ಸಂಚರಿಸಿ ಪರಿಶೀಲಿಸಿದ್ದು ಅವರಿಗೆ ಕಳ್ಳರ ಕೆಲ ಕುರುಹುಗಳು ಸಿಕ್ಕಿವೆ. ಅಂಗಡಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳನ್ನೂ ಪರಿಶೀಲಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಇಬ್ಬರು ಸಾವು

ಬೆಂಗಳೂರು: ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿಯಾಗಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಗಳಿಬ್ಬರು ಮೃತಪಟ್ಟಿದ್ದಾರೆ. ಬನಶಂಕರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬ್ಯಾಟರಾಯನಪುರ ನಿವಾಸಿಗಳಾದ ಲಕ್ಷ್ಮೀಶ (28) ಹಾಗೂ ರಾಘವೇಂದ್ರ (26) ಮೃತಪಟ್ಟವರು. ಇವರು ಸ್ನೇಹಿತರಾದ ರಕ್ಷಿತ್ ಹಾಗೂ ಗೌತಮ್ ಅವರೊಂದಿಗೆ ಗುರುವಾರ ರಾತ್ರಿ ನಾಗರಬಾವಿಯ ರೆಸ್ಟೋರೆಂಟ್‌ವೊಂದಕ್ಕೆ ಹೋಗಿ ಪಾರ್ಟಿ ಮಾಡಿದ್ದರು. ಅಲ್ಲಿಂದ ನಾಲ್ವರೂ ಬೈಕ್‌ನಲ್ಲಿ ಮನೆಗೆ ಮರಳುತ್ತಿದ್ದ ವೇಳೆ ಘಟನೆ ನಡೆದಿದೆ' ಎಂದು ಪೊಲೀಸರು ಹೇಳಿದರು.

'ಮತಾಂತರ: 13 ಸುಳ್ಳು ಪ್ರಕರಣ'

ಬೆಂಗಳೂರು: 'ಮತಾಂತರ ಮಾಡಿರುವ ಆರೋಪದಡಿ ಕ್ರೈಸ್ತರ ಮೇಲೆ 2021ರಲ್ಲಿ 13 ಸುಳ್ಳು ಪ್ರಕರಣಗಳನ್ನು ದಾಖಲಿಸಿರುವುದಾಗಿ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಂಘಟನೆಯ ಅಧ್ಯಯನ ತಿಳಿಸಿದೆ. ಈ ಕಾರಣದಿಂದ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಯಾಗಬಾರದು' ಎಂದು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಅಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ಆಗ್ರಹಿಸಿದರು. ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಸರ್ಕಾರ ತರಾತುರಿಯಲ್ಲಿ ಮತಾಂತರ ನಿಷೇಧ ಕಾಯ್ದೆ ತರಲು ಹೊರಟಿದೆ. ಇದು, ಧಾರ್ಮಿಕ ಅಲ್ಪಸಂಖ್ಯಾತರನ್ನು ಆತಂಕ ಮತ್ತು ಭಯದ ವಾತಾವರಣದಲ್ಲಿ ಸಿಲುಕಿಸುವ ಷಡ್ಯಂತ್ರ' ಎಂದು ಆರೋಪಿಸಿದರು.

'ಧರ್ಮದ ಹೆಸರಿನಲ್ಲಿ ಅಮಾಯಕರನ್ನು ಹಿಂಸಿಸುವ ಈ ಕಾಯ್ದೆ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿದೆ. ಕಾಯ್ದೆಯ ಮೂಲಕ ಹಿಂದುತ್ವವನ್ನು ಕಾರ್ಯಗತಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ಅಲ್ಪಸಂಖ್ಯಾತರ ಮತಗಳನ್ನು ಸೆಳೆಯಲು ಕಾಯ್ದೆಯನ್ನು ವಿರೋಧಿಸುವ ನಾಟಕ ಆಡುತ್ತಿದ್ದಾರೆ' ಎಂದು ದೂರಿದರು.

₹30 ಲಕ್ಷ ಕದ್ದು ನೌಕರ ಪರಾರಿ

ಬೆಂಗಳೂರು: ಎಲೆಕ್ಟ್ರಿಕಲ್ ಅಂಗಡಿಯೊಂದರಲ್ಲಿ ಕೆಲಸಕ್ಕಿದ್ದ ನೌಕರನೊಬ್ಬ, ಮಾಲೀಕರು ಇಲ್ಲದ ಸಮಯದಲ್ಲಿ ಅಂಗಡಿಯಲ್ಲಿಟ್ಟಿದ್ದ ₹30 ಲಕ್ಷ ನಗದು ಕದ್ದು ಪರಾರಿಯಾಗಿದ್ದಾನೆ. ಈ ಸಂಬಂಧ ಸಿಟಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಯಚಂದ್ರ ಎಂಬುವರು ಚಿಕ್ಕಪೇಟೆಯಲ್ಲಿ ಎಲೆಕ್ಟ್ರಿಕಲ್ ಅಂಗಡಿ ಇಟ್ಟುಕೊಂಡಿದ್ದರು. ₹30 ಲಕ್ಷ ತಂದು ಅಂಗಡಿಯಲ್ಲೇ ಇಟ್ಟಿದ್ದರು. ಅವರು 2021ರ ಡಿ. 21ರಂದು ಕೆಲಸದ ನಿಮಿತ್ತ ಹೊರಗೆ ಹೋಗಿದ್ದಾಗ ಹಣ ಎತ್ತಿಕೊಂಡು ಆರೋಪಿ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದರು.



ಅಂತರಂಗ ಸಂಸ್ಥೆಯು ಗಾಯನ ಸಮಾಜದಲ್ಲಿ ಶುಕ್ರವಾರ ಆಯೋಜಿಸಿದ್ದ 'ಹಾಸ್ಯಮೇಳ' ಕಾರ್ಯಕ್ರಮದಲ್ಲಿ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಸಂಯೋಜಕ ಟಿ.ಅಚ್ಯುತ್ ರಾವ್ ಪದಕಿ, ಅಂತರಂಗದ ಅಧ್ಯಕ್ಷ ಮಂಜು, ಕಾರ್ಯದರ್ಶಿ ಅಂಕಲ್ ಶ್ಯಾಂ, ಹಾಸ್ಯಕಲಾವಿದರಾದ ಎನ್.ರಾಮನಾಥ್, ಎಂ.ಎಸ್.ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್, ಕವಿ ಡುಂಡಿರಾಜ್, ಮಿಮಿಕ್ರಿ ಗೋಪಿ ಹಾಗೂ ಇತರರು ಇದ್ದಾರೆ —ಪ್ರಜಾವಾಣಿ ಚಿತ್ರ

ಅಪರಾಧ ಸುದ್ದಿ

ಲಂಚ ಸ್ವೀಕಾರ: 'ಬಿ ಟಿ.ವಿ' ಸಿಬ್ಬಂದಿ ಬಂಧನ

ಬೆಂಗಳೂರು: ಮಾನಹಾನಿಕರ ಸುದ್ದಿಯೊಂದನ್ನು ಬಿತ್ತರಿಸುವುದಾಗಿ ಬೆದರಿಸಿ ವ್ಯಕ್ತಿಯೊಬ್ಬರಿಂದ ₹20 ಲಕ್ಷ ಲಂಚ ಪಡೆದಿದ್ದ 'ಬಿ ಟಿ.ವಿ' ಸುದ್ದಿ ವಾಹಿನಿಯ ಸಿಬ್ಬಂದಿ ತೀರ್ಥಪ್ರಸಾದ್ ಎಂಬಾತನನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದೊಡ್ಡಗುಬ್ಬಿ ಮುಖ್ಯ ರಸ್ತೆ ಬಳಿ ವಾಸವಿರುವ ಅನಿಲ್‌ಕುಮಾರ್ ಎಂಬುವರು ನೀಡಿರುವ ದೂರಿನ ಮೇಲೆ ಮುಖ್ಯ ಆರೋಪಿ ತೀರ್ಥಪ್ರಸಾದ್‌ನನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳಾದ ಕುಮಾರ್, ಶಿವಸ್ವಾಮಿ, ರಮೇಶ್ ಗೌಡ ಹಾಗೂ ಶ್ರೀಧರ್ ಎಂಬುವರನ್ನು ವಿಚಾರಣೆಗೆ ಒಳಪಡಿಸುವುದು ಬಾಕಿ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 384, 504, 506ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇವರನ್ನು ಇದೇ 7ರಿಂದ 13ರವರೆಗೆ ಪೊಲೀಸ್ ಕಸ್ಟಡಿಗೆ ನೀಡುವಂತೆ 11ನೇ ಎ.ಸಿ.ಎಂ.ಎಂ. ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

'ಬಂಧಿತ ತೀರ್ಥಪ್ರಸಾದ್ ನಮ್ಮ ಸಿಬ್ಬಂದಿಯಲ್ಲ. ಕೆಲ ತಿಂಗಳುಗಳ ಹಿಂದೆ ಆತನನ್ನು ಕೆಲಸದಿಂದ ತೆಗೆದು ಹಾಕಲಾಗಿದೆ' ಎಂದು ಬಿ ಟಿ.ವಿ ಸುದ್ದಿವಾಹಿನಿಯ ಆಡಳಿತ ಮಂಡಳಿ ಸ್ಪಷ್ಟನೆ ನೀಡಿದೆ.

ಉತ್ತರಹಳ್ಳಿ ಭುವನೇಶ್ವರಿನಗರದ ಕೊಳೆಗೇರಿ ಕುಟುಂಬಗಳು ಆತಂತ್ರ ● ಹಣ ಪಡೆದು ಮನೆ ಹಂಚಲು ಹುನ್ನಾರ

ಒಕ್ಕಲೆಬ್ಬಿಸುವ ಆತಂಕದಲ್ಲಿ 334 ಕುಟುಂಬ!

● ವಿಜಯಕುಮಾರ್ ಎಸ್.ಕೆ.



ಭುವನೇಶ್ವರಿನಗರದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ ಮನೆಗಳು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಉತ್ತರಹಳ್ಳಿ ಭುವನೇಶ್ವರಿನಗರದ ಕೊಳೆಗೇರಿಯಲ್ಲಿ ಸರ್ಕಾರ ನಿರ್ಮಿಸಿರುವ ಬಹುಮಹಡಿ ಕಟ್ಟಡಗಳಲ್ಲಿ ವಾಸ ಇರುವ 334 ಕುಟುಂಬಗಳು ಒಕ್ಕಲೆಬ್ಬಿಸುವ ಆತಂಕದಲ್ಲಿವೆ. ಹಾಲಿ ವಾಸ ಇರುವವರನ್ನು ಒಕ್ಕಲೆಬ್ಬಿಸಿ ಬೇರೆಯವರಿಂದ ಹಣ ಪಡೆದು ಮನೆಗಳನ್ನು ವಿತರಿಸುವ ಹುನ್ನಾರ ನಡೆಯುತ್ತಿದೆ ಎಂದು ನಿವಾಸಿಗಳು ಕಣ್ಣೀರಿಡುತ್ತಿದ್ದಾರೆ.

ಭುವನೇಶ್ವರಿನಗರದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ಕಟ್ಟಿಕೊಡುವ ಪ್ರಕ್ರಿಯೆ 2011ರಿಂದ ಆರಂಭವಾಗಿದೆ. ಗುಡಿಸಲು, ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸವಿದ್ದ ಜನರನ್ನು ಬೇರೆಡೆ ಸ್ಥಳಾಂತರಿಸಿ ಅದೇ ಜಾಗದಲ್ಲಿ ನಾಲ್ಕು ಮತ್ತು ಐದು ಅಂತಸ್ತಿನ 47 ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ 47 ಬ್ಲಾಕ್‌ಗಳಲ್ಲಿ 880 ಮನೆಗಳಿವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಂದ ₹28 ಸಾವಿರ ಮತ್ತು ಇತರ ಸಮುದಾಯದವರಿಂದ ₹33,600 ಪಾವತಿಸಿಕೊಂಡು ಮನೆ ವಿತರಿಸುವುದು ಯೋಜನೆಯ ಉದ್ದೇಶ. ಅದರಂತೆ 421 ನಿವಾಸಿಗಳು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಡಿ.ಡಿ ಮೂಲಕ ಹಣ ಪಾವತಿಸಿದ್ದಾರೆ.

ಮನೆ ನಿರ್ಮಾಣ ಮಾಡಿದ ವೇಳೆಯ ಪಟ್ಟಿಗೂ ಸದ್ಯ ವಾಸ ಇರುವ ನಿವಾಸಿಗಳ ಪಟ್ಟಿಗೂ ವ್ಯತ್ಯಾಸ ಇದೆ. ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದ ಕೆಲವರು ಹಣ ಪಾವತಿಸಲು ಸಾಧ್ಯವಾಗಿಲ್ಲ. ಮನೆ ನಿರ್ಮಿಸುವಾಗ ಒಂದು ಕುಟುಂಬ ಇದ್ದದ್ದು ದಿನ ಕಳೆದಂತೆ ಮಕ್ಕಳು ದೊಡ್ಡವರಾಗಿ ಮೂರು, ನಾಲ್ಕು ಕುಟುಂಬ ಆಗಿವೆ. 880 ಮನೆಗಳು ಲಭ್ಯ ಇರುವುದರಿಂದ ಖಾಲಿ ಇರುವ ಮನೆಗಳಲ್ಲಿ ಹಲವರು ಈಗಾಗಲೇ ವಾಸವಿದ್ದಾರೆ. ಅಲ್ಲದೇ ಕೊಳೆಗೇರಿ ಅಭಿವೃದ್ಧಿ ಮಂಡಳಿ ಹೆಸರಿಗೆ ಡಿ.ಡಿ ತೆಗೆದು ಹಣ ಪಾವತಿಸಿದ್ದಾರೆ.

'ಡಿ.ಡಿ ಪ್ರತಿಯನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸಲ್ಲಿಸಿದ್ದರೂ ಸ್ವೀಕೃತಿ ಪತ್ರ ನೀಡಿಲ್ಲ. ಇದೇ ಕೊಳೆಗೇರಿಯಲ್ಲಿ ಹಲವಾರು ವರ್ಷಗಳಿಂದ ವಾಸವಿರುವ ನಮ್ಮನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಯುತ್ತಿದೆ. ಈಗಾಗಲೇ ವಾಸ ಇರುವವರನ್ನು ಬಿಟ್ಟು ಬೇರೆ ಬೇರೆ ಕಡೆಯಿಂದ ಕರೆತಂದು ಮನೆಗಳ ಹಕ್ಕುಪತ್ರ ನೀಡಲು ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಹೊರಟಿದ್ದಾರೆ' ಎಂದು ನಿವಾಸಿಗಳು ಅಳಲು ತೋಡಿಕೊಂಡರು.

'ಪೊಲೀಸರ ನೆರವು ಪಡೆದು ನಮ್ಮನ್ನು ಹೊರದಬ್ಬಲು ಸಂಚು ನಡೆಸುತ್ತಿರುವ ಮಾಹಿತಿಯೂ ಇದೆ. ಯಾವುದೇ ಕಾರಣಕ್ಕೂ ಇದಕ್ಕೆ ಅವಕಾಶ ಕೊಡುವುದಿಲ್ಲ. ಹಾಗೊಂದು ವೇಳೆ ಸರ್ಕಾರ ದಬ್ಬಾಳಿಕೆ ನಡೆಸಿದರೆ ಇದೇ ಸ್ಥಳದಲ್ಲಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ. ಮನೆ ಇಲ್ಲದೆ ಜೀವನ ನಡೆಸುವುದಾದರೂ ಹೇಗೆ, ಅದರ ಬದಲು ನಾವು ಸಾಯುವುದೇ ಮೇಲು' ಎಂದು ಮನೆಗೆಲಸ ಮಾಡಿಕೊಂಡು ಜೀವನ ನಡೆಸುತ್ತಿರುವ ಮಹಿಳೆಯೊಬ್ಬರು ಕಣ್ಣೀರಿಟ್ಟರು.

'ಸ್ಥಳೀಯರಿಗೆ ಅನ್ಯಾಯವಾಗದು'

'ಕಟ್ಟಡಗಳನ್ನು ನಿರ್ಮಿಸುವುದಕ್ಕೂ ಮುನ್ನ ಈ ಸ್ಥಳದಲ್ಲಿ ವಾಸವಿದ್ದ 450 ಕುಟುಂಬಗಳಿಗೆ ಈಗಾಗಲೇ ಮನೆಗಳನ್ನು ವಿತರಿಸಲಾಗಿದೆ. ಬಾಕಿ ಇರುವ ಕುಟುಂಬಗಳಲ್ಲಿ ಸ್ಥಳೀಯರಿದ್ದರೆ ಅನ್ಯಾಯ ಆಗುವುದಿಲ್ಲ' ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಸ್ಪಷ್ಟಪಡಿಸಿದರು.



ಎಂ.ಕೃಷ್ಣಪ್ಪ

'ಬಾಕಿ ಉಳಿದಿರುವ ಮನೆಗಳನ್ನು ಕೋರಿ ಅರ್ಜಿ ಸಲ್ಲಿಸಿ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸಾಕಷ್ಟು ಮಂದಿ ಹಣ ಪಾವತಿ ಮಾಡಿದ್ದಾರೆ. ಯಾರಿಗೆ ಮನೆ ನೀಡಬೇಕು ಎಂಬುದು ವಸತಿ ಇಲಾಖೆಗೆ ಬಿಟ್ಟ ವಿಷಯ. ಖಾಲಿ ಇರುವ ಮನೆಗಳಿಗೆ ಫಲಾನುಭವಿಗಳ ಪಟ್ಟಿ ಕೇಳಿದಾಗ ನಾನು ಮತ್ತು ಸಂಸದರು ಕೆಲವರ ಹೆಸರು ಕೊಟ್ಟಿದ್ದೇವೆ' ಎಂದರು.

'11 ವರ್ಷದಿಂದ ಈ ವಿಷಯ ನನಗೆ ಚೆನ್ನಾಗಿ ಅರಿವಿದೆ. ಕೆಲವರು ಬೇರೆ ಬೇರೆ ಕಡೆಯಿಂದ ಬಂದು ಹಣ ಪಾವತಿಸದೆ ಮನೆಗಳಿಗೆ ಸೇರಿಕೊಂಡಿದ್ದಾರೆ. ಯಾರು ಸ್ಥಳೀಯರು ಎಂಬುದು ಗೊತ್ತಿದೆ. ಹಾಗೊಂದು ವೇಳೆ ಸ್ಥಳೀಯರಿಗೆ ತೊಂದರೆ ಆಗಿದ್ದರೆ ಪರಿಶೀಲಿಸುತ್ತೇನೆ. ಅವರಿಗೆ ಅನ್ಯಾಯವಾಗಲು ನಾನೂ ಬಿಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮನೆ ಮಾರಾಟಕ್ಕೆ ಹೊರಟಿರುವ ಅಧಿಕಾರಿಗಳು

'ಹಲವು ವರ್ಷಗಳಿಂದ ಈ ಜಾಗದಲ್ಲಿ ಬಡ ಕುಟುಂಬಗಳು ವಾಸ ಇವೆ. ಇವರೆಲ್ಲ ಯಾವುದೋ ಒಂದು ಜಾತಿ ಅಥವಾ ಧರ್ಮಕ್ಕೆ ಸೇರಿದವರಲ್ಲ. ಎಲ್ಲ ಸಮುದಾಯದ ಬಡವರಿದ್ದಾರೆ. ಅವರನ್ನು ಒಕ್ಕಲೆಬ್ಬಿಸಿ ಮನೆಗಳನ್ನು ಮಾರಾಟ ಮಾಡಿಕೊಳ್ಳಲು ಅಧಿಕಾರಿಗಳು ಹೊರಟಿದ್ದಾರೆ' ಎಂದು ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಆರೋಪಿಸಿದರು.

'ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸೇರಿ ಬಡವರನ್ನು ಬೀದಿಪಾಲು ಮಾಡಲು ಮುಂದಾಗಿದ್ದಾರೆ. ಬೇರೆಡೆ ವಾಸ ಇದ್ದವರನ್ನು ಕರೆಸಿ ₹2 ಲಕ್ಷದಿಂದ ₹3 ಲಕ್ಷದ ತನಕ ಲಂಚ ಪಡೆದು ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ ಎಂಬ ಮಾಹಿತಿ ಇದೆ. ಗೂಂಡಾಗಳನ್ನು ಕಳಿಸಿ ನಿವಾಸಿಗಳಿಗೆ ಬೆದರಿಕೆ ಹಾಕುವ ಪ್ರಯತ್ನವೂ ನಡೆಯುತ್ತಿದೆ. ನಿರ್ಗತಿಕ ಬಡ ಕುಟುಂಬಗಳನ್ನು ಬೀದಿಗೆ ತಳ್ಳಲು ನಾವು ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.



ಡಾ.ಚಂದ್ರಶೇಖರ ಕಂಬಾರ ಅವರಿಗೆ 'ರೇವಾ ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕುಲಪತಿ ಡಾ.ಎಂ.ಧನಂಜಯ, ನಟ ರವಿಚಂದ್ರನ್, ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಡಾ. ಟೆಸ್ಸಿ ಥಾಮಸ್, ಕುಲಸಚಿವ ಡಾ.ಎನ್.ರಮೇಶ್ ಇದ್ದರು

'ರೇವಾ ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ 'ರೇವಾ ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

ಈ ಸಾಲಿನ ಪ್ರಶಸ್ತಿಯನ್ನು ಸಾಹಿತಿ ಡಾ.ಚಂದ್ರಶೇಖರ ಕಂಬಾರ, ನಟ ವಿ. ರವಿಚಂದ್ರನ್ ಮತ್ತು ಡಿಆರ್‌ಡಿಒದ 'ಏರೋನಾಟಿಕಲ್ ಸಿಸ್ಟಮ್ಸ್‌'ನ ನಿರ್ದೇಶಕಿ ಡಾ. ಟೆಸ್ಸಿ ಥಾಮಸ್‌ಗೆ ನೀಡಲಾಯಿತು.

ಈ ವೇಳೆ ಮಾತನಾಡಿದ ಚಂದ್ರಶೇಖರ ಕಂಬಾರ, 'ಭಾರತವೆಂದರೆ ಭೂತ, ಭವಿಷ್ಯ ಮತ್ತು ವರ್ತಮಾನ ಕಾಲವನ್ನು ಒಳಗೊಂಡ ಇತಿಹಾಸ. ನಮ್ಮ ಭಾಷೆ, ಸಂಸ್ಕೃತಿ, ಕಲೆ ಇವೆಲ್ಲವನ್ನೂ ಒಳಗೊಂಡಿರುವುದೇ ನಿಜವಾದ ಇತಿಹಾಸ. ವಿಶ್ವವಿದ್ಯಾಲಯಗಳು ಕಾರ್ಬನ್ ಕಾಪಿಯಾಗದೆ ವಿನೂತನ ವಿಷಯಗಳನ್ನು ಸೃಷ್ಟಿಸುವ ಸಂಸ್ಥೆಗಳಾಗಬೇಕು' ಎಂದು ಅಭಿಪ್ರಾಯಪಟ್ಟರು.

ಟೆಸ್ಸಿ ಥಾಮಸ್ ಮಾತನಾಡಿ, 'ಅಗ್ನಿ ಉಪಗ್ರಹ ಉಡಾವಣೆಯಲ್ಲಿ ಭಾರತ ಅದ್ಭುತ ಸಾಧನೆ ಮಾಡಿದೆ. ಅಗ್ನಿ-1ನೇ ಉಪಗ್ರಹ ಉಡಾವಣೆಯ ಸಂದರ್ಭದಲ್ಲಿ 300 ಕಿಲೋಮೀಟರ್ ವೇಗದ ಸಾಮರ್ಥ್ಯ ಹೊಂದಿತ್ತು. ಈಗ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಕಾರಣ, ಅಗ್ನಿ-5 ಉಪಗ್ರಹವನ್ನು ಉಡಾವಣೆ ಮಾಡಿದಾಗ 5 ಸಾವಿರ ಕಿಲೋಮೀಟರ್ ವೇಗದ ಸಾಮರ್ಥ್ಯ ಪಡೆದುಕೊಂಡಿರುವುದು ಹೆಮ್ಮೆಯ ವಿಷಯ' ಎಂದು ತಿಳಿಸಿದರು.

ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ. ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಟ್ರಸ್ಟಿ ಉಮೇಶ್ ರಾಜು ಇದ್ದರು.

ಕಾಮಗಾರಿ ವಿಳಂಬ: ಸಾರ್ವಜನಿಕರಿಂದ ದೂರು

'ಸ್ಮಾರ್ಟ್ ದೀಪ' ಗುತ್ತಿಗೆ ರದ್ದು: ಪಾಲಿಕೆಗೆ ಹೊಸ ಬೆಳಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾದ 'ಸ್ಮಾರ್ಟ್ ಬೀದಿ ದೀಪ ಯೋಜನೆ'ಯನ್ನು ಬಿಬಿಎಂಪಿ ಕೈಬಿಟ್ಟಿದೆ. ಯೋಜನೆಯ ಅನುಷ್ಠಾನ ಆಮೆಗತಿಯಲ್ಲಿ ಸಾಗಿದ್ದಕ್ಕೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಈ ಗುತ್ತಿಗೆಯನ್ನು ರದ್ದುಪಡಿಸಿರುವ ಪಾಲಿಕೆ, ಹೊಸ ಬೀದಿ ದೀಪಗಳ ಅಳವಡಿಕೆಗೆ ಟೆಂಡರ್ ಕರೆಯಲು ಸಿದ್ಧತೆ ನಡೆಸಿದೆ.

ವಿದ್ಯುತ್ ಉಳಿತಾಯ ಕ್ರಮಗಳ ಅನುಷ್ಠಾನದ ಉದ್ದೇಶದಿಂದ ಬಿಬಿಎಂಪಿಯು ಸಾಂಪ್ರದಾಯಿಕ ಬೀದಿ ದೀಪಗಳ ಬದಲು ಎಲ್‌ಇಡಿ ದೀಪಗಳನ್ನು ಅಳವಡಿಸುವ ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಿತ್ತು. ಬಿಬಿಎಂಪಿಯ ಈಗಿನ ವಿದ್ಯುತ್ ವೆಚ್ಚದಲ್ಲಿ ಶೇ 85.5ರಷ್ಟನ್ನು ಉಳಿತಾಯ ಮಾಡುವ ಭರವಸೆ ನೀಡಿದ್ದ ಶಾಪೂರ್ಜಿ ಪಲ್ಲೋಂಜಿ ಮತ್ತು ಕಂಪನಿ, ಸಮುದ್ರ ಎಲೆಕ್ಟ್ರಾನಿಕ್ಸ್ ಸಿಸ್ಟಮ್ಸ್ ಮತ್ತು ಎಸ್‌ಎಂಎಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗಳನ್ನೊಳಗೊಂಡ ಒಕ್ಕೂಟಕ್ಕೆ ಟೆಂಡರ್ ನೀಡಲಾಗಿತ್ತು. ಈ ಟೆಂಡರ್ ಪ್ರಸ್ತಾವಕ್ಕೆ 2019ರ ಫೆ.23ರಂದು ಅನುಮೋದನೆ ಸಿಕ್ಕಿತ್ತು.

ಈ ಯೋಜನೆಯನ್ನು ಒಕ್ಕೂಟವು 30 ತಿಂಗಳುಗಳಲ್ಲಿ ಐದು ಹಂತಗಳಲ್ಲಿ ಅನುಷ್ಠಾನಗೊಳಿಸಬೇಕಿತ್ತು. ಮೊದಲ ನಾಲ್ಕು ಹಂತಗಳಲ್ಲಿ ತಲಾ 1 ಲಕ್ಷ ಎಲ್‌ಇಡಿಗಳನ್ನು ಹಾಗೂ ಕೊನೆಯ ಹಂತದಲ್ಲಿ 85 ಸಾವಿರ ಎಲ್‌ಇಡಿಗಳನ್ನು ಅಳವಡಿಸಬೇಕಿತ್ತು. ಒಕ್ಕೂಟದ ಜೊತೆ 2019ರ ಮಾರ್ಚ್ 1ರಂದೇ ವಿದ್ಯುತ್ ನಿರ್ವಹಣೆ ಗುತ್ತಿಗೆ (ಇಪಿಸಿ) ಕರಾರು ಮಾಡಿಕೊಳ್ಳಲಾಗಿತ್ತು. ಹೊಸ ಸಂಸ್ಥೆಗಳ ಸೇರ್ಪಡೆಯ ಒಪ್ಪಂದವನ್ನೂ 2019ರ ಜೂನ್ 13ರಂದು ಮಾಡಿಕೊಳ್ಳಲಾಗಿತ್ತು. 2020ರ ಜೂನ್ 18ರಿಂದ ಇದರ ಅನುಷ್ಠಾನ ಕಾರ್ಯಗಳು ಪ್ರಾರಂಭವಾಗಿದ್ದವು. ಈ ಯೋಜನೆ ಅನುಷ್ಠಾನಕ್ಕೆ 'ವಿಶೇಷ ಉದ್ದೇಶದ ಘಟಕ'ವನ್ನೂ (ಎಸ್‌ಪಿವಿ) ಸ್ಥಾಪಿಸಲಾಗಿತ್ತು.

ಒಕ್ಕೂಟವು ಮೊದಲ ಹಂತದಲ್ಲಿ ದಾಸರಹಳ್ಳಿ, ರಾಜರಾಜೇಶ್ವರಿನಗರ ಮತ್ತು ಬೊಮ್ಮನಹಳ್ಳಿ ವಲಯಗಳ ಮೂರು ವಾರ್ಡ್‌ಗಳಲ್ಲಿ ಹಾಗೂ ಪೂರ್ವ ವಲಯದ ವಸಂತನಗರ ವಾರ್ಡ್‌ನಲ್ಲಿ ಎಲ್‌ಇಡಿ ದೀಪಗಳನ್ನು 2021ರ ಏಪ್ರಿಲ್ 17ರ ಒಳಗೆ ಅಳವಡಿಸಬೇಕಿತ್ತು. ಈ ಗಡುವು ಮುಗಿದು ಅನೇಕ ತಿಂಗಳುಗಳು ಕಳೆದ ಬಳಿಕವೂ ಕಾಮಗಾರಿ ಪೂರ್ಣಗೊಳಿಸಿರಲಿಲ್ಲ.

'ಒಕ್ಕೂಟವು ಗಡುವಿನೊಳಗೆ ಕಾಮಗಾರಿ ಅನುಷ್ಠಾನಗೊಳಿಸಿಲ್ಲ. ಹಲವಾರು ಅವಕಾಶಗಳನ್ನು ನೀಡಿದರೂ ತಿಂಗಳಾನುಗಟ್ಟಲೆ ಕಾಲಹರಣ ಮಾಡಿತು. ಸಾರ್ವಜನಿಕರಿಂದಲೂ ಸಾಕಷ್ಟು ದೂರುಗಳು ಬಂದಿದ್ದವು. ಹಾಗಾಗಿ ಅನಿವಾರ್ಯವಾಗಿ ಟೆಂಡರ್ ರದ್ದುಪಡಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.



ವಸಂತನಗರದಲ್ಲಿ ಹಳೆಯ ವಿದ್ಯುತ್ ಕಂಬಗಳಿಗೆ ಎಲ್‌ಇಡಿ ದೀಪ ಅಳವಡಿಸಿರುವುದು ಪ್ರಜಾವಾಣಿ ಚಿತ್ರ

ಯಾವ ವಲಯಕ್ಕೆ ಎಷ್ಟು ಬೀದಿದೀಪ

ವಲಯ	ಅಳವಡಿಸಬೇಕಿರುವ ಹೊಸ ಬೀದಿ ದೀಪಗಳು	ಅಂದಾಜು ವೆಚ್ಚ (₹ ಕೋಟಿ)
ಪೂರ್ವ	2,565	3.85
ಪಶ್ಚಿಮ	3,408	3.50
ದಕ್ಷಿಣ	9,182	8.45
ಬೊಮ್ಮನಹಳ್ಳಿ	6,070	23.8
ಮಹದೇವಪುರ	8,423	15.00
ಆರ್.ಆರ್.ನಗರ	11,582	15.01
ದಾಸರಹಳ್ಳಿ	7,563	9.69
ಯಲಹಂಕ	4,939	6.25



53,732 ಬಿಬಿಎಂಪಿ ಹೊಸತಾಗಿ ಅಳವಡಿಸಲಿರುವ ಬೀದಿದೀಪಗಳ ಸಂಖ್ಯೆ

511.59 ಕಿ.ಮೀ ಹೊಸತಾಗಿ ಬೀದಿದೀಪ ಅಳವಡಿಸಲು ಗುರುತಿಸಲಾದ ಮಾರ್ಗಗಳ ಒಟ್ಟು ಉದ್ದ

₹ 85.5 ಕೋಟಿ ಪ್ರಸ್ತಾವ ಸಲ್ಲಿಸಿದ ಪಾಲಿಕೆ

ಈ ಯೋಜನೆ ಚಾಲ್ತಿಯಲ್ಲಿರುವ ಅವಧಿಯಲ್ಲಿ ನಗರದಲ್ಲಿ ಎಲ್ಲೂ ಹೊಸತಾಗಿ ಬೀದಿ ದೀಪಗಳನ್ನು ಅಳವಡಿಸಲು ಸಾಧ್ಯವಾಗಿರಲಿಲ್ಲ. ಈ ಉದ್ದೇಶಕ್ಕೆ ಬಿಬಿಎಂಪಿ ಮೂರು ವರ್ಷಗಳ ಬಜೆಟ್‌ಗಳಲ್ಲಿ ಅನುದಾನ ಮೀಸಲಿಟ್ಟಿರಲಿಲ್ಲ. ಈಗ ಹೊಸ ಬೀದಿದೀಪಗಳನ್ನು ಅಳವಡಿಸುವ ಬಗ್ಗೆ ಬಿಬಿಎಂಪಿ ₹ 85.5 ಕೋಟಿ ವೆಚ್ಚದ ಪ್ರಸ್ತಾವ ಸಿದ್ಧಪಡಿಸಿದೆ. ಅನುದಾನ ಒದಗಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

'ನಗರದ ಹೊರವಲಯದಲ್ಲಿ ಪಾಲಿಕೆಗೆ ಸೇರ್ಪಡೆಯಾಗಿರುವ 110 ಹಳ್ಳಿಗಳಲ್ಲಿ ಹಾಗೂ ಈ ಹಿಂದೆ ನಗರಸಭೆಯಾಗಿದ್ದ ಪ್ರದೇಶಗಳಲ್ಲಿ ಜನವಸತಿಗಳು ತೀವ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತಿವೆ. ಈ ಪ್ರದೇಶಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಅಗತ್ಯವಿದೆ' ಎಂದು ಪ್ರಸ್ತಾವದಲ್ಲಿ ಹೇಳಲಾಗಿದೆ.

ನಕಲಿ ಆದೇಶಕ್ಕೆ ಬೆಸ್ತುಬಿದ್ದ ಪೊಲೀಸರು!

● ಆರ್. ಜಿತೇಂದ್ರ

ರಾಮನಗರ: ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹೆಸರಿನಲ್ಲಿ ಬಂದ ನಕಲಿ ಆದೇಶ ನಂಬಿ ಪೊಲೀಸರು ಕನಕಪುರ ತಾಲ್ಲೂಕಿನ ಹೋಟೆಲ್, ರೆಸ್ಟೋರೆಂಟ್, ರೆಸಾರ್ಟ್‌ಗಳನ್ನು ಮುಚ್ಚಿಸಲು ಮುಂದಾಗಿದ್ದು, ವಿವಾದಕ್ಕೆ ಕಾರಣವಾಗಿದೆ. ಬಳಿಕ ಎಚ್ಚೆತ್ತುಕೊಂಡ ಪೊಲೀಸರು ತಮ್ಮ ನೋಟಿಸ್ ಹಿಂಪಡೆದಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಹೆಸರಿನಲ್ಲಿ ಜ.5ರಂದು ಆದೇಶವೊಂದು ಜಾಲತಾಣದಲ್ಲಿ ಹರಿದಾಡಿತ್ತು. ವಾರಾಂತ್ಯ ಕರ್ಫ್ಯೂ ಹಿನ್ನೆಲೆಯಲ್ಲಿ ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್–2007ರ ಅನ್ವಯ ಶುಕ್ರವಾರ ರಾತ್ರಿ 10ರಿಂದ ಸೋಮವಾರ ಬೆಳಿಗ್ಗೆ 5ರವರೆಗೆ ರಾಜ್ಯದಲ್ಲಿನ ಎಲ್ಲಾ ಬಾರ್, ಪಬ್, ಹೋಟೆಲ್, ರೆಸ್ಟೋರಂಟ್ ಹಾಗೂ ರೆಸಾರ್ಟ್‌ಗಳನ್ನು ಮುಚ್ಚುವಂತೆ ಆದೇಶದಲ್ಲಿ ತಿಳಿಸಲಾಗಿತ್ತು. ಇದನ್ನು ನಿಜ ಎಂದು ನಂಬಿದ ಪೊಲೀಸರು ಹೋಟೆಲ್, ರೆಸಾರ್ಟ್‌ಗಳಿಗೆ ನೋಟಿಸ್ ನೀಡಿದ್ದಾರೆ. ವಾರಾಂತ್ಯದಲ್ಲಿ ಬಾಗಿಲು ಹಾಕುವಂತೆ ಗುರುವಾರ ನೋಟಿಸ್ ಅಂಟಿಸಿದ್ದಾರೆ.

ಬೆಚ್ಚಿಬಿದ್ದರು: ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಇದೇ ಭಾನುವಾರ ಕಾಂಗ್ರೆಸ್ ನೇತೃತ್ವದಲ್ಲಿ ಮೇಕೆದಾಟು ಪಾದಯಾತ್ರೆ ಆರಂಭವಾಗಲಿದೆ. ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಅವರಿಗಾಗಿ ತಾಲ್ಲೂಕಿನ ಬಹುತೇಕ ಹೋಟೆಲ್ ಹಾಗೂ ರೆಸಾರ್ಟ್‌ಗಳು ಈಗಾಗಲೇ ಬುಕ್ ಆಗಿವೆ. ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದ ಉದ್ಯಮಿಗಳು ಈ ನೋಟಿಸ್ ನೋಡುತ್ತಲೇ ಬೆಚ್ಚಿಬಿದ್ದಿದ್ದಾರೆ. ಪಾದಯಾತ್ರೆ ಹತ್ತಿಕ್ಕಲು ಸರ್ಕಾರವೇ ಈ ಆದೇಶ ಹೊರಡಿಸಿದೆ ಎಂಬ ಆರೋಪಗಳೂ ಕೇಳಿಬಂದಿದೆ.

ರಾಜ್ಯ ಸರ್ಕಾರ, ಜಿಲ್ಲಾಡಳಿತ ಹೊರಡಿಸಿದ ವಾರಾಂತ್ಯ ಕರ್ಫ್ಯೂ ಆದೇಶದಲ್ಲಿ ಎಲ್ಲಿಯೂ ಹೋಟೆಲ್ ಇಲ್ಲವೇ ರೆಸಾರ್ಟ್‌ಗಳನ್ನು ಪೂರ್ಣ ಮುಚ್ಚುವ ಆದೇಶವೇ ಇಲ್ಲ. ಹೋಟೆಲ್‌ಗಳಲ್ಲಿ ಪಾರ್ಸಲ್ ಸೇವೆ ಹಾಗೂ ರೆಸಾರ್ಟ್‌ಗಳಲ್ಲಿ ಶೇ 50ರಷ್ಟು ಗ್ರಾಹಕರಿಗೆ ಸರ್ಕಾರವೇ ಅವಕಾಶ ನೀಡಿದೆ. ಹೀಗಿದ್ದೂ ನಕಲಿ ಆದೇಶದಿಂದಾದ ಗೊಂದಲದಿಂದ ವರ್ತಕರು ಆತಂಕಕ್ಕೀಡಾಗಿದ್ದು, ಪೊಲೀಸರಲ್ಲಿ ವಿಚಾರಿಸಲಾಗಿ ನಿಜಾಂಶ ಬೆಳಕಿಗೆ ಬಂದಿದೆ. ಬಳಿಕ ಪೊಲೀಸರು ತಮ್ಮ ನೋಟಿಸ್ ಹಿಂಪಡೆದಿದ್ದು, ಅದಕ್ಕೆ ಸಂಬಂಧಿಸಿ ಕನಕಪುರದಲ್ಲಿ ಪ್ರಚಾರವನ್ನೂ ಮಾಡಿದ್ದಾರೆ.

ನಕಲಿ ಹೇಗೆ: 'ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರವಿಕುಮಾರ್' ಎಂಬ ಹೆಸರಿನಲ್ಲಿ ನಕಲಿ ಆದೇಶ ಪ್ರಕಟಣೆಗೊಂಡು ಎಲ್ಲೆಡೆ ಪ್ರಸಾರ ಆಗಿದೆ. ಈ ಆದೇಶ 4ರಂದು ಪ್ರಕಟ ಆಗಿದ್ದು, ಅದಕ್ಕೆ ಅಧಿಕಾರಿ ಹೆಸರಿನಲ್ಲಿ 5ರಂದು ಸಹಿ ಮಾಡಲಾಗಿದೆ.

ಸರಿಪಡಿಸಿದ್ದೇವೆ: 'ನಕಲಿ ಆದೇಶವನ್ನು ನಿಜವೆಂದು ನಂಬಿ ನಮ್ಮಲ್ಲಿನ ಕೆಲವು ಸಿಬ್ಬಂದಿ ಯಡವಟ್ಟು ಮಾಡಿದ್ದಾರೆ. ರೆಸಾರ್ಟ್‌ಗಳಿಗೆ ನೋಟಿಸ್ ನೀಡಿದ್ದನ್ನು ನನ್ನ ಗಮನಕ್ಕೂ ತಂದಿಲ್ಲ. ವಿಷಯ ತಿಳಿಯುತ್ತಲೇ ಸರಿಪಡಿಸಿದ್ದೇವೆ. ಕನಕಪುರದಲ್ಲಿ ಯಾವ ಹೋಟೆಲ್, ರೆಸಾರ್ಟ್‌ಗಳನ್ನು ಬಂದ್ ಮಾಡಿಸುವುದಿಲ್ಲ. ಕರ್ಫ್ಯೂ ನಿಯಮದಂತೆ ಕ್ರಮ ಜರುಗಿಸುತ್ತೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆ ಸ್ಪಷ್ಟನೆ

ವಾರಾಂತ್ಯ ಕರ್ಫ್ಯೂನಲ್ಲಿ ಹೋಟೆಲ್, ರೆಸಾರ್ಟ್, ಸಫಾರಿ ಚಟುವಟಿಕೆಗಳ ಸಂಬಂಧ ಪ್ರವಾಸೋದ್ಯಮ ಇಲಾಖೆಯು ಸ್ಪಷ್ಟನೆ ನೀಡಿದೆ.

ಕೊಠಡಿ ಇಲ್ಲವೇ ಸೇವೆಗಳನ್ನು ಕಾಯ್ದಿರಿಸಿದವರು ಅದರ ದಾಖಲೆಗಳೊಂದಿಗೆ ನಿಗದಿತ ಸ್ಥಳಕ್ಕೆ ಪ್ರಯಾಣಿಸಬಹುದಾಗಿದೆ. ಹೋಟೆಲ್, ರೆಸಾರ್ಟ್ ಒಳಗಿನ ಆತಿಥ್ಯಕ್ಕೆ ಯಾವುದೇ ನಿರ್ಬಂಧ ಇಲ್ಲ. ಮುಂಚೆಯೇ ಕಾಯ್ದಿರಿಸಿದ ಗ್ರಾಹಕರು ತಂಗಬಹುದು. ಅರಣ್ಯ ಪ್ರದೇಶಗಳಲ್ಲಿ ಕೋವಿಡ್ ನಿಯಮಾವಳಿ ಅನುಸರಿಸಿ ಸಫಾರಿ ಚಟುವಟಿಕೆಗಳನ್ನು ನಡೆಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ ತಿಳಿಸಿದ್ದಾರೆ.

ಧರ್ಮಸ್ಥಳ: ಆನ್‌ಲೈನ್ ಕಾದಿರಿಸುವಿಕೆ ರದ್ದು

ಪ್ರಜಾವಾಣಿ ವಾರ್ತೆ

ಉಜಿರೆ: ಕೋವಿಡ್ ಹರಡುವುದನ್ನು ತಡೆಯಲು ಸರ್ಕಾರ ಹೊರಡಿಸಿರುವ ಆದೇಶದಂತೆ, ಧರ್ಮಸ್ಥಳ ದೇವಸ್ಥಾನದಲ್ಲಿ ತುಲಾಭಾರ, ಉತ್ಸವಾದಿ ಸೇವೆಗಳಿಗೆ ಆನ್‌ಲೈನ್ ಮೂಲಕ ಕಾದಿರಿಸುವುದನ್ನು ರದ್ದುಗೊಳಿಸಲಾಗಿದೆ. ವಸತಿ ಛತ್ರದಲ್ಲಿ ಕೋಣೆ ಕಾದಿರಿಸುವುದನ್ನೂ ಸ್ಥಗಿತಗೊಳಿಸಲಾಗಿದೆ.

ವಾರಾಂತ್ಯದ ಕರ್ಫ್ಯೂ ದಿನಗಳಲ್ಲಿ ದೇವಸ್ಥಾನಕ್ಕೆ ಭಕ್ತರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಕೋವಿಡ್ ಮಾರ್ಗಸೂಚಿ ಅನುಸರಿಸಿ, ದರ್ಶನಕ್ಕೆ ಅವಕಾಶ ನೀಡಲಾಗುವುದು' ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಸಚಿವರಿಂದ ದಕ್ಕಲಿಗ ದಂಪತಿಯ ಪಾದಪೂಜೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕೆಳಸ್ತರದಲ್ಲಿರುವ, ಅಸ್ಪೃಶ್ಯತೆಯ ನೋವಿನಲ್ಲೇ ಜೀವನ ಸಾಗಿಸುತ್ತಿರುವ ದಕ್ಕಲಿಗ ಸಮಾಜದ ದಂಪತಿಯ ಪಾದಪೂಜೆಯನ್ನು ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ ಹಾಗೂ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ನೆರವೇರಿಸಿದರು.

ಇಲ್ಲಿಯ ಶಿವಶರಣ ಮಾದಾರ ಚನ್ನಯ್ಯ ಗುರುಪೀಠ ಟ್ರಸ್ಟ್, ಮಠದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ದಕ್ಕಲಿಗ ಸಮಾಜದ ರಾಜ್ಯ ಮಟ್ಟದ ಸಮಾವೇಶದಲ್ಲಿ ಅವರು ಪೂಜೆ ಮಾಡಿದರು. ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಸಾಮರಸ್ಯ ವೇದಿಕೆ ಸಂಚಾಲಕ ವಾದಿರಾಜ್ ಅವರು, 'ಪರಿಶಿಷ್ಟ ಜಾತಿ ಪಟ್ಟಿಯ 101 ಜಾತಿಗಳಲ್ಲಿ ದಕ್ಕಲಿಗರು ಸೇರಿದ್ದಾರೆ. ಮಾದಿಗ ಸಮುದಾಯದ 29 ಉಪಜಾತಿಗಳಲ್ಲಿ ಇವರಿದ್ದಾರೆ. ರಾಜ್ಯದ 48 ಕಡೆ 481 ಕುಟುಂಬಗಳು ನೆಲೆಸಿವೆ. 1,708 ಜನಸಂಖ್ಯೆ ಇದೆ. ಭಿಕ್ಷಾಟನೆ ಇವರ ಪಾರಂಪರಿಕ ವೃತ್ತಿ. ರಾಜ್ಯದ ಎಲ್ಲೆಡೆ ಸಂಚರಿಸಿ ಸಮುದಾಯದ ಸ್ಥಿತಿಗತಿಯ ಅಧ್ಯಯನ ನಡೆಸಲಾಗಿದೆ' ಎಂದು ಮಾಹಿತಿ ನೀಡಿದರು.

'ದಕ್ಕಲಿಗ ಸಮಾಜದಲ್ಲಿ ಇಬ್ಬರು ಶಿಕ್ಷಕರು, ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದಾರೆ. ಒಬ್ಬರು ಎಂಬಿಎ ಪದವೀಧರ, ಮತ್ತಿಬ್ಬರು ಸ್ನಾತಕೋತ್ತರ ಪದವೀಧರರಿದ್ದಾರೆ. 12 ಕುಟುಂಬಗಳಿಗಷ್ಟೇ ಭೂಮಿ ಇದೆ. ಮನೆ, ನಿವೇಶನದ ಹಕ್ಕುಪತ್ರ ಪಡೆಯಲು ಸಾಧ್ಯವಾಗಿಲ್ಲ' ಎಂದರು.

ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ. ಶಿವಣ್ಣ ಇದ್ದರು.



ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದಲ್ಲಿ ಶುಕ್ರವಾರ ದಕ್ಕಲಿಗ ಸಮುದಾಯದ ದಂಪತಿಯ ಪಾದಗಳನ್ನು ಸಚಿವರಾದ ಗೋವಿಂದ ಎಂ.ಕಾರಜೋಳ ಹಾಗೂ ಕೋಟಾ ಶ್ರೀನಿವಾಸ ಪೂಜಾರಿ ತೊಳೆದರು. ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದಾರೆ

'ಇನ್ನು ನೀವೆಲ್ಲ ಮಾದಿಗರು'

'ಮಾದಿಗರೇ ಸಮಾಜದ ಬಹಿಷ್ಕೃತರು. ಇಂತಹ ಮಾದಿಗರ ಹಟ್ಟಿಯನ್ನೂ ಪ್ರವೇಶಿಸಲು ಆಗದ ಸ್ಥಿತಿಯಲ್ಲಿ ದಕ್ಕಲಿಗರು ಇರುವುದು ಶೋಚನೀಯ. ಇನ್ನು ಮುಂದೆ ನೀವೆಲ್ಲರೂ ಮಾದಿಗ ಸಮುದಾಯದ ಭಾಗ' ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು.

ತಾರತಮ್ಯ ಸರಿಪಡಿಸದಿದ್ದಲ್ಲಿ ಧರಣಿ: ರಾಮಲಿಂಗ ರೆಡ್ಡಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆಗಳು ಮತ್ತು ಮಳೆನೀರು ಚರಂಡಿಗಳ ದುರಸ್ತಿ, ನಿರ್ವಹಣೆಗೆ ಅನುದಾನ ಹಂಚಿಕೆಯಲ್ಲಿನ ತಾರತಮ್ಯ ಸರಿಪಡಿಸದಿದ್ದರೆ ಪಾಲಿಕೆ ಕಚೇರಿ ಎದುರು ಧರಣಿ ನಡೆಸಲಾಗುವುದು ಎಂದು ಬಿಟಿಎಂ ವಿಧಾನಸಭಾ ಕ್ಷೇತ್ರದ ಶಾಸಕ ರಾಮಲಿಂಗಾ ರೆಡ್ಡಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '₹ 1,500 ಕೋಟಿ ಅನುದಾನ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ. 298 ಕಾಮಗಾರಿಗಳನ್ನು ಗುರುತಿಸಿ ಪಾಲಿಕೆ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದರು. ನನ್ನ ಕ್ಷೇತ್ರ ಹಾಗೂ ನನ್ನ ಮಗಳು ಸೌಮ್ಯಾ ರೆಡ್ಡಿ ಪ್ರತಿನಿಧಿಸುವ ಜಯನಗರ ಕ್ಷೇತ್ರದಲ್ಲಿ ಒಂದು ಕಾಮಗಾರಿಯನ್ನೂ ಗುರುತಿಸಿಲ್ಲ' ಎಂದರು.

ಬಿಜೆಪಿಯ 15 ಶಾಸಕರ ಕ್ಷೇತ್ರಗಳಿಗೆ ಒಟ್ಟು ₹ 1,100.34 ಕೋಟಿ ನೀಡುವ ಪ್ರಸ್ತಾವವಿದೆ. ಜೆಡಿಎಸ್ ಶಾಸಕ ಆರ್. ಮಂಜುನಾಥ್ ಪ್ರತಿನಿಧಿಸುವ ದಾಸರಹಳ್ಳಿ ಕ್ಷೇತ್ರಕ್ಕೆ ₹125 ಕೋಟಿ ಹಾಗೂ ಕಾಂಗ್ರೆಸ್‌ನ 9 ಶಾಸಕರ ಕ್ಷೇತ್ರಗಳಿಗೆ ಕೇವಲ ₹ 248.29 ಕೋಟಿ ಹಂಚಿಕೆ ಮಾಡುವ ಪ್ರಸ್ತಾವವಿದೆ. ಈ ರೀತಿಯ ತಾರತಮ್ಯ ಖಂಡನೀಯ ಎಂದು ಹೇಳಿದರು.

ಪುಣೆ: ಕಾಳಿಚರಣ್‌ಗೆ ಜಾಮೀನು

ಪುಣೆ (ಪಿಟಿಐ): ಮಹಾತ್ಮ ಗಾಂಧಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಮಧ್ಯಪ್ರದೇಶದ ಧಾರ್ಮಿಕ ಮುಖಂಡ ಕಾಳಿಚರಣ್ ಮಹಾರಾಜ್ ಅವರಿಗೆ ಶುಕ್ರವಾರ ಪುಣೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನ ಸಮಾರಂಭ

ಕುರುಬರಿಗೆ ಜಾತಿವಾದಿ ಹಣೆಪಟ್ಟಿ ಬೇಡ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಸ್ಥಾನಗಳಲ್ಲಿರುವ ಸಮುದಾಯದ ಅಧಿಕಾರಿಗಳು 'ಕುರುಬರು ಜಾತಿವಾದಿಗಳು' ಎಂಬ ಹಣೆಪಟ್ಟಿ ಬರದಂತೆ ನ್ಯಾಯಬದ್ಧವಾಗಿ ಸೇವೆ ಸಲ್ಲಿಸಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಐಎಎಸ್ ಮತ್ತು ಐಪಿಎಸ್ ಸೇವೆಗಳಿಗೆ ಪದೋನ್ನತಿ ಹೊಂದಿದ ಸಮುದಾಯದ ಅಧಿಕಾರಿಗಳಿಗೆ ಕನಕಶ್ರೀ ಚಾರಿಟಬಲ್ ಟ್ರಸ್ಟ್ ಶುಕ್ರವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಮುದಾಯದ ಅಧಿಕಾರಿಗಳು ತಮ್ಮ ಪ್ರತಿಭೆಯಿಂದ ಉನ್ನತ ಸ್ಥಾನಗಳನ್ನು ತಲುಪಿದ್ದಾರೆ. ಅಧಿಕಾರಿಗಳು ಸಮುದಾಯದ ದೃಷ್ಟಿಯಲ್ಲೇ ಕೆಲಸ ಮಾಡದೆ, ನ್ಯಾಯ ಇರುವವರ ಪರವಾಗಿ ಕೆಲಸ ಮಾಡಬೇಕು. ನ್ಯಾಯಯುತವಾಗಿ ಸೇವೆ ಸಲ್ಲಿಸುವ ಅಧಿಕಾರಿಗಳಿಗೆ ನಮ್ಮ ಸಹಕಾರ ಮತ್ತು ಬೆಂಬಲ ಇರುತ್ತದೆ. ಕುರುಬ ಸಮುದಾಯದ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಲಿ' ಎಂದರು.



ಐಎಎಸ್ ಮತ್ತು ಐಪಿಎಸ್ ಸೇವೆಗಳಿಗೆ ಪದೋನ್ನತಿ ಪಡೆದ ಅಧಿಕಾರಿಗಳನ್ನು ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಎಚ್.ಎಂ.ರೇವಣ್ಣ, ವಿಧಾನ ಪರಿಷತ್ ಸದಸ್ಯರಾದ ಆರ್.ಶಂಕರ್, ಎಚ್.ವಿಶ್ವನಾಥ್, ಶಾಸಕ ಬಂಡೆಪ್ಪ ಕಾಶೆಂಪೂರ, ಸಚಿವರಾದ ಕೆ.ಎಸ್.ಈಶ್ವರಪ್ಪ ಹಾಗೂ ಭೈರತಿ ಬಸವರಾಜ್, ಟ್ರಸ್ಟ್‌ನ ಅಧ್ಯಕ್ಷ ಟಿ.ಬಿ.ಬಳಗಾವಿ ಹಾಗೂ ಇತರರು ಇದ್ದಾರೆ –ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, 'ಕುರುಬರು ಜನಸಂಖ್ಯೆಯಲ್ಲಿ ಹೆಚ್ಚಿದ್ದೇವೆ. ಆದರೆ, ಅಧಿಕಾರದ ವರ್ಗದಲ್ಲಿರುವವರ ಸಂಖ್ಯೆ ಕಡಿಮೆ. ಸಮುದಾಯದವರು ನೇರವಾಗಿ ಐಎಎಸ್, ಐಪಿಎಸ್ ಸ್ಥಾನಗಳನ್ನು ಅಲಂಕರಿಸುವುದು ವಿರಳ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಒಂದೇ ಸಮುದಾಯವರು ಉನ್ನತ ಸ್ಥಾನಗಳಲ್ಲಿ ಇರುತ್ತಾರೆ. ಪದೋನ್ನತಿ ಪಟ್ಟಿಗೆ ಬರುವ ಕೆಲ ಸಮುದಾಯದ ಅಧಿಕಾರಿಗಳನ್ನು ಕಾರಣಾಂತರಗಳಿಂದ ಕೈಬಿಡಲಾಗುತ್ತದೆ. ಇದು, ನಮಗೆಲ್ಲ ಎಚ್ಚರಿಕೆಯ ಗಂಟೆ' ಎಂದು ಹೇಳಿದರು.

'ಸಮುದಾಯದ ಅಧಿಕಾರಿಗಳನ್ನು ರಕ್ಷಿಸುವ ಮತ್ತು ಬೆಂಬಲಿಸುವ ಕೆಲಸವನ್ನು ಅಧಿಕಾರದಲ್ಲಿರುವ ಸಮುದಾಯದ ನಾಯಕರೇ ಮಾಡಬೇಕು' ಎಂದು ಮನವಿ ಮಾಡಿದರು.

ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್, 'ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಅಧಿಕಾರ ತಲುಪಬೇಕು. ಆದರೆ, ಈಗಿನ ಸರ್ಕಾರಗಳು ಜಿಲ್ಲಾಧಿಕಾರಿ ಸೇರಿದಂತೆ ಉನ್ನತ ಅಧಿಕಾರಿಗಳ ಅಧಿಕಾರವನ್ನೇ ಮೊಟಕುಗೊಳಿಸುತ್ತಿವೆ. ಅಧಿಕಾರ ಕೊಟ್ಟು ಅದನ್ನು ಮತ್ತೆ ಕಸಿದುಕೊಳ್ಳಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಅಧಿಕಾರಿಗಳಿಗೆ ಅಭಿನಂದನೆ: ಸಮುದಾಯದಲ್ಲಿ ಐಎಎಸ್ ಮತ್ತು ಐಪಿಎಸ್ ಸೇವೆಗಳಿಗೆ ಪದೋನ್ನತಿ ಪಡೆದಿರುವ ಅಧಿಕಾರಿಗಳಾದ ಕರ್ನಾಟಕ ರಸ್ತೆ ಸಾರಿಗೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಿ.ಆರ್. ಶಿವಪ್ರಸಾದ್, ಜಲಮಂಡಳಿ ಮುಖ್ಯ ಆಡಳಿತಾಧಿಕಾರಿ ಮತ್ತು ಕಾರ್ಯದರ್ಶಿ ಎಂ.ಮಹೇಶ್, ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಪ್ರಧಾನ ವ್ಯವಸ್ಥಾಪಕ (ಆಡಳಿತ) ಜಿ.ಲಿಂಗಮೂರ್ತಿ, ಕೊಡಗು ಅರಣ್ಯ ಕೋಶದ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ. ಚಂದ್ರಕಾಂತ್, ಆಂತರಿಕಾ ಭದ್ರತಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಎಚ್.ತೆಕ್ಕಣ್ಣವರ್, ಕರ್ನಾಟಕ ಲೋಕಾಯುಕ್ತದ ವಿಜಯಪುರ ಪೊಲೀಸ್ ವರಿಷ್ಠಾಧಿಕಾರಿ ಅನಿತಾ ಭೀಮಪ್ಪ ಅದ್ದನ್ನವರ್, ಬೆಂಗಳೂರು ಗುಪ್ತವಾರ್ತೆ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನಬಾಲದಂಡಿ, ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಹರಿಬಾಬು ಅವರನ್ನು ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಕೋವಿಡ್ ಹೆಚ್ಚಳ: ಜೈಪುರ ಸಾಹಿತ್ಯ ಉತ್ಸವ ಮುಂದೂಡಿಕೆ

ನವದೆಹಲಿ: ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಜ.28ರಿಂದ ಫೆಬ್ರುವರಿ 1ರವರೆಗೆ ನಡೆಯಬೇಕಿದ್ದ ಜೈಪುರ ಸಾಹಿತ್ಯ ಉತ್ಸವವನ್ನು (ಜೆಎಲ್‌ಎಫ್) ಮುಂದೂಡಲಾಗಿದೆ ಎಂದು ಸಂಘಟಕರು ಶುಕ್ರವಾರ ತಿಳಿಸಿದ್ದಾರೆ.

ಈ ಉತ್ಸವವನ್ನು ಮಾರ್ಚ್ 5–14ರವರೆಗೆ ಆಯೋಜಿಸಲಾಗಿದೆ. ಮಾ.5 ರಿಂದ 9ರವರೆಗೆ ವರ್ಚುವಲ್ ವಿಧಾನದ ಮೂಲಕ ಹಾಗೂ ಮಾ.10ರಿಂದ 14ರ ವರೆಗೆ ಭೌತಿಕವಾಗಿ ನಡೆಯಲಿದೆ ಎಂದು ಈ ಉತ್ಸವದ ನಿರ್ಮಾಪಕ ಸಂಜಯ್ ಕೆ.ರಾಯ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಲೇಖಕರು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರತಿನಿಧಿಗಳು ಸೇರಿದಂತೆ ವಿಶ್ವದೆಲ್ಲೆಡೆಯಿಂದ 250 ಮಂದಿ ಈ ಉತ್ಸವದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಹೆಚ್ಚು ಜನರಿಗೆ ಪಾಲ್ಗೊಳ್ಳಲು ಅವಕಾಶ ನೀಡುವ ಸಲುವಾಗಿ ಈ ಬದಲಾವಣೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ಪ್ರತಿಬಾರಿ ಜೈಪುರದ ಡಿಗ್ಗಿ ಪ್ಯಾಲೇಸ್‌ನಲ್ಲಿ ಜೆಎಲ್‌ಎಫ್ ನಡೆಸಲಾಗುತ್ತದೆ. ಆದರೆ, ಈ ಬಾರಿಯ ಕಾರ್ಯಕ್ರಮವನ್ನು ಹೋಟೆಲ್ ಕ್ಲಾರ್ಕ್ಸ್ ಅಂಬರ್‌ನಲ್ಲಿ ಆಯೋಜನೆ ಮಾಡಲಾಗಿದೆ.

ಚಿತ್ರಾವಳಿ



ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಸ್ಥರಿಗೆ ₹1 ಲಕ್ಷ ಮೊತ್ತದ ಪರಿಹಾರದ ಚೆಕ್ ಅನ್ನು ಶಾಸಕ ಎಂ.ಕೃಷ್ಣಪ್ಪ ಅವರು ಆರ್‌ಬಿಐ ಬಡಾವಣೆಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ವಿತರಿಸಿದರು. ಮುಖಂಡರಾದ ಕೆ.ಸೋಮಶೇಖರ್, ಲಲಿತಾ ಟಿನಾರಾಯಣ್, ವಿ.ಬಾಲಕೃಷ್ಣ, ರಮೇಶ್ ರಾಜು ಹಾಗೂ ಇತರರು ಇದ್ದಾರೆ.



ಕೋವಿಡ್‌ನಿಂದ ಮೃತಪಟ್ಟ ಕುಟುಂಬಸ್ಥರಿಗೆ ತಲಾ ₹1 ಲಕ್ಷದ ಪರಿಹಾರ ಚೆಕ್ ಅನ್ನು ಶಾಸಕ ಬೈರತಿ ಸುರೇಶ್ ಅವರು ಆರ್.ಟಿ.ನಗರದ ಎಚ್‌ಎಂಟಿ ಆಟದ ಮೈದಾನದಲ್ಲಿ ಶುಕ್ರವಾರ ನಡೆದ 'ಸಾಂತ್ವನ' ಕಾರ್ಯಕ್ರಮದಲ್ಲಿ ವಿತರಿಸಿದರು. ಕಾಂಗ್ರೆಸ್ ಮುಖಂಡರಾದಅಬ್ದುಲ್ ವಾಜೀದ್, ಆನಂದ್ ಕುಮಾರ್, ಬಾಲಾಜಿ, ಮುಜಾಮಿಲ್ ಅಹ್ಮದ್ ಹಾಗೂ ಕಾರ್ಯಕರ್ತರು ಇದ್ದಾರೆ.

ಪಂಜಾಬ್ ಸರ್ಕಾರ ವಜಾಗೆ ಮನವಿ

ಬೆಂಗಳೂರು: ಪ್ರಧಾನಿಯವರಿಗೆ ಸೂಕ್ತ ಭದ್ರತೆ ನೀಡದೇ ಕರ್ತವ್ಯದಿಂದ ವಿಮುಖವಾಗಿರುವ ಪಂಜಾಬ್ ಸರ್ಕಾರವನ್ನು ವಜಾ ಮಾಡಿ, ಆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಒತ್ತಾಯಿಸಿದ್ದಾರೆ.

ನಳಿನ್ ಕುಮಾರ್ ನೇತೃತ್ವದ ನಿಯೋಗ ಶುಕ್ರವಾರ ರಾಜ್ಯಪಾಲರ ಥಾವರಚಂದ್ ಗೆಹಲೋತ್ ಅವರಿಗೆ ಈ ಬಗ್ಗೆ ಮನವಿ ಅರ್ಪಿಸಿದೆ. ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜು ನಿಯೋಗದಲ್ಲಿದ್ದರು.

ಆನೆ ದಾಳಿ; ಅರಣ್ಯ ಇಲಾಖೆ ನಾಲ್ವರು ಸಿಬ್ಬಂದಿ ಪಾರು

ಗುಂಡ್ಲುಪೇಟೆ: ಬಂಡೀಪುರ ಸಂರಕ್ಷಿತ ಪ್ರದೇಶದ ಓಂಕಾರ ವಲಯದಲ್ಲಿ ಶುಕ್ರವಾರ ಆನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಸಂದರ್ಭದಲ್ಲಿ ಕಾಡಾನೆಯೊಂದು ಅರಣ್ಯ ಇಲಾಖೆಯ ವಾಹನದ ಮೇಲೆ ದಾಳಿ ನಡೆಸಿದ್ದು, ನಾಲ್ವರು ಸಿಬ್ಬಂದಿ ಕೂದಲೆಳೆಯ ಅಂತರದಲ್ಲಿ ಪಾರಾದರು.

ಕುರುಬರ ಹುಂಡಿ ಗ್ರಾಮದ ಬಳಿ ಘಟನೆ ನಡೆದಿದ್ದು, ಉಪ ವಲಯ ಅರಣ್ಯಾಧಿಕಾರಿ ಕೆ.ಪಿ. ಅಮರ್, ಸಿಬ್ಬಂದಿ ಮಾದಪ್ಪ, ಶಿವು ಹಾಗೂ ರಾಜಣ್ಣ ವಾಹನದಲ್ಲಿದ್ದರು. ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇಲಾಖೆಯ ಜೀಪಿನ ಮುಂಭಾಗ ಹಾನಿಗೀಡಾಗಿದೆ.

ವಲಯದ ನೀರಳ್ಳ ಪ್ರದೇಶದ ಬಳಿ ಬೀಡುಬಿಟ್ಟದ್ದ ಆನೆಗಳು ಪ್ರತಿದಿನ ಬರುತ್ತಿದ್ದ ಬಗ್ಗೆ ಗ್ರಾಮಸ್ಥರು ದೂರು ನೀಡಿದ್ದರು. ಶುಕ್ರವಾರವೂ ಗ್ರಾಮದತ್ತ ಬರುತ್ತಿದ್ದ ಬಗ್ಗೆ ದೊರೆತ ಮಾಹಿತಿ ಮೇರೆಗೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು.

‘ವಿದ್ಯಾಗಮ’ ಮತ್ತೆ ಆರಂಭಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನ ಮತ್ತು ಅನುದಾನರಹಿತ ಶಾಲೆಗಳ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗಾಗಿ ವಿದ್ಯಾಗಮ ಕಾರ್ಯಕ್ರಮವನ್ನು ಮತ್ತೆ ಆರಂಭಿಸುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ 1ರಿಂದ 9ನೇ ತರಗತಿಯವರೆಗೆ ಭೌತಿಕ ತರಗತಿಗಳನ್ನು ಜ.6ರಿಂದ 19ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಈ ಕಾರ್ಯಕ್ರಮ ಆರಂಭಿಸುವಂತೆ ಸೂಚಿಸಲಾಗಿದೆ. ಇದಕ್ಕಾಗಿ ಪೂರ್ವ ತಯಾರಿಗಳನ್ನು ಕೈಗೊಳ್ಳಬೇಕು ಮತ್ತು ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನ ಅಧಿಕಾರಿಗಳು ಆಯಾ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ತಿಳಿಸಲಾಗಿದೆ.

ಪ್ರತಿ ಶಾಲೆಯ 20ರಿಂದ 25 ವಿದ್ಯಾರ್ಥಿಗಳಿಗೆ ಒಬ್ಬ ಮಾರ್ಗದರ್ಶಿ ಶಿಕ್ಷಕರನ್ನು ನೇಮಿಸಬೇಕು. ಈ ಶಿಕ್ಷಕರು ವಾರದ ವೇಳಾಪಟ್ಟಿಯನ್ನು ನೀಡಿ ಮಕ್ಕಳ ಸ್ವಯಂ ಕಲಿಕೆಗೆ ಪೂರಕವಾಗಿ ಮಾರ್ಗದರ್ಶನ ನೀಡಬೇಕು ಎಂದು ಸೂಚಿಸಲಾಗಿದೆ.

ವಿದ್ಯಾಗಮ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಭೌತಿಕವಾಗಿ (ಆಫ್‌-ಲೈನ್ ತರಗತಿಗಳು) ಬೋಧನೆ ಮಾಡಬಹುದು. ಭೌತಿಕವಾಗಿ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಬೋಧನೆ ಮಾಡಬಹುದಾಗಿದೆ. ಬಹುತೇಕ ಮೊಬೈಲ್ ದೂರವಾಣಿಗಳನ್ನು ಪೋಷಕರೇ ಹೊಂದಿರುತ್ತಾರೆ. ಹೀಗಾಗಿ, ಪೋಷಕರು ಮನೆಯಲ್ಲಿ ಲಭ್ಯವಾಗುವ ಸಮಯದಲ್ಲಿ ಸಂಪರ್ಕಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಲಾಗಿದೆ.

ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿರುವ ಈ ಕಾರ್ಯಕ್ರಮದಿಂದ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ಮುಂತಾದ ಸಾಮಾಜಿಕ ಪಿಡುಗುಗಳನ್ನು ತಡೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಲಾಗಿದೆ.

ಬಿಸಿಯೂಟಕ್ಕೆ ಅವಕಾಶ: ಆಯಾ ಶಾಲೆಯ ಎಸ್‌ಡಿಎಂಸಿ ಅಥವಾ ಪೋಷಕರೊಂದಿಗೆ ಚರ್ಚಿಸಿ, ಒಪ್ಪಿಗೆ ಪಡೆದು ವಿದ್ಯಾಗಮ ಕಾರ್ಯಕ್ರಮದಲ್ಲಿ ಮಧ್ಯಾಹ್ನದ ಬಿಸಿಯೂಟ ತಯಾರಿಸಿ ವಿತರಿಸಬಹುದು. ವಿದ್ಯಾಗಮ ಕಾರ್ಯಕ್ರಮದಲ್ಲಿ ಹಾಜರಾಗದ ವಿದ್ಯಾರ್ಥಿಗಳಿಗೆ ಆಹಾರ ಧಾನ್ಯಗಳನ್ನು ಅವರ ಪೋಷಕರಿಗೆ ವಿತರಿಸಬೇಕು ಎಂದು ಸೂಚಿಸಲಾಗಿದೆ.

ಪಾಳಿ ಪದ್ಧತಿ ಅನುಸರಿಸಲು ಸಲಹೆ

ವಿದ್ಯಾಗಮ ಕಾರ್ಯಕ್ರಮವನ್ನು ನಗರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಸ್ಥಳಾವಕಾಶ ಕೊರತೆ ಎದುರಾಗಬಹುದು. ಗ್ರಾಮೀಣ ಪ್ರದೇಶದಲ್ಲಿ ಅನಗತ್ಯ ಗೊಂದಲಗಳು ಸೃಷ್ಟಿಯಾಗುವ ಸಾಧ್ಯತೆಗಳಿರುತ್ತವೆ. ಹೀಗಾಗಿ, ಪಾಳಿ ಪದ್ಧತಿಯಲ್ಲಿ ಪ್ರತಿ ದಿನ ನಾಲ್ಕು ಗಂಟೆಗಳ ಕಾಲಮಿತಿಯಲ್ಲಿ ವಿದ್ಯಾಗಮ ಕಾರ್ಯಕ್ರಮ ಕೈಗೊಳ್ಳಬಹುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

1ರಿಂದ 3ನೇ ತರಗತಿ ವಿದ್ಯಾರ್ಥಿಗಳಿಗೆ ವಾರಕ್ಕೆ ಎರಡು ದಿನ ಹಾಗೂ 4ರಿಂದ 5 ತರಗತಿಗಳಿಗೆ ವಾರಕ್ಕೆ ಮೂರು ದಿನಗಳಂತೆ ತಲಾ 45 ನಿಮಿಷದ ಮೂರು ಅವಧಿಗಳಂತೆ ಒಟ್ಟು 2 ಗಂಟೆ 30 ನಿಮಿಷಗಳನ್ನು ನಿಗದಿಪಡಿಸಲಾಗಿದೆ.

6ನೇ ತರಗತಿಗೆ ವಾರಕ್ಕೆ ಮೂರು ದಿನಗಳು, 7 ಮತ್ತು 8ನೇ ತರಗತಿಗಳಿಗೆ ವಾರಕ್ಕೆ 2 ದಿನಗಳಂತೆ ತಲಾ 45 ನಿಮಿಷದ 4 ಅವಧಿಗಳಂತೆ ಒಟ್ಟು 3 ಗಂಟೆಗಳನ್ನು ನಿಗದಿಪಡಿಸಲಾಗಿದೆ.

ಪ್ರೌಢಶಾಲೆಗಳಲ್ಲಿ 8ನೇ ತರಗತಿಗೆ ವಾರಕ್ಕೆ ಎರಡು ದಿನಗಳಂತೆ ಮತ್ತು 9ನೇ ತರಗತಿಗೆ ವಾರಕ್ಕೆ 2 ದಿನಗಳಂತೆ ತಲಾ 45 ನಿಮಿಷದ 4 ಅವಧಿಗಳಂತೆ ಒಟ್ಟು 3 ಗಂಟೆಗಳನ್ನು ಬೋಧನೆ ಮಾಡಬಹುದು ಎಂದು ಸೂಚಿಸಲಾಗಿದೆ.

ಈ ಸೂಚನೆಗಳನ್ನು ಸ್ಥಳಾವಕಾಶದ ಲಭ್ಯತೆ ಅನುಸಾರ ಬದಲಾವಣೆ ಮಾಡಿಕೊಳ್ಳಬಹುದು ಎಂದು ತಿಳಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ, ಬೆಂಗಳೂರು-560001

ದೂರವಾಣಿ: 080-22215601, 22211246 ಫ್ಯಾಕ್ಸ್: 22215602

ಸಂಖ್ಯೆ:ಡಿವೈಇಎಸ್/ತಾಂ.ಶಾಖೆ/ಖೇಲೋ/ಇಂ/125/2021-22 ದಿನಾಂಕ: 04.01.2022

ಟೆಂಡರ್ ಪ್ರಕಟಣೆ – (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001. ಇವರು ಬೆಂಗಳೂರಿನ **ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣಕ್ಕೆ ಬಣ್ಣ ಬಳಿಯುವುದು, ಇಂಟರ್ ಲಾಕ್ ಪೇವರ್ಸ್ ಅಳವಡಿಸುವುದು, ಕೂಡು ರಸ್ತೆಗಳ ಅಭಿವೃದ್ಧಿ ಮತ್ತು ವಿದ್ಯುದೀಕರಣ ಮಾಡುವ ಕಾಮಗಾರಿಯನ್ನು** ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಅಂದಾಜು ಮೊತ್ತ : ರೂ. 248.73/-. ಲಕ್ಷಗಳು. **ಇಎಂಡಿ ಮೊತ್ತ:** 3.73/- ಲಕ್ಷಗಳು.

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. 1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 19.01.2022 ಸಮಯ 16.00 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20.01.2022 ಸಮಯ 16.30 ಗಂಟೆಗೆ.** 3) **ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು (ಆಡಳಿತ), ಮತ್ತು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ವಾಸಾಸಂಇ/ಬೆಂನ/2744/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ. 6 ಅಡಿ ದೈಹಿಕ ಅಂತರ ಪಾಲಿಸಿ. ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ.

ಮೇಕೆದಾಟು: ನೀರಾವರಿ ತಜ್ಞ ಕ್ಯಾಪ್ಟನ್ ಎಸ್. ರಾಜಾರಾವ್

1924ರಲ್ಲೇ ಒಪ್ಪಿಗೆ ನೀಡಿದ್ದ ತಮಿಳುನಾಡು!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಯೋಜನೆಗಾಗಿ ಮೇಕೆದಾಟು ಬಳಿ ಜಲಾಶಯ ನಿರ್ಮಿಸಲು 1924ರಲ್ಲಿ ತಮಿಳುನಾಡು ಒಪ್ಪಿಗೆ ನೀಡಿತ್ತು. ಆದರೆ, ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸುಪ್ರೀಂ ಕೋರ್ಟ್ ಮುಂದೆ ವಾದ ಮಂಡಿಸಿಲ್ಲ' ಎಂದು ನೀರಾವರಿ ತಜ್ಞ ಕ್ಯಾಪ್ಟನ್ ಎಸ್. ರಾಜಾರಾವ್ ಅಭಿಪ್ರಾಯಪಟ್ಟರು.



ಕ್ಯಾಪ್ಟನ್ ಎಸ್. ರಾಜಾರಾವ್

'ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ– ಬೆಂಗಳೂರು ನಗರ ಮತ್ತು ಇತರ ಜಿಲ್ಲೆಗಳಿಗೆ ವರದಾನವೇ?' ಕುರಿತು ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಅಂದಿನ ಮೈಸೂರು ದರ್ಬಾರ್ ಜತೆ ಮದ್ರಾಸ್ ಸರ್ಕಾರ ಮಾಡಿಕೊಂಡ ಒಪ್ಪಂದದ ಬಗ್ಗೆ 1924ರ ಜುಲೈ 3ರಂದು ಅಲ್ಲಿನ ಸರ್ಕಾರದ ಲೋಕೋಪಯೋಗಿ ಇಲಾಖೆಯ ಜಂಟಿ ಕಾರ್ಯದರ್ಶಿ ಪಿ. ಹಾಕಿನ್ಸ್ ಅವರೇ ಪತ್ರಿಕಾ ಪ್ರಕಟಣೆ ನೀಡಿದ್ದರು' ಎಂದು ದಾಖಲೆ ಸಮೇತ ವಿವರಿಸಿದರು.

'ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳು ಸುದೀರ್ಘ ಅವಧಿ ವಿಚಾರಣೆಗೆ ನಡೆಸಿವೆ. ಅಂತರರಾಜ್ಯ ಜಲ ಕಾಯ್ದೆಯನ್ನು ವಿಶ್ಲೇಷಿಸಿದಾಗ ಕರ್ನಾಟಕಕ್ಕೆ ಸುಪ್ರೀಂ ಕೋರ್ಟ್‌ನಿಂದಲೂ ಅನ್ಯಾಯವಾಗಿದೆ. ನೀರಿನ ಕೊರತೆಯಾದಾಗ ರಾಜ್ಯಗಳಿಗೆ ಪರಿಹಾರ ಸೂತ್ರವನ್ನು ನೀಡಲಾಗಿದೆ. ಆದರೆ, ಹೆಚ್ಚುವರಿ ನೀರು ಲಭ್ಯವಿದ್ದಾಗ ಏನು ಮಾಡಬೇಕು ಎನ್ನುವುದನ್ನು ಕಾವೇರಿ ನ್ಯಾಯಮಂಡಳಿ ತಿಳಿಸಿಲ್ಲ. ಹೆಚ್ಚುವರಿ ನೀರನ್ನು ಸಹ ನಾವೇಕೆ ಬಳಸಿಕೊಳ್ಳಬಾರದು? ಈ ಬಗ್ಗೆ ರಾಜ್ಯದ ಪರ ವಕೀಲರು ಸಹ ಪ್ರಶ್ನಿಸಿಲ್ಲ' ಎಂದು ಹೇಳಿದರು.

'ಮೇಕೆದಾಟು ಯೋಜನೆ ಅನುಷ್ಠಾನದಿಂದ ವನ್ಯಜೀವಿಗಳಿಗೆ ಆಗುವ ತೊಂದರೆಗಳ ಬಗ್ಗೆ ಸರ್ಕಾರ ಗಮನ ನೀಡಲೇಬೇಕು. ಅಳಿವಿನ ಅಂಚಿನಲ್ಲಿ ವನ್ಯಜೀವಿಗಳನ್ನು ರಕ್ಷಿಸಬೇಕು' ಎಂದು ಸಲಹೆ ನೀಡಿದರು.

'ತಮಿಳುನಾಡಿಗೆ ಹೆಚ್ಚು ಅನುಕೂಲ'

'ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಅನುಕೂಲಗಳಿದ್ದರೂ ವಿರೋಧ ವ್ಯಕ್ತಪಡಿಸುತ್ತಿದೆ' ಎಂದು ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಅಧ್ಯಕ್ಷ ಮತ್ತು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಹೇಳಿದರು.

'1991ರಿಂದ 2021ರವರೆಗೆ ಹೆಚ್ಚುವರಿ ನೀರನ್ನು ತಮಿಳುನಾಡಿಗೆ ಹರಿಸಲಾಗಿದೆ. ಈ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳದ ಕಾರಣ 85ರಿಂದ 90 ಟಿಎಂಸಿ ಅಡಿ ನೀರು ಸಮುದ್ರಕ್ಕೆ ಹರಿದು ಹೋಗಿದೆ' ಎಂದರು. 'ಮೇಕೆದಾಟು ಯೋಜನೆಯಿಂದ ಬೆಂಗಳೂರು ಸೇರಿದಂತೆ ಸುತ್ತಮುತ್ತ ಜಿಲ್ಲೆಗಳ 2.5 ಕೋಟಿ ಜನರಿಗೆ ಅನುಕೂಲವಾಗಲಿದೆ. ಆದರೆ, ರಾಜ್ಯದಲ್ಲಿ ಜಲಾಶಯ ನಿರ್ಮಿಸಲು ತೊಡಕಗಳು ಹೆಚ್ಚು. ಕರ್ನಾಟಕದಲ್ಲೇ ಕಡಿಮೆ ಜಲಾಶಯಗಳಿವೆ. ದೇಶದಲ್ಲಿ 5386 ಜಲಾಶಯಗಳಿವೆ. ಮಹಾರಾಷ್ಟ್ರದಲ್ಲಿ 1857 ಮತ್ತು ಕೇರಳದಲ್ಲಿ 56 ಹಾಗೂ ಕರ್ನಾಟಕದಲ್ಲಿ ಕೇವಲ 26 ಅಣೆಕಟ್ಟುಗಳಿವೆ' ಎಂದು ವಿವರಿಸಿದರು.

ತಜ್ಞರ ಅಭಿಪ್ರಾಯಗಳನ್ನು ಸರ್ಕಾರ ಪರಿಗಣಿಸುತ್ತಿಲ್ಲ. ಕೇವಲ ರಾಜಕೀಯ ಲಾಭ ಪಡೆಯುವುದೇ ಮುಖ್ಯವಾಗುತ್ತಿದೆ. ಸಮರ್ಪಕ ದಾಖಲೆಗಳನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದೆ ಮಂಡಿಸಬೇಕು

ಮಂಜುಳಾ ಮಾನಸ, ಕೆಪಿಸಿಸಿ ವಕ್ತಾರರು

ಪರಿಸರ ನಾಶ ಮಾಡಿ ಜಲಾಶಯಗಳನ್ನು ನಿರ್ಮಿಸುವುದರಲ್ಲಿ ಅರ್ಥ ಇಲ್ಲ. ಮಳೆ ನೀರು ಸಂಗ್ರಹದಂತ ಯೋಜನೆಗಳಿಗೆ ಹೆಚ್ಚು ಆದ್ಯತೆ ನೀಡಬೇಕು. ಅಳಿವಿನ ಅಂಚಿನಲ್ಲಿರುವ ವನ್ಯಜೀವಿಗಳ ರಕ್ಷಣೆಯ ಬಗ್ಗೆ ಗಮನ ನೀಡಬೇಕಾಗಿದೆ

ಸಹದೇವ್, ಪರಿಸರ ಕಾರ್ಯಕರ್ತ

ನಮ್ಮ ನೀರು ಬಳಸಿಕೊಳ್ಳಲು ಯಾವುದೇ ತೊಂದರೆ ಇಲ್ಲ. ನ್ಯಾಯಮಂಡಳಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ಆದರೆ, ರಾಜಕೀಯ ಪಕ್ಷಗಳು ಈ ವಿಷಯವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ

ಡಾ. ಗಲಗಲಿ, ನೀರಾವರಿ ತಜ್ಞ

ಕೋವಿಡ್ ಕರ್ಫ್ಯೂ ಅಲ್ಲ; ಬಿಜೆಪಿ ಕರ್ಫ್ಯೂ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಕೋವಿಡ್ ಗಮನಾರ್ಹವಾಗಿ ಏರಿದ್ದರಿಂದ ಲಾಕ್‌ಡೌನ್ ಮಾಡಲಾಗಿತ್ತು. ಈಗ ಶೇ 3ಕ್ಕೆ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಲಾಗಿದೆ. ಇದು ಕೋವಿಡ್ ಕರ್ಫ್ಯೂ ಅಲ್ಲ; ಬಿಜೆಪಿ ಕರ್ಫ್ಯೂ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಿಡಿಕಾರಿದರು.

ಪಕ್ಷದ ಶಾಸಕರು ಮತ್ತು ಮುಖಂಡರ ಜತೆ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೆ ಲಾಕ್‌ಡೌನ್ ವೇಳೆ ಶೇ 40ರಷ್ಟು ಹಾಸಿಗೆಗಳು ಭರ್ತಿಯಾಗಿದ್ದವು. ಈಗ ಆಸ್ಪತ್ರೆಗೆ ದಾಖಲಾಗುವವರೇ ಕಡಿಮೆ. ಸಾವಿನ ಸಂಖ್ಯೆಯೂ ಇಲ್ಲ. ಕಾಂಗ್ರೆಸ್ ಮೇಲಿನ ರಾಜಕೀಯ ದ್ವೇಷದಿಂದ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಲಾಗಿದೆ' ಎಂದರು.

ಎಲ್ಲ ಜಿಲ್ಲೆಗಳಲ್ಲೂ ಎಷ್ಟು ಮಂದಿ ಕೋವಿಡ್ ಸೋಂಕಿತರಿದ್ದಾರೆ? ಎಷ್ಟು ಮಂದಿ ಆಸ್ಪತ್ರೆಯಲ್ಲಿದ್ದಾರೆ? ಎಷ್ಟು ಮಂದಿ ನಿಗಾ ಘಟಕದಲ್ಲಿದ್ದಾರೆ? ಎಂಬ ಮಾಹಿತಿಯನ್ನು ಕಾಂಗ್ರೆಸ್ ಸಂಗ್ರಹಿಸಿದೆ. ಸರ್ಕಾರ ಸುಳ್ಳು ಲೆಕ್ಕ ತೋರಿಸಿ, ಕರ್ಫ್ಯೂ ಜಾರಿ ಮಾಡಿದೆ ಎಂದು ಆರೋಪಿಸಿದರು.

ರಾಮನಗರ ಜಿಲ್ಲೆಯಲ್ಲಿ ಸೋಂಕಿನ ತೀವ್ರತೆ ಇಲ್ಲ. ಸಾವು ಕೂಡ ಇಲ್ಲ. ಪ್ರವಾಸಿ ತಾಣಗಳನ್ನು ಬಂದ್ ಮಾಡಲಾಗಿದೆ. ಬಿಜೆಪಿ ಸರ್ಕಾರ ವಿಜ್ಞಾನ ಮತ್ತು ತಾಂತ್ರಿಕತೆ ಆಧಾರದಲ್ಲಿ ಮಾತನಾಡುತ್ತಿಲ್ಲ. ಕೇವಲ ರಾಜಕೀಯವಾಗಿ ಮಾತನಾಡುತ್ತಿದೆ ಎಂದು ಹೇಳಿದರು.



ಕನಕಪುರ ತಾಲ್ಲೂಕಿನಲ್ಲಿ ಪಾದಯಾತ್ರೆ ಸಾಗಲಿರುವ ರಸ್ತೆ ಬದಿಯ ಮನೆಯ ಗೋಡೆ ಮೇಲೆ 'ನಮ್ಮ ನೀರು ನಮ್ಮ ಹಕ್ಕು' ಘೋಷಣೆ ರಾರಾಜಿಸುತ್ತಿರುವುದು

ಸರ್ಕಾರದ ನಿರ್ಧಾರವನ್ನು ಆರು ಸಚಿವರು ಸಂಪುಟ ಸಭೆಯಲ್ಲೇ ವಿರೋಧಿಸಿದ್ದಾರೆ. ಸರ್ಕಾರ ಸುಳ್ಳು ಅಂಕಿಅಂಶ ನೀಡುತ್ತಿದೆ. ಉದ್ದೇಶಪೂರ್ವಕವಾಗಿ ಹೆಚ್ಚಿನ ಪ್ರಕರಣ ತೋರಿಸಲಾಗಿದೆ. ಈ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ತಜ್ಞರ ವರದಿ ಬಹಿರಂಗಕ್ಕೆ ಆಗ್ರಹ: ಶಾಸಕ ಯು.ಟಿ.ಖಾದರ್ ಮಾತನಾಡಿ, 'ಕರ್ಫ್ಯೂ ಹಿಂದೆ ವೈಜ್ಞಾನಿಕ ಚಿಂತನೆ ಇಲ್ಲ. ತಜ್ಞರ ವರದಿ ಹೆಸರಿನಲ್ಲಿ ಈ ರೀತಿ ಮಾಡಲಾಗುತ್ತಿದೆ. ತಜ್ಞರು ನೀಡಿರುವ ವರದಿಯನ್ನು ಏಕೆ ಬಹಿರಂಗಪಡಿಸುತ್ತಿಲ್ಲ' ಎಂದು ಪ್ರಶ್ನಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಾಸಕರಾದ ಅಜಯ್ ಸಿಂಗ್, ಶರತ್ ಬಚ್ಚೇಗೌಡ, ಮೇಲ್ಮನೆ ಮಾಜಿ ಸದಸ್ಯ ಎಂ. ನಾರಾಯಣ ಸ್ವಾಮಿ, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ.ಶ್ರೀನಿವಾಸ್, ಕೆಪಿಸಿಸಿ ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣಿ ಪಸ್ಥಿತರಿದ್ದರು.



ಕೋವಿಡ್ ಪ್ರಕರಣಗಳ ಏರಿಕೆ ಹಾಗೂ ಮೇಕೆದಾಟು ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ಇರುವ ಕಾರಣ ಕಾಂಗ್ರೆಸ್ ಪಕ್ಷ ಪಾದಯಾತ್ರೆಯನ್ನು ಮುಂದೂಡ ಬೇಕು

ಎಚ್.ಡಿ.ರೇವಣ್ಣ, ಶಾಸಕ

'ನಾವೇನೂ ಓಮೈಕ್ರಾನ್ ತಳಿ ಹಿಡಿದು ತಂದಿಲ್ಲ'



ಬೆಂಗಳೂರು: 'ಇವರು ಪಾದಯಾತ್ರೆ ಮಾಡುತ್ತಾರೆ ಎಂದು ನಾವು ಓಮೈಕ್ರಾನ್ ತಳಿ ಹಿಡಿದುಕೊಂಡು ಬಂದಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, 'ಪಾದಯಾತ್ರೆನಾದರೂ ಮಾಡಲಿ, ಮ್ಯಾರಥಾನ್ ಆದರೂ ಮಾಡಲಿ. ನಮ್ಮ ವಿರೋಧವಿಲ್ಲ. ಆದರೆ ಪಾದಯಾತ್ರೆ ಸಮಯ ಮಾತ್ರ ಸರಿಯಿಲ್ಲ' ಎಂದರು.

'ಅವರ ಪಾದಯಾತ್ರೆ ಮಾಡಲು ನಮ್ಮ ವಿರೋಧವಿಲ್ಲ. ಎರಡು–ಮೂರು ತಿಂಗಳು ಬಿಟ್ಟು ಮಾಡಲಿ. ಮುಖ್ಯಮಂತ್ರಿಯಾಗಿ ಮತ್ತು ಸಚಿವರಾಗಿ ಕೆಲಸ ಮಾಡಿದವರಿಗೆ ಇದು ತಿಳಿಯದ ಸಂಗತಿಯಲ್ಲ' ಎಂದು ಹೇಳಿದರು.


ಡಿಕೆಶಿ ನಿವಾಸದಲ್ಲಿ ಸಭೆ ಇಂದು

ಬೆಂಗಳೂರು: ಮೇಕೆದಾಟುವಿನಿಂದ ಭಾನುವಾರ ಆರಂಭವಾಗುವ ಪಾದಯಾತ್ರೆಗೆ ಪೂರ್ವಭಾವಿಯಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಕನಕಪುರದ ಮನೆಯಲ್ಲಿ ಶನಿವಾರ ಸಂಜೆ ಕಾಂಗ್ರೆಸ್ ಶಾಸಕರು ಮತ್ತು ಹಿರಿಯ ಮುಖಂಡರ ಸಭೆ ನಡೆಯಲಿದೆ. ಸಭೆಗೆ ಬರುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಈ.ತುಕಾರಾಮ್ ಎಲ್ಲ ಶಾಸಕರಿಗೂ ಶುಕ್ರವಾರ ಪತ್ರ ಕಳುಹಿಸಿದ್ದಾರೆ. ಶನಿವಾರ ಮಧ್ಯಾಹ್ನ 3 ಗಂಟೆಯೊಳಗೆ ಕನಕಪುರ ತಲುಪಬೇಕು, ಎಲ್ಲ ಶಾಸಕರೂ ಲಗ್ಗೇಜಿನ ಸಮೇತ ಬರಬೇಕು ಎಂಬ ಸೂಚನೆ ಪತ್ರದಲ್ಲಿದೆ. ಭಾನುವಾರ ಬೆಳಿಗ್ಗೆ 9ಕ್ಕೆ ಮೇಕೆದಾಟುವಿನಿಂದ ಬೆಂಗಳೂರಿಗೆ ಪಾದಯಾತ್ರೆ ಆರಂಭವಾಗಲಿದೆ. ಶನಿವಾರ ಸಂಜೆ ಕನಕಪುರದಲ್ಲಿ ಸಮಾಲೋಚನೆ ನಡೆಯಲಿದೆ. ಶಾಸಕರು, ಮುಖಂಡರಿಗೆ ಅಲ್ಲಿಯೇ ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪಾದಯಾತ್ರೆ: ಚಿತ್ರೋದ್ಯಮ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ನಮ್ಮ ಹಕ್ಕು. ಈ ಹಕ್ಕು ಉಳಿಸಿಕೊಳ್ಳಲು ಪಕ್ಷಾತೀತವಾಗಿ ನಡೆಯುತ್ತಿರುವ ಪಾದಯಾತ್ರೆಗೆ ಚಿತ್ರೋದ್ಯಮದ ಸಂಪೂರ್ಣ ಬೆಂಬಲವಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್ ಹೇಳಿದರು.



ಡಿ.ಆರ್. ಜೈರಾಜ್



ಮುಖ್ಯಮಂತ್ರಿ ಚಂದ್ರು



ಉಮಾಶ್ರೀ

ಶುಕ್ರವಾರ ಮಂಡಳಿಯ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದೊಂದು ಪಕ್ಷಾತೀತವಾದ ಕಾರ್ಯಕ್ರಮ. ಇದಕ್ಕೆ ಬೆಂಬಲ ನೀಡಬೇಕು ಎಂದು ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು ವಾಣಿಜ್ಯ ಮಂಡಳಿಗೇ ಬಂದು ನಮ್ಮನ್ನು ಆಹ್ವಾನಿಸಿದ್ದರು. ಪಕ್ಷಾತೀತವಾದ ಹೋರಾಟ ಇದಾಗಿರುವ ಕಾರಣ ನಾವೂ ಇದರಲ್ಲಿ ಭಾಗವಹಿಸಬೇಕು ಎನ್ನುವ ನಿರ್ಧಾರ ಮಾಡಿದ್ದೇವೆ. ಕಲಾವಿದರನ್ನು ಭೇಟಿಯಾಗಿ ಇದರಲ್ಲಿ ಭಾಗವಹಿಸಬೇಕು ಎಂದು ವೈಯಕ್ತಿಕವಾಗಿ ಹಾಗೂ ಪತ್ರ ಮುಖೇನ ಕೇಳಿದ್ದೇವೆ. ಪ್ರಸ್ತುತ ಕೋವಿಡ್ ತೀವ್ರಗತಿಯಲ್ಲಿ ಹರಡುತ್ತಿದ್ದು, ಈ ಸಂದರ್ಭದಲ್ಲಿ ನಾವು ವೈಯಕ್ತಿಕವಾಗಿ ಭಾಗವಹಿಸುವುದು ಕಷ್ಟ. ಆದರೆ ನೈತಿಕ ಬೆಂಬಲ ಇದ್ದೇ ಇರುತ್ತದೆ ಎಂದು ಹಲವರು ತಿಳಿಸಿದ್ದಾರೆ. ವಾರಾಂತ್ಯ ಕರ್ಫ್ಯೂ ಇರುವುದರಿಂದ ಭಾನುವಾರ ಪಾದಯಾತ್ರೆಯಲ್ಲಿ ಭಾಗವಹಿಸುವುದು ಕಷ್ಟ. ಅವಕಾಶ, ಅನುಕೂಲ ಸಿಕ್ಕಿದ ಸಂದರ್ಭದಲ್ಲಿ ಪಾದಯಾತ್ರೆಯಲ್ಲಿ ಭಾಗವಹಿಸಬಹುದು ಎಂದು ಸದಸ್ಯರಿಗೆ ತಿಳಿಸಿದ್ದೇವೆ' ಎಂದರು.

ಪಾದಯಾತ್ರೆಯ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ, ನಟ ಮುಖ್ಯಮಂತ್ರಿ ಚಂದ್ರು ಅವರು ಮಾತನಾಡಿ, 'ನಾಡು, ನುಡಿ, ಗಡಿ ಹಾಗೂ ಜಲದ ವಿಚಾರ ಪಕ್ಷಾತೀತ. ಸಿನಿಮಾ ಕ್ಷೇತ್ರದ ಎಲ್ಲ ಅಂಗಸಂಸ್ಥೆಗಳೂ ಇದಕ್ಕೆ ಬೆಂಬಲ ನೀಡಿವೆ. ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು, ಪರಿಸ್ಥಿತಿಯನ್ನು ನೋಡಿಕೊಂಡು ಕಲಾವಿದರು ಭಾಗವಹಿಸಬಹುದು. ಅಥವಾ ನೈತಿಕ ಬೆಂಬಲ ನೀಡಿ, ಸಾಮಾಜಿಕ ಜಾಲತಾಣ ಬಳಸಿಕೊಂಡು ಈ ಕುರಿತು ಹೇಳಿಕೆಗಳನ್ನು ನೀಡಬಹುದು. ರಾಜ್ಯ, ಕೇಂದ್ರ ಸರ್ಕಾರದ ಜೊತೆ ಘರ್ಷಣೆ ಇದಲ್ಲ. ನಿಧಾನಗತಿಯಲ್ಲಿ ಈ ಯೋಜನೆ ಸಾಗುತ್ತಿರುವುದರಿಂದ ಶೀಘ್ರದಲ್ಲೇ ಅನುಮೋದನೆಗೆ ಒತ್ತಡ ಹೇರಲು ಈ ಕಾರ್ಯಕ್ರಮವಷ್ಟೇ. ಕಾನೂನಿನ ಚೌಕಟ್ಟಿನಲ್ಲಿ ಎಲ್ಲ ಮಾರ್ಗಸೂಚಿಗಳನ್ನೂ ನಾವು ಪಾಲಿಸುತ್ತೇವೆ. ರಾಜ್ಯ ಸರ್ಕಾರ ಇದನ್ನು ಜಿದ್ದಾಗಿ ತೆಗೆದುಕೊಳ್ಳಬಾರದು' ಎಂದರು.

'ಕಲಾವಿದರು ಇಂಥ ಸಂದರ್ಭದಲ್ಲೇ ಋಣ ಸಂದಾಯ ಮಾಡಬೇಕಾಗುತ್ತದೆ. ಜನರ ಬೆಂಬಲ ಇಲ್ಲದೇ ಇದ್ದರೆ ಕಲಾವಿದರು ಬದುಕಲು ಸಾಧ್ಯವಿಲ್ಲ. ಇದೀಗ ಜನರಿಗೋಸ್ಕರವೇ ಹೋರಾಟಕ್ಕಿಳಿಯುವ ಸಮಯ ಬಂದಿದೆ. ಜೊತೆಗೆ ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಹೇಳಿಕೆಗಳನ್ನು ನೀಡಿದರೆ ಈ ಹೋರಾಟಕ್ಕೆ ಮತ್ತಷ್ಟು ಬಲ ಬರಲಿದೆ' ಎಂದು ನಟಿ ಉಮಾಶ್ರೀ ಹೇಳಿದರು.



ನೆಲ, ಜಲ, ಭಾಷೆ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತುಕೊಂಡು ಇಡೀ ಚಿತ್ರರಂಗ ಸಹಕಾರ ಕೊಟ್ಟಿರುವುದನ್ನು ಕಂಡಿದ್ದೇವೆ. ಈ ಹೋರಾಟಕ್ಕೆ ಎಲ್ಲರೂ ಬೆಂಬಲ ನೀಡಬೇಕು.

ಜಯಮಾಲ, ನಟಿ



ಮರಿ ಟಗರಿಗೆ 2ಲಕ್ಷ

ಇಂಡಿ (ವಿಜಯಪುರ): ಇಲ್ಲಿನ ರೈತ ಬಾನಪ್ಪ ಪೂಜಾರಿ ಎಂಬುವವರು ಸಾಕಿದ್ದ ಏಳು ದಿನದ 'ಸುಲ್ತಾನ್' ಹೆಸರಿನ ಟಗರುಮರಿಯನ್ನು ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಸಿದ್ಧನಾಥ ಗ್ರಾಮದ ನಾಮದೇವ ಖೋಖರೆ ಎಂಬುವವರು ಶುಕ್ರವಾರ ₹2 ಲಕ್ಷಕ್ಕೆ ಖರೀದಿಸಿದರು. 'ಈ ಟಗರಿನ ಸಂತತಿ ಅಪರೂಪ. ಇದು ಪರಿಶುದ್ಧ 'ದೇಶಿ ಖಿಲಾರಿ' ತಳಿಯಾಗಿದೆ.' ಎಂದು ಬಾನಪ್ಪ ಪೂಜಾರಿ ತಿಳಿಸಿದರು.

ಮಾರಿಕಾಂಬಾ ಜಾತ್ರೆ ಮಾ.15 ರಿಂದ

ಶಿರಸಿ: ದಕ್ಷಿಣ ಭಾರತದ ಜಾಗೃತ ಶಕ್ತಿಪೀಠಗಳಲ್ಲಿ ಒಂದಾದ ಇಲ್ಲಿನ ಮಾರಿಕಾಂಬಾ ದೇವಿಯ ಜಾತ್ರೆ ಮಾರ್ಚ್ 15ರಿಂದ 23ರವರೆಗೆ ಜರುಗಲಿದೆ. ವಾಡಿಕೆಯಂತೆ ಈ ಜಾತ್ರೆ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ.


ದೇವಸ್ಥಾನದ ಧರ್ಮದರ್ಶಿ ಮಂಡಳಿ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಅರ್ಚಕ ರಾಮಕೃಷ್ಣ ಭಟ್ಟ ಕೆರೆಕೈ ಜಾತ್ರೆ ದಿನಾಂಕ ಘೋಷಿಸಿದರು.

ಮೂವರಿಗೆ ಕನಕ ಗುರುಪೀಠ ಪ್ರಶಸ್ತಿ

ಬೆಂಗಳೂರು: ಕಲಬುರ್ಗಿ ವಿಭಾಗದ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ನೀಡುವ 'ಹಾಲುಮತ ಭಾಸ್ಕರ ಪ್ರಶಸ್ತಿ'ಗೆ ಕವಿ ಲಿಂಗದಹಳ್ಳಿ ಹಾಲಪ್ಪ ಆಯ್ಕೆಯಾಗಿದ್ದಾರೆ.

'ಸಿದ್ಧಶ್ರೀ ಪ್ರಶಸ್ತಿ'ಗೆ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಅಧ್ಯಕ್ಷ ನಟರಾಜ್ ಹುಲಿಕಲ್, 'ಕನಕರತ್ನ ಪ್ರಶಸ್ತಿ'ಗೆ ಲೇಖಕಿ ಡಾ.ಆರ್. ಸುನಂದಮ್ಮ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಒಳಗೊಂಡಿವೆ.

ಗುರುಪೀಠದ ತಿಂಥಿಣಿ ಶಾಖಾ ಮಠದಲ್ಲಿ 13ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪೀಠದ ಸಂಚಾಲಕ ಆರ್. ಪಿ. ಸಾಂಬಸದಾಶಿವ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಟರಾಜ್ ಹುಲಿಕಲ್



ಸುನಂದಮ್ಮ



ಲಿಂಗದಹಳ್ಳಿ ಹಾಲಪ್ಪ

ಕೋವಿಡ್: ಲಾಕ್‌ಡೌನ್ ಪರಿಹಾರವಲ್ಲ

ಒಂದನೇ ಪುಟದಿಂದ

ಓಮೈಕ್ರಾನ್ ವಿಶ್ವದಲ್ಲಿ ಅತಿ ವೇಗವಾಗಿ ಹರಡುವ ಪ್ರಭೇದ. ಡೆಲ್ಟಾ ಪ್ರಭೇದದಲ್ಲಿ ರೋಗದ ತೀವ್ರತೆ ಹೆಚ್ಚು. ಓಮೈಕ್ರಾನ್ ತೀವ್ರತೆ ಕಡಿಮೆ. ಎರಡು ಡೋಸ್ ಪಡೆ ದರೆ ಓಮೈಕ್ರಾನ್ ತೀವ್ರವಾಗಿ ಬಾಧಿಸುವುದಿಲ್ಲ. ಹಾಗಾಗಿ, ಎಲ್ಲರೂ ಎರಡು ಡೋಸ್ ಲಸಿಕೆ ಪಡೆಯಬೇಕು ಎಂದು ಡಬ್ಲ್ಯುಎಚ್‌ಒ ಹೇಳಿದೆ ಎಂದು ಅವರು ಹೇಳಿದರು.

ಲಸಿಕೆಗೆ ಪಡೆದವರಿಗೆ 'ಗ್ರೀನ್ ಪಾಸ್'

ಎರಡು ಡೋಸ್ ಲಸಿಕೆ ಪಡೆದವರು ಸರ್ಕಾರಿ ಕಚೇರಿಗಳು, ಮಾಲ್, ಚಿತ್ರಮಂದಿರ, ಹೋಟೆಲ್, ಪಬ್, ಕ್ಲಬ್ ಮುಂತಾದೆಡೆ ಬಳಸಲು 'ಗ್ರೀನ್ ಪಾಸ್' ಅಥವಾ 'ಯೂನಿವರ್ಸಲ್ ಪಾಸ್' ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸುಧಾಕರ್ ಹೇಳಿದರು.

ಈ ಬಗ್ಗೆ ಕೋವಿಡ್ ತಾಂತ್ರಿಕ ಸಮಿತಿ ಮತ್ತು ಐಟಿ ಕಂಪನಿಗಳ ಜತೆ ಸಮಾಲೋಚನೆ ನಡೆಸಲಾಗುತ್ತಿದೆ. ಇದರಿಂದ ಕೋವಿಡ್ ನಿಯಂತ್ರಣಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಹೊರ ರಾಜ್ಯಗಳಿಂದ ರೈಲುಗಳಲ್ಲಿ ಬರುವ ಪ್ರಯಾಣಿಕರು ಕೋವಿಡ್ ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಕಡ್ಡಾಯವಾಗಿ ತರುವ ಬಗ್ಗೆ ಆದೇಶ ಹೊರಡಿಸಲು ರೈಲ್ವೆ ಸಚಿವರಿಗೆ ಪತ್ರ ಬರೆಯಲು ನಿರ್ಧರಿಸಲಾಗಿದೆ ಎಂದರು.

ಕೊರೊನಾ: ಮುಂಬರುವ ತಳಿ ಅಧಿಕ ಮಾರಕ

ಲಂಡನ್ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್‌ನ ತೀವ್ರತೆ ಸದ್ಯ ಕಡಿಮೆ ಇದ್ದರೂ, ಬರುವ ದಿನಗಳಲ್ಲಿ ಕಾಣಿಸಿಕೊಳ್ಳುವ ರೂಪಾಂತರ ತಳಿಗಳು ಹೆಚ್ಚು ಮಾರಕವಾಗಿರುವ ಸಾಧ್ಯತೆಗಳಿವೆ ಎಂದು ಬ್ರಿಟನ್‌ನಲ್ಲಿರುವ ಭಾರತ ಮೂಲದ ವಿಜ್ಞಾನಿ ರವೀಂದ್ರ ಗುಪ್ತ ಎಚ್ಚರಿಸಿದ್ದಾರೆ.

ರವೀಂದ್ರ ಗುಪ್ತ ಅವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಫಾರ್ ಥೆರಾಪೆಟಿಕ್ ಇಮ್ಯುನಾಲಜಿ ಆ್ಯಂಡ್ ಇನ್‌ಫೆಕ್ಷಿಯಸ್ ಡಿಸೀಜಸ್‌ನಲ್ಲಿ ಕ್ಲಿನಿಕಲ್ ಮೈಕ್ರೊಬಯೋಲಾಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಓಮೈಕ್ರಾನ್ ತಳಿಯು ಕಡಿಮೆ ತೀವ್ರತೆಯನ್ನು ಹೊಂದಿದ್ದರೂ, ವೇಗವಾಗಿ ಪ್ರಸರಣಗೊಳ್ಳುತ್ತಿದೆ' ಎಂದರು.

ಪ್ರಧಾನಿಯ ಭದ್ರತೆ ಪೊಲೀಸ್, ಎಸ್‌ಪಿಜಿ, ಗುಪ್ತಚರ ಸಂಸ್ಥೆಗಳ ಹೊಣೆ

'ಸಮನ್ವಯ ಕೊರತೆಯಿಂದ ಭದ್ರತಾ ಲೋಪ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಭೇಟಿ ನೀಡಿದ್ದಾಗ ಉಂಟಾದ ಭದ್ರತಾ ಲೋಪಕ್ಕೆ ಅತಿ ಗಣ್ಯ ವ್ಯಕ್ತಿಗಳ ಭದ್ರತೆಯ ಹೊಣೆ ಹೊತ್ತಿರುವ ಸಂಸ್ಥೆಗಳ ನಡುವಣ ಸಮನ್ವಯದ ಕೊರತೆಯೇ ಕಾರಣ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಪ್ರಕರಣಗಳಲ್ಲಿ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವ ನಿಗದಿಗೆ ಕಾನೂನಿನಲ್ಲಿ ಇರುವ ಅವಕಾಶಗಳು ಶಿಫಾರಸು ಸ್ವರೂಪದಲ್ಲಷ್ಟೇ ಇವೆ ಎಂದು ಅವರು ಹೇಳಿದ್ದಾರೆ.

'ಪ್ರಧಾನಿಯ ಭದ್ರತೆಯ ವಿಚಾರವು ನಮ್ಮ ಒಕ್ಕೂಟ ವ್ಯವಸ್ಥೆಯ ಹಾಗೆಯೇ ಪೊಲೀಸ್ ಮತ್ತು ಎಸ್‌ಪಿಜಿಯ ಪರಸ್ಪರ ವಿಶ್ವಾಸದ ಬಲವಾದ ಬಂಧದ ಮೇಲೆ ನಿಂತಿದೆ. ಪ್ರಧಾನಿಯ ಸಂಚಾರಕ್ಕೆ ಸುರಕ್ಷಿತವಾದ ಮಾರ್ಗವನ್ನು ಖಾತರಿಪಡಿಸುವುದು ರಾಜ್ಯ ಪೊಲೀಸರ ಪೂರ್ಣ ಹೊಣೆಗಾರಿಕೆಯಾಗಿದೆ' ಎಂದು ರಾಷ್ಟ್ರೀಯ ಭದ್ರತಾ ಪಡೆಯ (ಎನ್‌ಎಸ್‌ಜಿ) ಮಾಜಿ ಮಹಾ ನಿರ್ದೇಶಕ ಸುದೀಪ್ ಲಖ್‌ತಕಿಯ ಹೇಳಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರ ಪಂಜಾಬ್ ಭೇಟಿಯ ವೇಳೆ ಪ್ರಮುಖವಾಗಿ ಎರಡು ಲೋಪಗಳಾಗಿವೆ. ರಾಜ್ಯದಲ್ಲಿ ಪ್ರಧಾನಿ ವಿರುದ್ಧ ರೈತ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿದ್ದವು. ಹೀಗಿದ್ದೂ ಭಟಿಂಡಾದಿಂದ ಫಿರೋಜ್‌ಪುರಕ್ಕೆ ಪ್ರಧಾನಿಯನ್ನು ರಸ್ತೆಮಾರ್ಗದಲ್ಲಿ ಕರೆದೊಯ್ಯಲು



ಭದ್ರತಾ ಲೋಪವನ್ನು ವಿರೋಧಿಸಿ ದೆಹಲಿ ಕಾಂಗ್ರೆಸ್ ಕಚೇರಿಯ ಎದುರು ಪ್ರತಿಭಟಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು —ಪಿಟಿಐ ಚಿತ್ರ

ನಿರ್ಧರಿಸಿದ್ದೇ ಮೊದಲ ಲೋಪ. ಜತೆಗೆ ಪ್ರಧಾನಿ ಅವರಿದ್ದ ವಾಹನವನ್ನು ಮೇಲ್ಸೇತುವೆ ಮೇಲೆ ಕರೆದೊಯ್ದಿದ್ದು ಎರಡನೇ ಲೋಪ. ಮೇಲ್ಸೇತುವೆ ಮೇಲೆ ಪ್ರಧಾನಿ ಅವರ ವಾಹನವಿದ್ದರೆ, ಪ್ರತಿಭಟನಕಾರರು ಮೇಲ್ಸೇತುವೆಯ ಎರಡೂ ಕಡೆ ರಸ್ತೆ ಬಂದ್ ಮಾಡುವ ಅಪಾಯವಿರುತ್ತಿತ್ತು' ಎಂದು ಸಿಕ್ಕಿಂನ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಅವಿನಾಶ್ ಮೋಹನನ್ನೇ ಹೇಳಿದ್ದಾರೆ.

'ಪ್ರಧಾನಿ ಪ್ರವಾಸದ ವೇಳೆ ಎಸ್‌ಪಿಜಿ, ಗುಪ್ತಚರ ಇಲಾಖೆ ಮತ್ತು ರಾಜ್ಯ ಪೊಲೀಸರ ನಡುವೆ ಸಮನ್ವಯ ಅತ್ಯಂತ ಮಹತ್ವವಾದುದು. ಇದರಲ್ಲಿ ಯಾವುದೇ ಲೋಪವಾಗಬಾರದು. ಪ್ರವಾಸಕ್ಕೂ ಮುನ್ನ, ಪೂರ್ವಭಾವಿ ಭದ್ರತಾ ಸಂಪರ್ಕವನ್ನು ನಡೆಸಬೇಕು. ಇದಕ್ಕೆ ಸಂಬಂಧಿಸಿದ ಕೈಪಿಡಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ನೀಡಬೇಕು. ಕೈಪಿಡಿಯಲ್ಲಿ ಇರುವ ವಿವರಗಳ ಅನ್ವಯ, ಪ್ರಧಾನಿ ಭೇಟಿಯ ಸಂದರ್ಭದಲ್ಲಿ ಒದಗಿಸಬೇಕಾದ ಭದ್ರತಾ ವ್ಯವಸ್ಥೆ ಮತ್ತು ತುರ್ತು ಸಂದರ್ಭದಲ್ಲಿ ಅವರನ್ನು ಸುರಕ್ಷಿತವಾಗಿ ತೆರವು ಮಾಡುವ ಬಗ್ಗೆ ಅಣಕು ಕಾರ್ಯಾಚರಣೆ ನಡೆಸಿರಬೇಕು' ಎಂದು ಉತ್ತರ ಪ್ರದೇಶದ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಒ.ಪಿ.ಸಿಂಗ್ ಹೇಳಿದ್ದಾರೆ. ಅವರು ಎಸ್‌ಪಿಜಿಯಲ್ಲಿಯೂ ಸೇವೆ ಸಲ್ಲಿಸಿದ್ದರು.

ಮುಂದುವರಿದ ಜಟಾಪಟಿ

ಪಂಜಾಬ್ ಪ್ರವಾಸದ ವೇಳೆ ಪ್ರಧಾನಿ ಅವರ ಭದ್ರತೆಯಲ್ಲಿ ಆದ ಲೋಪದ ಬಗ್ಗೆ ಕಾಂಗ್ರೆಸ್ ಹಿರಿಯ ನಾಯಕರ ಮೌನವು ಏನನ್ನೋ ಹೇಳುತ್ತಿದೆ. ಜನರು ಸತ್ಯವನ್ನು ತಿಳಿದುಕೊಳ್ಳಲು ಕಾತರರಾಗಿದ್ದಾರೆ

ಅನುರಾಗ್ ಠಾಕೂರ್, ಕೇಂದ್ರ ಸಚಿವ

ಇದು ಅತ್ಯಂತ ಗಂಭೀರವಾದ ವಿಚಾರ. ಇಂತಹ ಅತ್ಯಂತ ಉನ್ನತ ಹುದ್ದೆಯಲ್ಲಿ ಇರುವ ವ್ಯಕ್ತಿಯು ಈ ರೀತಿ ರಸ್ತೆ ಮಧ್ಯೆ ಸಿಲುಕುವುದು ಸರಿಯಲ್ಲ. ದೇಶದ ವಿಚಾರದಲ್ಲಂತೂ ಇದು ಒಳ್ಳೆಯದು ಅಲ್ಲವೇ ಅಲ್ಲ

ಮನಮೋಹನ್ ವೈದ್ಯ, ಆರ್‌ಎಸ್‌ಎಸ್ ಸಹ ಸಹಕಾರ್ಯವಾಹ

ಪ್ರಧಾನಿ ನರೇಂದ್ರ ಮೋದಿ ನಡೆಸಬೇಕಿದ್ದ ರ‍್ಯಾಲಿಯಲ್ಲಿ ಜನರೇ ಇಲ್ಲದಿದ್ದನ್ನು ನೋಡಿ ಆಗುತ್ತಿದ್ದ ಅಪಮಾನದಿಂದ ತಪ್ಪಿಸಿಕೊಳ್ಳಲು ಬಿಜೆಪಿ ಈ ಗಲಾಟೆ ಮಾಡುತ್ತಿದೆ

ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ

ಪ್ರಧಾನಿಯು ತಮ್ಮ ರ‍್ಯಾಲಿಯ ವೇದಿಕೆ ತಲುಪಲು ಪಂಜಾಬ್‌ನ ರೈತರು ಮತ್ತು ಜನರು ಅವಕಾಶ ನೀಡಬೇಕಿತ್ತು. ರ‍್ಯಾಲಿಯಲ್ಲಿದ್ದ ಖಾಲಿ ಕುರ್ಚಿಗಳನ್ನು ನೋಡಿ ಪ್ರಧಾನಿಗೆ ಸ್ವಲ್ಪವಾದರೂ ಖುಷಿಯ ಅನುಭವವಾಗುತ್ತಿತ್ತೇನೊ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಪೊಲೀಸರಿಗೆ ನೋಟಿಸ್

ನವದೆಹಲಿ (ಪಿಟಿಐ): ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ಪಂಜಾಬ್ ಪೊಲೀಸ್ ಇಲಾಖೆಯ ಆರು ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವಾಲಯವು ಶುಕ್ರವಾರ ನೋಟಿಸ್ ಜಾರಿ ಮಾಡಿದೆ. ಭಟಿಂಡಾ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಅಜಯ್ ಮೌಲಾಜಾ ಅವರಿಗೆ ನೋಟಿಸ್ ನೀಡಲಾಗಿದೆ ಎಂಬುದು ಬಹಿರಂಗವಾಗಿದೆ. ಆದರೆ, ನೋಟಿಸ್ ಪಡೆದ ಇನ್ನು ಐವರು ಅಧಿಕಾರಿಗಳು ಯಾರು ಎಂಬುದು ತಿಳಿದು ಬಂದಿಲ್ಲ ಎಂದು ಮೂಲಗಳು ಹೇಳಿವೆ.

ಉತ್ತರ ಪ್ರದೇಶ: ಎಸ್‌ಪಿ–ಬಿಜೆಪಿ ಜಾಹೀರಾತು ಸಮರ

ಪ್ರಜಾವಾಣಿ ವಾರ್ತೆ

ಲಖನೌ: ಚುನಾವಣಾ ರ‍್ಯಾಲಿಗಳಲ್ಲಿ ಪರಸ್ಪರ ಕೆಸರೆರಚಿಕೊಳ್ಳುತ್ತಿದ್ದ ರಾಜಕೀಯ ಪಕ್ಷಗಳು ಈಗ ಮಾಧ್ಯಮಗಳ ಮೂಲಕ ಆರೋಪ ಪ್ರತ್ಯಾರೋಪದಲ್ಲಿ ತೊಡಗಿವೆ. ಯಾವ ಪಕ್ಷದ ಆಡಳಿತದಲ್ಲಿ ಉತ್ತರ ಪ್ರದೇಶ ಹೆಚ್ಚು ಅಭಿವೃದ್ಧಿ ಹೊಂದಿತು ಎಂಬ ಕುರಿತು ಮಾಧ್ಯಮಗಳಲ್ಲಿ ಜಾಹೀರಾತು ನೀಡುವ ಮೂಲಕ ಬಿಜೆಪಿ ಮತ್ತು ಸಮಾಜವಾದಿ ಪಕ್ಷ (ಎಸ್‌ಪಿ) ಜಾಹೀರಾತು ಸಮರ ನಡೆಸುತ್ತಿವೆ.

ಲಖನೌನ ಮುಖ್ಯ ರಸ್ತೆ ಮಾರ್ಗಗಳು ಮತ್ತು ಬೀದಿಗಳಲ್ಲಿ ಬಿಜೆಪಿಯು ಫಲಕಗಳನ್ನು ಪ್ರದರ್ಶಿಸುವ ಮೂಲಕ ಈ ಪೈಪೋಟಿ ಆರಂಭವಾಯಿತು. 2017ರ ಹಿಂದಿನ ಎಸ್‌ಪಿ ಸರ್ಕಾರ ಮತ್ತು ಈಗಿನ ತಮ್ಮ ಸರ್ಕಾರ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಹೋಲಿಕೆ ಮಾಡಿರುವ ಫಲಕಗಳನ್ನು ಬಿಜೆಪಿ ಪ್ರದರ್ಶಿಸಿತ್ತು. ಎಸ್‌ಪಿ ಆಡಳಿತಾವಧಿಯಲ್ಲಿ ಉತ್ತರ ಪ್ರದೇಶ ಮಾಫಿಯಾ ಆಡಳಿತಕ್ಕೆ ಒಳಗಾಗಿತ್ತು ಎಂದು ಫಲಕಗಳಲ್ಲಿ ಹೇಳಲಾಗಿತ್ತು.

ಬಿಜೆಪಿ ಪ್ರದರ್ಶಿಸಿದ್ದ ಫಲಕಗಳಿಗೆ ಪತ್ರಿಕೆಯೊಂದರಲ್ಲಿ ಜಾಹೀರಾತು ನೀಡುವ ಮೂಲಕ ಎಸ್‌ಪಿ ಪ್ರತ್ಯುತ್ತರ ನೀಡಿತ್ತು. ಈಗಿನ ಬಿಜೆಪಿ ಸರ್ಕಾರದ ಸಾಧನೆಗಳ ಜೊತೆ ಹಿಂದಿನ ತನ್ನ ಸರ್ಕಾರದ ಸಾಧನೆಗಳ ಹೋಲಿಕೆ ಮಾಡಿತ್ತು. ಎಸ್‌ಪಿ ಸರ್ಕಾರದಲ್ಲೇ ಉತ್ತರ ಪ್ರದೇಶ ಅತಿಹೆಚ್ಚು ಅಭಿವೃದ್ಧಿ ಹೊಂದಿತ್ತು ಎಂದು ಜಾಹೀರಾತಿನಲ್ಲಿ ಎಸ್‌ಪಿ ಹೇಳಿತ್ತು. ಇದರ ಜೊತೆ, ಕೋವಿಡ್ ಎರಡನೇ ಅಲೆ ವೇಳೆ ಲಖನೌನ ಚಿತಾಗಾರಗಳಲ್ಲಿ ಮೃತದೇಹಗಳನ್ನು ಸುಟ್ಟ ಚಿತ್ರಗಳು ಮತ್ತು ಹಾಥರಸ್ ಅತ್ಯಾಚಾರ ಸಂತ್ರಸ್ತೆಯ ಮೃತದೇಹವನ್ನು ಮಧ್ಯರಾತ್ರಿ ಸುಟ್ಟ ಚಿತ್ರಗಳನ್ನೂ ಜಾಹೀರಾತಿನಲ್ಲಿ ಬಳಸಿಕೊಂಡಿರುವ ಎಸ್‌ಪಿ, 'ವ್ಯತ್ಯಾಸ ಸ್ಪಷ್ಟವಾಗಿದೆ. 2022ರಲ್ಲಿ ಬಿಜೆಪಿ ಸೋಲುವುದೂ ಸ್ಪಷ್ಟವಾಗಿದೆ' ಎಂದು ಹೇಳಿತ್ತು.

ಎಸ್‌ಪಿಯ ಜಾಹೀರಾತಿಗೆ ಉತ್ತರವಾಗಿ ಶುಕ್ರವಾರದ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಿರುವ ಬಿಜೆಪಿ, ತನ್ನ ಅವಧಿಯಲ್ಲಿ ಮಾಡಲಾದ ಸಾಧನೆಗಳ ಪಟ್ಟಿ ನೀಡಿದೆ. ಅದರಲ್ಲಿ ಎಕ್ಸ್‌ಪ್ರೆಸ್‌ವೇ ಚಿತ್ರವನ್ನೂ ಸೇರಿಸಿದೆ. ಬಿಜೆಪಿ ಅವಧಿಯಲ್ಲೇ ಉತ್ತರ ಪ್ರದೇಶ ಹೆಚ್ಚು ಅಭಿವೃದ್ಧಿ ಹೊಂದಿತು ಎಂದು ಸಮರ್ಥಿಸಿಕೊಂಡಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಾಧನೆಗಳ ಕುರಿತ ಜಾಹೀರಾತು ಫಲಕಗಳಿಂದಲೇ ಉತ್ತರ ಪ್ರದೇಶದ ನಗರಗಳು ಮತ್ತು ಪಟ್ಟಣಗಳನ್ನು ಬಿಜೆಪಿಯು ತುಂಬಿಸಿದೆ.

ಇತ್ತೀಚೆಗೆ ಬರೇಲಿಯಲ್ಲಿ ಸಾರ್ವಜನಿಕ ಸಭೆ ನಡೆಸಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ 2,000ಕ್ಕೂ ಹೆಚ್ಚು ಫಲಕಗಳು ದೆಹಲಿಯಲ್ಲಿಯೇ ಇವೆ' ಎಂದು ಹೇಳಿದ್ದರು.

ಅಖಿಲೇಶ್‌ಗೆ ಬಿಜೆಪಿ ಪ್ರತ್ಯುತ್ತರ

ಲಖನೌ(ಪಿಟಿಐ): ವಿಧಾನಸಭೆ ಚುನಾವಣೆಯಲ್ಲಿ ಬ್ರಾಹ್ಮಣರ ಮತಗಳನ್ನು ಸೆಳೆಯುವ ಪ್ರಯತ್ನದಲ್ಲಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಲಖನೌ ಹತ್ತಿರದ ಗ್ರಾಮದ ಪರಶುರಾಮ ದೇವಾಲಯದಲ್ಲಿ ಇತ್ತೀಚೆಗೆ ಪೂಜೆ ಸಲ್ಲಿಸಿದ್ದರು. ಅದರ ಬೆನ್ನಲ್ಲೇ, ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ದಿನೇಶ್ ಶರ್ಮಾ ಮತ್ತು ಬಿಜೆಪಿಯ ಇತರ ನಾಯಕರು ಲಖನೌನ ದೇವಸ್ಥಾನವೊಂದರಲ್ಲಿ ಪರಶುರಾಮ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ಪರಶುರಾಮ ಬ್ರಾಹ್ಮಣರು ಪೂಜಿಸುವ ದೇವರು. ಲಖನೌನ ಹೊಸವೀರ್ ದೇವಾಲಯದಲ್ಲಿ ಈ ಮೂರ್ತಿಯನ್ನು ಹೊಸದಾಗಿ ಪ್ರತಿಷ್ಠಾಪಿಸಲಾಗಿದೆ. ಆರು ಅಡಿ ಉದ್ದದ ಈ ಮೂರ್ತಿಯನ್ನು ರಾಜಸ್ಥಾನದಿಂದ ಲಖನೌಗೆ ತರಲಾಗಿದೆ ಎನ್ನಲಾಗಿದೆ.

ಬ್ರಾಹ್ಮಣರ ಬೆಂಬಲವನ್ನು ತನ್ನತ್ತ ಸೆಳೆಯಲು ಎಸ್‌ಪಿ ಪ್ರಯತ್ನಿಸುತ್ತ ಇರುವುದಕ್ಕೆ ಪ್ರತಿಯಾಗಿ ಪರಶುರಾಮ ಮೂರ್ತಿ ಪ್ರತಿಷ್ಠಾಪನೆ ಮಾಡುವ ತಂತ್ರವನ್ನು ಬಿಜೆಪಿ ರೂಪಿಸಿದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆ ಆಗುತ್ತಿದೆ. ಆದರೆ ಇದನ್ನು ದಿನೇಶ್ ಶರ್ಮಾ ಅವರು ಅಲ್ಲಗಳೆದಿದ್ದಾರೆ. 'ಅಖಿಲೇಶ್ ಯಾದವ್ ನಮ್ಮನ್ನು ಅನುಕರಣೆ ಮಾಡುತ್ತಿದ್ದಾರೆ. ಇದಕ್ಕೂ ಮೊದಲು ಕಾನ್ಪುರ ಮತ್ತಿತರ ಸ್ಥಳಗಳಲ್ಲಿ ಪರಶುರಾಮ ಮೂರ್ತಿಯನ್ನು ಬಿಜೆಪಿ ಪ್ರತಿಷ್ಠಾಪಿಸಿದೆ. ರಾಜ್ಯದ ಹಲವಾರು ಉದ್ಯಾನಗಳಿಗೆ ಪರಶುರಾಮನ ಹೆಸರನ್ನು ಇರಿಸಲಾಗಿದೆ' ಎಂದು ಅವರು ಹೇಳಿದರು.

ರಾಘವೇಶ್ವರ ಶ್ರೀ ವಿರುದ್ಧದ ಅತ್ಯಾಚಾರ ಆರೋಪ

'ದೋಷಾರೋಪ ಪಟ್ಟಿಯೇ ದೋಷಪೂರಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿಯನ್ನು ಅತ್ಯಾಚಾರ ಆರೋಪ ಪ್ರಕರಣದಿಂದ ಬಿಡುಗಡೆಗೊಳಿಸಿ ಸೆಷನ್ಸ್ ನ್ಯಾಯಾಲಯ ನೀಡಿದ್ದ ಆದೇಶ ಪ್ರಶ್ನಿಸಿದ್ದ ಪುನರ್ ಪರಿಶೀಲನಾ ಕ್ರಿಮಿನಲ್ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದ್ದು, 'ಪ್ರಕರಣದಲ್ಲಿನ ದೋಷಾರೋಪ ಪಟ್ಟಿಯೇ ದೋಷಪೂರಿತವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆ ಮತ್ತು ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆ ನಡೆಸಿ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ತೀರ್ಪು ಪ್ರಕಟಿಸಿದ್ದು, ಪೊಲೀಸರ ತನಿಖಾ ಕ್ರಮಗಳ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ.

'ದೋಷಪೂರಿತ ದೋಷರೋಪಣಾ ಪಟ್ಟಿ ಆಧರಿಸಿ ನ್ಯಾಯ ಕಲಾಪಗಳನ್ನು ಮುಂದುವರಿಸಿದ್ದೇ ಆದರೆ ಅವು ನಿಷ್ಫಲವಾಗುತ್ತವೆ. ಈ ವಿಚಾರದಲ್ಲಿ ಈ ನ್ಯಾಯಾಲಯ ಸಂತ್ರಸ್ತೆಯ ವಾದವನ್ನು ಅವಗಾಹನೆಗೆ ತೆಗೆದುಕೊಳ್ಳುವ ಪ್ರಮೇಯವೇ ಉದ್ಭವವಾಗುವುದಿಲ್ಲ. ಯಾಕೆಂದರೆ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 229ರ ಅನುಸಾರ ಆರೋಪಿ ಅರ್ಜಿಯ ಪರಿಶೀಲನೆ ಮಾಡಿದಾಗ, ವಿಚಾರಣಾ ನ್ಯಾಯಾಲಯ ಆರೋಪಿಯನ್ನು ಬಿಡುಗಡೆಗೊಳಿಸಿರುವುದು ಕಾನೂನು ಪ್ರಕಾರ ಸಮರ್ಥನೀಯವಾಗಿಲ್ಲ. ಯಾವುದೇ ದೃಷ್ಟಿಕೋನದಿಂದ ನೋಡಿದರೂ, ಈ ಪ್ರಕರಣದಲ್ಲಿ ಕೆಳ ನ್ಯಾಯಾಲಯದ ಆದೇಶಕ್ಕೆ ಕಾನೂನಿನ ಬೆಂಬಲ ಇಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ಸುಪ್ರೀಂ ಕೋರ್ಟ್ ತೀರ್ಪಿನ ಭಾಗವೊಂದನ್ನು ಉದ್ಧರಿಸುತ್ತಾ ಪ್ರಕರಣವನ್ನು ವಿವರಿಸಿರುವ ನ್ಯಾಯಪೀಠ, 'ಆರೋಪಿ ಮತ್ತು ಸಂತ್ರಸ್ತೆಯ ಮಧ್ಯೆ ಅತ್ಯಂತ ನಿಕಟ ಆತ್ಮೀಯತೆ ಇದ್ದು, ಉಭಯತ್ರರ ಒಪ್ಪಿಗೆಯಿಂದಲೇ ಲೈಂಗಿಕ ಕ್ರಿಯೆ ನಡೆದಿದೆ ಎಂಬುದು ವೇದ್ಯವಾದಾಗ, ಅದರಲ್ಲಿ ಅತ್ಯಾಚಾರ ಎಂಬುದು ಕಂಡುಬರುವುದಿಲ್ಲ. ಆದಾಗ್ಯೂ, ಇಂತಹ ನಿಕಟತೆ ಅತ್ಯಾಚಾರಕ್ಕೆ ಸಮಾನವಾದದ್ದು' ಎಂಬ ನಿರ್ಣಯವನ್ನು ಉಲ್ಲೇಖಿಸಿದೆ.

ಪ್ರಕರಣವೇನು?: ರಾಘವೇಶ್ವರ ಭಾರತೀ ಸ್ವಾಮೀಜಿ ವಿರುದ್ಧ ರಾಮಕಥಾ ಗಾಯಕಿ 2014ರ ಆಗಸ್ಟ್ 17ರಂದು ಅತ್ಯಾಚಾರ ಆರೋಪ ಹೊರಿಸಿ ದೂರು ದಾಖಲಿಸಿದ್ದರು. ಈ ಕುರಿತಂತೆ ತನಿಖೆ ನಡೆಸಿದ್ದ ಸಿಐಡಿ ನ್ಯಾಯಾಲಯಕ್ಕೆ ದೋಷಾರೋಪಣೆ ವರದಿ ಸಲ್ಲಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ 54ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜಿ.ಬಿ.ಮುದಿಗೌಡರ್ 2016ರ ಮಾರ್ಚ್ 31ರಂದು ಆದೇಶ ನೀಡಿ ಸ್ವಾಮೀಜಿಯನ್ನು ಆರೋಪಗಳಿಂದ ಬಿಡುಗಡೆಗೊಳಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಸಂತ್ರಸ್ತೆ ಮತ್ತು ಪ್ರಾಸಿಕ್ಯೂಷನ್ ಹೈಕೋರ್ಟ್‌ನಲ್ಲಿ ಪ್ರತ್ಯೇಕ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿದ್ದರು.

12ನೇ ತರಗತಿ ಪರೀಕ್ಷೆ ಫಲಿತಾಂಶ: ನಿಬಂಧನೆ ರದ್ದು

ನವದೆಹಲಿ: 12ನೇ ತರಗತಿಯ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಇತ್ತೀಚಿನ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳೇ ಅಂತಿಮ ಎಂಬುದಾಗಿ ಪರಿಗಣಿಸುವ ಸಿಬಿಎಸ್‌ಇ ವಿಧಿಸಿದ್ದ ನಿಬಂಧನೆಯನ್ನು ಸುಪ್ರೀಂಕೋರ್ಟ್ ಶುಕ್ರವಾರ ರದ್ದುಗೊಳಿಸಿತು.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಹಾಗೂ ಸಿ.ಟಿ. ರವಿಕುಮಾರ್ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಅಂತಿಮ ಫಲಿತಾಂಶ ಘೋಷಣೆಗಾಗಿ, ಕಳೆದ ವರ್ಷ ನಡೆಸಿದ ಪರೀಕ್ಷೆಗಳಲ್ಲಿ ಆಯಾ ವಿಷಯದಲ್ಲಿ ಪಡೆದ ಅಂಕಗಳ ಪೈಕಿ ಅತ್ಯುತ್ತಮವಾದುದನ್ನು ಸ್ವೀಕರಿಸುವ ಆಯ್ಕೆಯನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ವಿದ್ಯಾರ್ಥಿಗೆ ನೀಡಬೇಕು' ಎಂದು ನ್ಯಾಯಪೀಠ ಹೇಳಿತು.

'ಬುಲ್ಲಿ ಬಾಯಿ': ಕಾಲೇಜಿನಿಂದ ಆರೋಪಿ ನೀರಜ್ ಅಮಾನತು

ಭೋಪಾಲ್(ಪಿಟಿಐ): 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣದ ಆರೋಪಿ, ಮುಖ್ಯ ಸಂಚುಕೋರ ನೀರಜ್ ಬಿಷ್ಣೋಯಿಯನ್ನು ಕಾಲೇಜಿನಿಂದ ಅಮಾನತು ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭೋಪಾಲ್‌ನಿಂದ 100 ಕಿ.ಮೀ. ದೂರದ ಸೀಹೋರ್‌ನಲ್ಲಿ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ವಿಐಟಿ) ಕ್ಯಾಂಪಸ್ ಇದ್ದು, ಅಲ್ಲಿ ನೀರಜ್ ಎರಡನೇ ವರ್ಷದ ಬಿ.ಟೆಕ್ ವಿದ್ಯಾರ್ಥಿ.

'ದೆಹಲಿ ಪೊಲೀಸರು ಅಸ್ಸಾಂನ ಜೋರ್ಹಾಟ್‌ನಲ್ಲಿ ನೀರಜ್ ಬಿಷ್ಣೋಯಿಯನ್ನು ಗುರುವಾರ ಬಂಧಿಸಿದ್ದರು. ನೀರಜ್ ಬಂಧನದ ಬಗ್ಗೆ ಮಾಧ್ಯಮಗಳ ಮೂಲಕ ನಂತರ, ಸೀಹೋರ್ ಠಾಣೆ ಪೊಲೀಸರಿಂದ ಮಾಹಿತಿ ಲಭಿಸಿತು. ಈ ಬೆಳವಣಿಗೆ ಬೆನ್ನಲ್ಲೇ, ವಿಐಟಿ ಆಡಳಿತ ಮಂಡಳಿಯು ಬಿಷ್ಣೋಯಿ ವಿರುದ್ಧ ಕ್ರಮ ಕೈಗೊಂಡಿದೆ' ಎಂದು ಈ ಅಧಿಕಾರಿ ತಿಳಿಸಿದ್ದಾರೆ.

'ಪ್ರತಿಭಾವಂತ ವಿದ್ಯಾರ್ಥಿ': 'ನೀರಜ್ ಕುರಿತು ವಿಐಟಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲಾಗಿತ್ತು. ನೀರಜ್ ಪ್ರತಿಭಾವಂತ ಎಂದು ಕಾಲೇಜು ಆಡಳಿತ ಮಂಡಳಿಯವರು ತಿಳಿಸಿದ್ದರು. ಆನ್‌ಲೈನ್ ತರಗತಿಗಳಿಗೆ ಮಾತ್ರ ಆತ ಹಾಜರಾಗುತ್ತಿದ್ದ ಎಂಬುದಾಗಿ ಹೇಳಿದ್ದರು' ಎಂದು ಸೀಹೋರ್‌ನ ಹೆಚ್ಚುವರಿ ಎಸ್ಪಿ ಸಮೀರ್ ಯಾದವ್ ತಿಳಿಸಿದ್ದಾರೆ.

'ಜೋರ್ಹಾಟ್‌ನಲ್ಲಿ ಬಂಧನ': 'ಪ್ರಕರಣದ ಪ್ರಮುಖ ಆರೋಪಿ ನೀರಜ್ ಬಿಷ್ಣೋಯಿ ಮೂಲತಃ ರಾಜಸ್ಥಾನದವರು. ಆದರೆ, ಸೀಹೋರ್‌ನೊಂದಿಗಿನ ಆತನ ಸಂಪರ್ಕ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ್ ಮಿಶ್ರಾ ಹೇಳಿದ್ದಾರೆ.

'ಸದಾ ಲ್ಯಾಪ್‌ಟಾಪ್‌ಗೆ ಅಂಟಿಕೊಂಡಿರುತ್ತಿದ್ದ'

ಗುವಾಹಟಿ (ಪ್ರಜಾವಾಣಿ ವಾರ್ತೆ): 'ನೀರಜ್ 10ನೇ ತರಗತಿ ಪರೀಕ್ಷೆಯಲ್ಲಿ ಶೇ 82ರಷ್ಟು ಅಂಕ ಗಳಿಸಿದ್ದ. ಈ ಸಾಧನೆ ಗುರುತಿಸಿ, ರಾಜ್ಯ ಸರ್ಕಾರ ಆತನಿಗೆ ಲ್ಯಾಪ್‌ಟಾಪ್ ನೀಡಿತ್ತು. ಆತ ಲ್ಯಾಪ್‌ಟಾಪ್‌ಗೇ ಸದಾ ಅಂಟಿಕೊಂಡಿರುತ್ತಿದ್ದ...'

'ಬುಲ್ಲಿ ಬಾಯಿ' ಆ್ಯಪ್ ಪ್ರಕರಣದ ಮುಖ್ಯ ಸಂಚುಕೋರ, ದೆಹಲಿ ಪೊಲೀಸರಿಂದ ಬಂಧನಕ್ಕೆ ಒಳಗಾಗಿರುವ ನೀರಜ್ ಬಿಷ್ಣೋಯಿ ಕುರಿತು ಆತನ ತಂದೆ ದಶರಥ್ ಬಿಷ್ಣೋಯಿ ಹೇಳಿದ ಮಾತುಗಳಿವು.

'ಭೋಪಾಲ್‌ನ ವಿಐಟಿಯಲ್ಲಿ ಪ್ರವೇಶ ಪಡೆದ ನೀರಜ್, ಕೋವಿಡ್ ಹೆಚ್ಚಳದಿಂದಾಗಿ ಇಲ್ಲಿಯೇ ಇದ್ದು ಆನ್‌ಲೈನ್ ತರಗತಿಗಳಿಗೆ ಹಾಜರಾಗುತ್ತಿದ್ದ. ಓದಿನಲ್ಲಿಯೇ ಸದಾ ಮುಳುಗಿರುತ್ತಿದ್ದ' ಎಂದು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರಿಗೆ ತಿಳಿಸಿದರು.

'ಏನು ನಡೆಯುತ್ತಿದೆ ಎಂಬುದು ತಿಳಿಯುತ್ತಿಲ್ಲ. ಆದರೆ, ಆತನ ವಿರುದ್ಧ ಏನು ಆರೋಪ ಹೊರಿಸಲಾಗಿದೆಯೋ ಆ ಕೃತ್ಯವನ್ನು ಆತ ಮಾಡಿಲ್ಲ ಎಂದು ನನ್ನ ಮನಸ್ಸು ಹೇಳುತ್ತಿದೆ' ಎಂದೂ ದಶರಥ್ ಹೇಳಿದರು.

ಬಂಧಿತರು ಜ.10ರ ವರೆಗೆ ಕಸ್ಟಡಿಗೆ

ಮುಂಬೈ: 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿ ಮುಂಬೈ ಸೈಬರ್ ಕ್ರೈಂ ಪೊಲೀಸರು ಉತ್ತರಾಖಂಡದಲ್ಲಿ ಬಂಧಿಸಿರುವ ಇಬ್ಬರು ವಿದ್ಯಾರ್ಥಿಗಳನ್ನು ಜ.10ರ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಇಲ್ಲಿನ ನ್ಯಾಯಾಲಯ ಶುಕ್ರವಾರ ಆದೇಶಿಸಿದೆ.

ಆರೋಪಿಗಳಾದ ಶ್ವೇತಾ ಸಿಂಗ್ (18) ಹಾಗೂ ಮಯಂಕ್ ರಾವಲ್ (21) ಅವರನ್ನು ಪೊಲೀಸರು ಇಲ್ಲಿನ ಬಾಂದ್ರ ಮೆಟ್ರೊಪಾಲಿಟನ್ ಕೋರ್ಟ್‌ಗೆ ಹಾಜರುಪಡಿಸಿದರು.

'ಇದೇ ಪ್ರಕರಣಕ್ಕೆ ಸಂಬಂಧಿಸಿ ಮತ್ತೊಬ್ಬ ಆರೋಪಿ ವಿಶಾಲಕುಮಾರ್ ಝಾ ಎಂಬ ವಿದ್ಯಾರ್ಥಿಯನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದ್ದು, ಜ. 10ರ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಓಂಶಕ್ತಿ ಯಾತ್ರಾರ್ಥಿಗಳಿಗೆ ಸೋಂಕು

ಮೈಸೂರು: ತಮಿಳುನಾಡಿನ ಮೇಲ್ ಮರವತ್ತೂರಿನ ಆದಿಪರಾಶಕ್ತಿ ದೇವಾಲಯಕ್ಕೆ ತೆರಳಿದ್ದ ತಾಲ್ಲೂಕಿನ 19 ಮಂದಿ, ಬನ್ನೂರಿನ ಹಿಂದುಳಿದ ವರ್ಗಗಳ ಇಲಾಖೆ ಹಾಸ್ಟೆಲ್‌ನ 10 ವಿದ್ಯಾರ್ಥಿಗಳಿಗೆ ಹಾಗೂ ಮತ್ತೊಬ್ಬ ಗ್ರಾಮಸ್ಥರಿಗೆ ಕೋವಿಡ್ ದೃಢಪಟ್ಟಿದೆ.

ಯಾರಲ್ಲೂ ಸೋಂಕಿನ ಲಕ್ಷಣಗಳು ಕಂಡುಬಂದಿಲ್ಲ. ಓಂಶಕ್ತಿ ಯಾತ್ರೆಗೆ ಹೋಗಿದ್ದವರಲ್ಲಿ ಸೋಂಕು ಪತ್ತೆಯಾದ ಕಾರಣ 150 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಅವರಲ್ಲಿ 19 ಮಂದಿಗೆ ಸೋಂಕು ಪತ್ತೆಯಾಗಿದೆ.

22 ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢ (ಕೊರಟಗೆರೆ ವರದಿ): ತುಮಕೂರು ಜಿಲ್ಲೆ ಕೊರಟಗೆರೆ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ 22 ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರೊಬ್ಬರಿಗೆ ಕೋವಿಡ್ ದೃಢಪಟ್ಟಿದೆ. ಸೋಂಕಿತರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದವರನ್ನು ಕ್ವಾರಂಟೈನ್ ಮಾಡಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಮುಂಜಾಗ್ರತೆಯಾಗಿ ಜ. 13ರವರೆಗೆ ಶಾಲೆಗೆ ರಜೆ ನೀಡಲಾಗಿದೆ ಎಂದು ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

52 ಮಂದಿಗೆ ಕೋವಿಡ್ (ಕೊಲ್ಹಾರ, ವಿಜಯಪುರ ವರದಿ): 'ತಾಲ್ಲೂಕಿನ ಕೂಡಗಿ ಎನ್‌ಟಿಪಿಸಿ ವ್ಯಾಪ್ತಿಯಲ್ಲಿ ಒಂದು ವಾರದಲ್ಲಿ 56 ಜನರಲ್ಲಿ ಕೋವಿಡ್ ದೃಢಪಟ್ಟಿದೆ. ಇವರನ್ನು ಹೋಂ ಐಸೊಲೇಷನ್ ಮಾಡಿದ್ದು, ನಾಲ್ವರು ಗುಣಮುಖರಾಗಿದ್ದಾರೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ದೆಹಲಿ, ಗೋವಾ ಸೇರಿ ವಿವಿಧೆಡೆ ತೆರಳಿದ್ದ ಕೂಡಗಿ ಉಷ್ಣ ವಿದ್ಯುತ್ ಸ್ಥಾವರದ ಸಿಬ್ಬಂದಿ ಹಾಗೂ ಅವರ ಪ್ರಾಥಮಿಕ ಸಂಪರ್ಕಕ್ಕೆ ಬಂದಿದ್ದ 20 ಜನರಿಗೂ ಕೋವಿಡ್ ತಗುಲಿದೆ. ಈವರೆಗೆ 1,036 ಮಂದಿಯನ್ನು ಪರೀಕ್ಷಿಸಲಾಗಿದೆ' ಎಂದು ತಹಶೀಲ್ದಾರ್ ಎಸ್. ಡಿ.ಮುರಾಳ ತಿಳಿಸಿದ್ದಾರೆ.

ಶಿವಮೊಗ್ಗ ವರದಿ: ತಮಿಳುನಾಡಿನಲ್ಲಿ ಓಂಶಕ್ತಿ ದರ್ಶನ ಪಡೆದು ಶಿವಮೊಗ್ಗಕ್ಕೆ ಮರಳಿರುವ ಆರು ಮಂದಿ ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆಂಪಯ್ಯನತೊಕ್ಕಲಿನ ಇಬ್ಬರಿಗೆ ಕೊರೊನಾ ದೃಢಪಟ್ಟಿದೆ.



ರಾಜ್ಯ ಕೋವಿಡ್ ಅಂಕಿ–ಅಂಶ

30,31,052 ▲ ಒಟ್ಟು ಸೋಂಕಿತರು (30,22,603 ನಿನ್ನೆಯ ವಿವರ)

30,113 ▲ ಸಕ್ರಿಯ ಪ್ರಕರಣಗಳು

29,62,548 ▲ ಗುಣಮುಖರಾದವರು

38,362 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	8,449	▲
ಗುಣಮುಖ	505	▲
ಸಾವು	04	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಬೆಚ್ಚಗಿನ ಉಡುಪು, ತೈಲ ಮಜ್ಜನ

ಚಳಿಗಾಲದಲ್ಲಿ ದೇಹದೊಳಗಿನ ಆರೋಗ್ಯ ಕಾಪಾಡಿಕೊಳ್ಳುವ ಜೊತೆಗೆ, ಹೊರಭಾಗವನ್ನೂ ಬೆಚ್ಚಗಿಡಬೇಕು. ಹಾಗಾಗಿ ಮುಂಜಾನೆ, ಸಂಜೆ ವೇಳೆ ಸ್ವೆಟರ್, ಟೋಪಿ, ಗ್ಲೌಸ್, ಸಾಕ್ಸ್ ಹಾಕಿಕೊಳ್ಳಿ. ಮುಂಜಾನೆ ಮಂಜು ಸುರಿಯುವುದರಿಂದ ಬೆಳಗಿನ ವಾಕಿಂಗ್ ಅನ್ನು ಸಂಜೆಗೆ ಬದಲಿಸಿಕೊಳ್ಳಿ.

ಸ್ನಾನ ಮಾಡುವಾಗ, ಬಿಸಿ ನೀರಿಗೆ 4 ರಿಂದ 5 ಹನಿಯಷ್ಟು ನೀಲಗಿರಿ ತೈಲವನ್ನು ಬೆರೆಸಿಕೊಳ್ಳಿ. ಚಳಿಗಾಲದಲ್ಲಿ ಚರ್ಮ ಬಿರಿಯುವದರಿಂದ ವಾರಕ್ಕೊಮ್ಮೆ ಎಳ್ಳೆಣ್ಣೆ ಇಲ್ಲವೇ ಕೊಬ್ಬರಿ ಎಣ್ಣೆಯನ್ನು ಮೈಗೆ ಹಚ್ಚಿ ಮೃದುವಾಗಿ ಮಸಾಜ್ ಮಾಡಿಕೊಂಡು ಸ್ವಲ್ಪ ಸಮಯ ಬಿಟ್ಟು ಸ್ನಾನ ಮಾಡಬೇಕು.

ಸುಗ್ಗೀಲಿ ಹುಗ್ಗಿ..

ಸಂಕ್ರಾಂತಿ ಸುಗ್ಗಿ ಹಬ್ಬ. 'ಸುಗ್ಗೀಲಿ ಹುಗ್ಗಿಗೆ ಬರವೇ..' ಎಂಬ ಮಾತಿದೆ. ಚಳಿಗಾಲದಲ್ಲಿ ಹುಗ್ಗಿಯ ಸೇವನೆ ಹಿತಕರವಾಗಿರುತ್ತದೆ. ಹೆಸರುಬೇಳೆಯ ಹುಗ್ಗಿ ದೇಹದ ಶಕ್ತಿ ಹೆಚ್ಚಿಸುವು ದಲ್ಲದೇ, ನಿಧಾನವಾಗಿ ಜೀರ್ಣವಾಗುತ್ತದೆ.

ಈ ಕಾಲದಲ್ಲಿ ರಾತ್ರಿ ದೀರ್ಘವಾಗಿರುತ್ತದೆ. ಹಗಲು ಕಡಿಮೆ ಇರುತ್ತದೆ. ಹಾಗಾಗಿ ಬೆಳಿಗ್ಗೆ ಬೇಗನೇ ಹಸಿವಾಗುವ ಕಾರಣದಿಂದ ಹುಗ್ಗಿಯ ಸೇವನೆ ರೂಢಿಯಲ್ಲಿದೆ.

ಆಹಾರ–ಆರೋಗ್ಯ ಸಂಕ್ರಾಂತಿ ಸಂಭ್ರಮ

ಚುಮುಚುಮು ಚಳಿಗೆ ನಾಲಿಗೆಯಷ್ಟೇ ಬಿಸಿಯಾದರೆ ಸಾಲದು. ಆಹಾರ ಆರೋಗ್ಯವನ್ನೂ ಬೆಚ್ಚಗಾಗಿಸಬೇಕು. ಚಳಿಗಾಲದ ಬಿಸಿ ಆಹಾರ, ಪೇಯ ಏನಿರಬೇಕು? ಹೇಗಿರಬೇಕು? ಒಂದಿಷ್ಟು ಟಿಪ್ಸ್ ಇಲ್ಲಿದೆ...

ಡಾ. ವಸುಂಧರಾ ಭೂಪತಿ

ಸಂಭ್ರಮದ ಹಬ್ಬ ಸಂಕ್ರಾಂತಿ ಸಮೀಪಿಸುತ್ತಿದೆ. ಎಳ್ಳು, ಬೆಲ್ಲ, ಕಬ್ಬು, ಕಡಲೆಕಾಯಿ, ಅವರೆಕಾಳು ಮೆಲ್ಲುವ ಕಾಲವಿದು. ಹಬ್ಬದಲ್ಲಿ ನೆಂಟರು, ಆಪ್ತರಿಗೆ ಎಳ್ಳು–ಬೆಲ್ಲ ಹಂಚುತ್ತಾ, ಒಳ್ಳೆ ಮಾತಾಡೋಣ ಎನ್ನುತ್ತಾ ಸಂಭ್ರಮಿಸುವ ಸಮಯವಿದು.

ಹೀಗೆ ಸಂಭ್ರಮಿಸುವ ಕಾಲದಲ್ಲಿ ಕಳೆದ ಎರಡು ಸಂಕ್ರಾಂತಿಗೆ 'ಕೋವಿಡ್' ಭೀತಿ ಎದುರಾಗಿತ್ತು. ಈ ಬಾರಿಯೂ ಕೋವಿಡ್‌ನ ರೂಪಾಂತರ ತಳಿ ಓಮೈಕ್ರಾನ್ ಭೀತಿ ಹುಟ್ಟಿಸುತ್ತಿದೆ. ಈ ರೂಪಾಂತರ ವೈರಾಣುವಿನಿಂದ ನಮ್ಮನ್ನು ನಾವು ಕಾಪಾಡಿಕೊಂಡು ನಮ್ಮ ಕುಟುಂಬವನ್ನೂ ರಕ್ಷಿಸಿಕೊಳ್ಳಬೇಕಾದ ಅಗತ್ಯವಿದೆ.

ಇದು ಶಿಶಿರ ಋತುವಿನಕಾಲ. ಬೆಳಿಗ್ಗೆ ಚಳಿ ಹೆಚ್ಚು. ಮಧ್ಯಾಹ್ನ ಬಿಸಿಲು ಹೆಚ್ಚು. ಹೊರಗಿನ ಉಷ್ಣತೆಯೊಂದಿಗೆ ದೇಹದ ಉಷ್ಣತೆ ಸೆಣಸಾಡುತ್ತಿರುತ್ತದೆ. ಈ ಸಮಯದಲ್ಲಿ ಶೀತ, ಕೆಮ್ಮು, ಗಂಟಲು ನೋವು, ಫ್ಲೂ ಜ್ವರದಂತಹ ವ್ಯಾಧಿಗಳು ಬಾಧಿಸುವುದು ಸಾಮಾನ್ಯ. ಈ ಲಕ್ಷಣಗಳು ಓಮೈಕ್ರಾನ್ ಆಗಿರಬಹುದು, ಆಗಿಲ್ಲದೆಯೋ ಇರಬಹುದು. ಆದರೆ, ಇಂಥ ಸಣ್ಣಪುಟ್ಟ ವ್ಯಾಧಿಗಳನ್ನು ನಮ್ಮ ಅಡುಗೆ ಮನೆಯಲ್ಲಿರುವ 'ಒಗ್ಗರಣೆ ಡಬ್ಬಿ'ಯಲ್ಲಿರುವ ಪದಾರ್ಥಗಳಿಂದಲೇ ನಿವಾರಿಸಿಕೊಳ್ಳಬಹುದು.

ಹೀಗಿರಲಿ ನಿಮ್ಮ ಆಹಾರ..

- ನಿತ್ಯ ತಯಾರಿಸುವ ಆಹಾರದಲ್ಲಿ ಹುಳಿ, ಸಿಹಿ, ಉಪ್ಪು ರುಚಿ/ ಅಂಶಗಳಿರುವ ಹುಣಸೆಹಣ್ಣು, ನಿಂಬೆಹಣ್ಣು, ಟೊಮೆಟೊದಂತಹ ಹಣ್ಣು–ತರಕಾರಿಗಳನ್ನು ಬಳಸಬೇಕು. ನೆಲ್ಲಿಕಾಯಿ ಉಪ್ಪಿನಕಾಯಿಯನ್ನು ಹಿತಮಿತವಾಗಿ ಬಳಸಬೇಕು.
- ಅನ್ನ, ಮುದ್ದೆ, ಚಪಾತಿ, ಗಂಜಿ ಯಾವುದೇ ಆಹಾರವಾಗಲಿ, ಬಿಸಿಯಾಗಿರುವಾಗಲೇ ಸೇವಿಸಬೇಕು. ತಂಗಳ ಆಹಾರ, ಫ್ರಿಜ್‌ನಲ್ಲಿಟ್ಟಿರುವ ಆಹಾರ, ಐಸ್‌ಕ್ರೀಂ ಬೇಡವೇ ಬೇಡ.
- ತೊಗರಿಬೇಳೆ, ಹೆಸರುಬೇಳೆ, ಹುರಳಿಕಾಳನ್ನು ಬೇಯಿಸಿ ತೆಗೆದ ಕಟ್ಟಿನಿಂದ ತಯಾರಿಸಿದ ಸಾರು ತುಂಬಾ ಒಳ್ಳೆಯದು. ದಾಳಿಂಬೆಯ ಸಾರು, ನೆಲ್ಲಿಕಾಯಿ ಸಾರು, ನುಗ್ಗೆಸೊಪ್ಪಿನ ಸಾರು, ಬದನೆಕಾಯಿ, ಸುವರ್ಣಗೆಡ್ಡೆ, ಮೂಲಂಗಿ, ಮೆಂತ್ಯೆಸೊಪ್ಪು ಈ ಕಾಲಕ್ಕೆ ಬಹಳ ಸೂಕ್ತವಾದ ಖಾದ್ಯಗಳು.
- ಇವೆಲ್ಲ ಕೇವಲ ಆಹಾರವಾಗಿ ಹಸಿವು ನೀಗಿಸುವುದು ಮಾತ್ರವಲ್ಲ, ದೇಹದಲ್ಲಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ, ರೋಗಾಣುಗಳ ವಿರುದ್ಧ ಹೋರಾಡಲು ದೇಹಕ್ಕೆ ಚೈತನ್ಯ ತುಂಬುತ್ತವೆ.
- **ಗೋಧಿ ಚಿತ್ರಾನ್ನ:** ಗೋಧಿಯನ್ನು ಕುಟ್ಟಿ, ನುಚ್ಚು ಮಾಡಿಕೊಂಡು, ಅದನ್ನು ನೀರಿನಲ್ಲಿ ಬೇಯಿಸಿಕೊಳ್ಳಬೇಕು. ಇದಕ್ಕೆ ಒಗ್ಗರಣೆ ಹಾಕಿ, ಕಾಳುಮೆಣಸು, ಉಪ್ಪು ಹಾಕಿ ನಂತರ ನಿಂಬೆರಸ ಬೆರೆಸಿದರೆ ಗೋಧಿ ಚಿತ್ರಾನ್ನ ಸಿದ್ಧ. ಇದನ್ನು ಬಿಸಿ ಇರುವಾಗಲೇ ಸೇವಿಸಬೇಕು.
- **ಕೆಂಡದ ಗೋಧಿ ರೊಟ್ಟಿ:** ಒಂದು ಭಾಗ ಗೋಧಿಹಿಟ್ಟಿಗೆ ಸ್ವಲ್ಪ ಕಡಲೆಹಿಟ್ಟು ಬೆರೆಸಿ. ರುಚಿಗೆ ತಕ್ಕಷ್ಟು ಓಮ, ಇಂಗು, ಉಪ್ಪು, ತುಪ್ಪ ಹಾಕಿ ಕಲೆಸಿ. ನಂತರ ಲಟ್ಟಿಸಿ, ಕೆಂಡದ ಮೇಲೆ ಸುಡಬೇಕು.
- ಬಿಸಿ ಬಿಸಿ ರೊಟ್ಟಿ ಚಳಿಗೂ ಹಿತಕರ, ದೇಹಕ್ಕೆ ಶಕ್ತಿಯನ್ನು ತುಂಬುತ್ತದೆ. ಜೀರ್ಣಕ್ರಿಯೆ ಸುಲಭ ಮತ್ತು ಕಫ, ಕೆಮ್ಮು, ನೆಗಡಿ, ಉಬ್ಬಸವಿರುವ ರೋಗಿಗಳಿಗೆ ಉತ್ತಮ ಆಹಾರ. ಗೋಧಿ ಖಾದ್ಯಗಳ ಜೊತೆಗೆ, ಹೆಸರುಕಾಳು, ಕಡಲೆಕಾಳು, ಮಡಕೆಕಾಳು, ಅವರೆಕಾಳುಗಳಿಂದ ಉಸುಲಿ ತಯಾರಿಸಿ ಸೇವಿಸಬಹುದು.

ಜೇಷ್ಠ ಮಧು ಸೂಪ್

ಜೇಷ್ಠ ಮಧು ಸೂಪ್ ಬೇರೆಲ್ಲ ಸೂಪ್‌ಗಳಿಗಿಂತ ವಿಶಿಷ್ಟವಾಗಿದೆ.

ಬೇಕಾದ ಸಾಮಗ್ರಿಗಳು: ಹೆಸರುಬೇಳೆ, ತೊಗರಿಬೇಳೆ – ತಲಾ ಎರಡು ಚಮಚ, ಟೊಮೆಟೊ 2, ಜೇಷ್ಠಮಧು 100 ಗ್ರಾಂ, ಉಪ್ಪು, ಬೆಲೆ, ಕಾಳುಮೆಣಸು ಪುಡಿ.

ತಯಾರಿಸುವ ವಿಧಾನ: ಜೇಷ್ಠಮಧುವನ್ನು ಜಜ್ಜಿ ಹೆಸರುಬೇಳೆ, ತೊಗರಿಬೇಳೆ ಮತ್ತು ಟೊಮೆಟೊದೊಂದಿಗೆ ಸೇರಿಸಿ ನೀರಿನಲ್ಲಿ ಚೆನ್ನಾಗಿ ಬೇಯಿಸಬೇಕು. ಬೆಂದಿರುವ ಜೇಷ್ಠಮಧುವನ್ನು ಹಿಂಡಿ ರಸ ತೆಗೆದು, ನಾರನ್ನು ತೆಗೆದು ಹಾಕಿ. ನಂತರ ಬೆಂದಿರುವ ಎಲ್ಲ ಪದಾರ್ಥಗಳನ್ನು ರುಬ್ಬಿ, ಉಪ್ಪು, ಬೆಲ್ಲ, ಬೆರೆಸಿ ಒಲೆಯ ಮೇಲಿಟ್ಟು ಕುದಿಸಬೇಕು. ನಂತರ ಕಾಳುಮೆಣಸು ಪುಡಿ ಬೆರೆಸಿದರೆ ಜೇಷ್ಠಮಧು ಸೂಪ್ ಸಿದ್ಧ. ಇದನ್ನು ಬಿಸಿಯಾಗಿರುವಾಗಲೇ ಕುಡಿಯಬೇಕು. ಕೆಮ್ಮು, ನೆಗಡಿ, ಗಂಟಲುನೋವು, ಜ್ವರದಿಂದ ಬಳಲುವವರಿಗೆ ಇದು ಉತ್ತಮ ದ್ರವರೂಪದ ಆಹಾರ.

ಶುಂಠಿ, ತುಳಸಿಯೊಂದಿಗೆ ಬಿಸಿ ನೀರು

ವಾತಾವರಣ ಥಂಡಿ ಇರುವಾಗ ನೀರನ್ನು ಕುದಿಸಿ ಕುಡಿಯಬೇಕು. ಬರೀ ಬಿಸಿನೀರು ಕುಡಿಯುವುದು ಕೆಲವರಿಗೆ ಅಪಥ್ಯ. ಹಾಗಾಗಿ, ನೀರು ಕುದಿಯುವಾಗ ಚಿಕ್ಕದಾದ ಶುಂಠಿ ತುಂಡು ಹಾಕಿ. ಶುಂಠಿ ಬೆರೆತ ನೀರು ದೇಹದ ಉಷ್ಣತೆ ಕಾಪಾಡುತ್ತದೆ. ಅಲ್ಲದೇ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಇದೇ ನೀರಿಗೆ ತುಳಸಿ ಎಲೆಗಳನ್ನು ಹಾಕಿದರೆ, ಇನ್ನೂ ಒಳ್ಳೆಯದು.

ಕಷಾಯದ ಪುಡಿ: ಧನಿಯಾ 100 ಗ್ರಾಂ, ಜೀರಿಗೆ 50 ಗ್ರಾಂ, ಕಾಳುಮೆಣಸು 50 ಗ್ರಾಂ, ಜೇಷ್ಠಮಧು 50 ಗ್ರಾಂ, ಹಿಪ್ಪಲಿ 50 ಗ್ರಾಂ, ದಾಲ್ಚಿನ್ನಿ 25 ಗ್ರಾಂ, ಒಣಶುಂಠಿ, ಏಲಕ್ಕಿ, ಜಾಪತ್ರೆ, ಜಾಯಿಕಾಯಿ ತಲಾ 10 ಗ್ರಾಂ. ಇವೆಲ್ಲವನ್ನೂ ಸೇರಿಸಿ ಪುಡಿ ಮಾಡಿಟ್ಟುಕೊಳ್ಳಬೇಕು.

ಒಂದು ಲೋಟ ನೀರಿಗೆ ಅರ್ಧ ಚಮಚ ಈ ಪುಡಿಯನ್ನು ಬೆರೆಸಿ ಸಣ್ಣಗಿನ ಉರಿಯಲ್ಲಿ ಕಾಯಿಸಬೇಕು. ಮೂರ್ನಾಲ್ಕು ನಿಮಿಷ ಕುದಿಸಿದ ನಂತರ ಬೆಲ್ಲ ಬೆರೆಸಿ ಕುಡಿಯಬೇಕು. ಬೇಕಾದರೆ ಹಾಲನ್ನೂ ಬೆರೆಸಿಕೊಳ್ಳಬಹುದು.

ಗಿಡಮೂಲಿಕೆಗಳ ಚಹಾ

ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ನಿತ್ಯ ಚಹಾ ಮಾಡುತ್ತಾರೆ. ಹೀಗೆ ಚಹಾ ತಯಾರಿಸುವಾಗ ತುಳಸಿ ಎಲೆ, ನಿಂಬೆ ಹುಲ್ಲು, ಶುಂಠಿ, ಪುದಿನ ಸೇರಿಸಿ. ಗಿಡಮೂಲಿಕೆಗಳ ಚಹಾ ದೇಹವನ್ನು ಬೆಚ್ಚಗಿಡುತ್ತದೆ. ರೋಗನಿರೋಧಕ ಶಕ್ತಿಯನ್ನೂ ನೀಡುತ್ತದೆ.

ಹೀಗೆ ಆಹಾರ ಕ್ರಮ, ಕುಡಿಯುವ ನೀರು, ಉಡುಪು, ಸ್ನಾನ ಎಲ್ಲದರಲ್ಲೂ ತುಸು ಬದಲಾವಣೆ ಮಾಡಿಕೊಂಡರೆ ಪ್ರತಿ ಮನೆಯಲ್ಲೂ ಸಂಕ್ರಾಂತಿ ಸಂಭ್ರಮದ ಜೊತೆಗೆ ಆರೋಗ್ಯಪೂರ್ಣವಾಗಿರುತ್ತದೆ. ಸಂತಸವೂ ಹೆಚ್ಚುತ್ತದೆ.



ಗೀಳು ಕಾಯಿಲೆಯಲ್ಲ, ಲಕ್ಷಣ ಮಾತ್ರ



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ಬಿಇ 3ನೇ ವರ್ಷದ ವಿದ್ಯಾರ್ಥಿ. ನನಗೆ ಓಸಿಡಿ ಕಾಯಿಲೆಯಿದೆ. ಮೊದಲು ಪದೇಪದೇ ಕೈತೊಳೆಯುತ್ತಿದ್ದೆ. ಈಗ ಇತರ ಹಲವಾರು ದೈನಂದಿನ ಚಟುವಟಿಕೆಗಳನ್ನು ಮತ್ತೆಮತ್ತೆ ಮಾಡುತ್ತೇನೆ. ನಾನು ಯಾವಾಗಲೂ ಒತ್ತಡ ಮತ್ತು ಆತಂಕದಲ್ಲಿರುತ್ತೇನೆ. ಓದಿನಲ್ಲಿ ಏಕಾಗ್ರತೆ ಸಾಧ್ಯವಾಗುತ್ತಿಲ್ಲ. ಈ ಕಾಯಿಲೆಯಿಂದ ಹೊರಬರಲು ಸಹಾಯ ಮಾಡಿ.**

ಹೆಸರು, ಊರು ತಿಳಿಸಿಲ್ಲ.

ಗೀಳು (ಒಸಿಡಿ) ಕಾಯಿಲೆಯಲ್ಲ. ಮನಸ್ಸಿನಲ್ಲಿ ನಡೆಯುವ ಹಲವಾರು ಒತ್ತಡ, ಆತಂಕ, ಬೇಸರ, ಹಿಂಜರಿಕೆಗಳ ಸೂಚನೆ ಮಾತ್ರ. ಯಾವುದಾದರೂ ಒಂದು ಕ್ರಿಯೆಯನ್ನು ಆಗಾಗ ಪುನರಾವರ್ತಿಸುವ ಪ್ರವೃತ್ತಿ ಎಲ್ಲರಲ್ಲಿಯೂ ಸಹನೀಯ ಮಟ್ಟದಲ್ಲಿ ಇರುತ್ತದೆ. ಆದರೆ ಅಂತಹ ಕ್ರಿಯೆಗಳು ನಿಮ್ಮ ದಿನಚರಿಯ ಹೆಚ್ಚಿನ ಭಾಗವನ್ನು ಆವರಿಸಿಕೊಂಡು ಮಾನಸಿಕ ಹಿಂಸೆಯನ್ನು ನೀಡುತ್ತಿದೆ. ಇದನ್ನು ಎರಡು ಹಂತಗಳಲ್ಲಿ ನಿಭಾಯಿಸಬೇಕು.

ಮೊದಲನೆಯದು ಪದೇಪದೇ ಒಂದೇ ಕ್ರಿಯೆಯನ್ನು ಪುನರಾವರ್ತಿಸುವ ಪ್ರವೃತ್ತಿ ನಿಭಾಯಿಸುವುದನ್ನು ಕಲಿಯಬೇಕು. ನಿಮಗೆ ಹೀಗೆ ಒತ್ತಡ ಉಂಟಾದಾಗ ದೀರ್ಘವಾಗಿ ಉಸಿರಾಡುತ್ತಾ ನಿಮ್ಮ ದೇಹವನ್ನು ಗಮನಿಸಿ. ದೇಹದ ಹಲವಾರು ಮಾಂಸಖಂಡಗಳಲ್ಲಿ ಬಿಗಿತ ಕಾಣಿಸಿಕೊಂಡಿರುತ್ತದೆ. ಅವುಗಳನ್ನು ಸಡಿಲಬಿಡಿ. ಹೀಗೆ ಆಗಾಗ ಮಾಡುತ್ತಿದ್ದರೆ ಕ್ರಿಯೆಗಳನ್ನು ಪುನರಾವರ್ತಿಸುವ ಒತ್ತಡ ಕಡಿಮೆಯಾಗುತ್ತದೆ. ಎರಡನೆಯ ಹಂತದಲ್ಲಿ ನಿಮ್ಮ ಆತಂಕವನ್ನು ನಿಭಾಯಿಸಲು ಕಲಿಯಬೇಕು. ಇದಕ್ಕೆ ಮನೋಚಿಕಿತ್ಸೆಯ ಅಗತ್ಯವಿದೆ. ಗೀಳಿನ ಒತ್ತಡ ತೀವ್ರವಾಗಿದ್ದರೆ ತಾತ್ಕಾಲಿಕವಾಗಿ ಮನೋವೈದ್ಯರ ಸಹಾಯ ಬೇಕಾಗಬಹುದು.

- **ಯುವಕ. ನಾನು ಬಹಳ ದಿವಸಗಳಿಂದ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೇನೆ. ಇದರಿಂದ ನಿಮಿರುವಿಕೆಯ ಸಮಸ್ಯೆಯಾಗಿದೆ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ಹಸ್ತಮೈಥುನ ಸಂಪೂರ್ಣ ಆರೋಗ್ಯಕರ ಪ್ರವೃತ್ತಿ ಎಂದು ಈ ಅಂಕಣದಲ್ಲಿ ಹಲವಾರು ಬಾರಿ ಬರೆಯಲಾಗಿದೆ. 30 ಜನವರಿ 2021ರ ಇದೇ ಅಂಕಣವನ್ನು ಓದಿ. ಹಸ್ತಮೈಥುನದಿಂದ ನಿಮಿರು ದೌರ್ಬಲ್ಯವುಂಟಾಗುವುದಿಲ್ಲ. ಅದು ಹಾನಿಕರ ಎಂಬ ನಿಮ್ಮ ತಪ್ಪು ತಿಳಿವಳಿಕೆ ಮತ್ತು ಆತಂಕ ನಿಮಿರು ದೌರ್ಬಲ್ಯಕ್ಕೆ ಕಾರಣವಾಗಿದೆ. ನೈರ್ಮಲ್ಯವನ್ನು ಮತ್ತು ಖಾಸಗೀತನವನ್ನು ಕಾಪಾಡಿಕೊಳ್ಳಿ. ಉಳಿದಂತೆ ನಿಮ್ಮ ಓದು, ಉದ್ಯೋಗಗಳ ಕಡೆ ಗಮನ ಹರಿಸಿ. ಆದಷ್ಟು ಬೇಗ ಸೂಕ್ತ ಸಂಗಾತಿಯನ್ನು ಹುಡುಕಿಕೊಳ್ಳಿ.



ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಕಾಲ್ಗೆಜ್ಜೆ ನಾದದಲಿ...

ರೇಷ್ಮಾ

ಘಲ್ ಘಲ್ ಎಂದು ಕಾಲ್ಗೆಜ್ಜೆ ಸದ್ದು ಮಾಡುತ್ತಾ ಹೆಣ್ಣುಮಕ್ಕಳು ಮನೆ ತುಂಬಾ ಓಡಾಡಿಕೊಂಡಿದ್ದರೆ ಕೇಳುವುದೇ ಚೆಂದ. ಕಾಲ್ಗೆಜ್ಜೆ ನಾದ ಮನದಲ್ಲಿ ಪುಳಕ ತರದೇ ಇರದು. ಹೆಣ್ಣುಮಕ್ಕಳಿಗೂ ಕಾಲ್ಗೆಜ್ಜೆಗೂ ಅವಿನಾಭಾವ ಸಂಬಂಧ. ತಂದೆಯಾದವನು ತನಗೆ ಹೆಣ್ಣು ಕೂಸಾದರೆ ಆ ಮುದ್ದು ಕಂದಮ್ಮನಿಗೆ ಮೊದಲು ನೀಡುವ ಉಡುಗೊರೆಯೇ ಕಾಲ್ಗೆಜ್ಜೆ.

ಪ್ರಿಯಕರನಿಗೆ ತಾನಿತ್ತ ಕಾಲ್ಗೆಜ್ಜೆ ಧರಿಸಿ ಪ್ರೇಯಸಿ ಓಡಾಡುತ್ತಿದ್ದರೆ ಮನದಲ್ಲೇನೋ ಖುಷಿ. ಹೀಗೆಂದಾಗ ನಿಮಗೆ 'ಮುನಿಯನ ಮಾದರಿ' ಸಿನಿಮಾದ 'ಕಾಲ್ಗೆಜ್ಜೆ ತಾಳಕೆ.. ಕೈ ಬಳೆಯ ನಾದಕೆ.. ಮರುಳಾಗಿ ಓಡಿ ಬಂದೆ ನೀ.. ಎದೆ ಝಲ್ ಝಲ್.. ಮೈ ಜುಂ ಜುಂ..' ಎನ್ನುವ ಯುಗಳ ಗೀತೆ ನೆನಪಾಗಬಹುದು.

ಹೀಗೆ ಹಿಂದಿನಿಂದಲೂ ಕಾಲ್ಗೆಜ್ಜೆ ಹೆಂಗಳೆಯರ ನೆಚ್ಚಿನ ಸಂಗಾತಿಯಾಗಿದೆ. ಆ ಕಾಲದಲ್ಲಿ ಬೆಳ್ಳಿಯ ಕಾಲ್ಗೆಜ್ಜೆ ಧರಿಸುವುದು ರೂಢಿಯಲ್ಲಿದ್ದರೆ, ಇತ್ತೀಚೆಗೆ ಒಂಟಿ ಕಾಲಿಗೆ ಕಪ್ಪನೆಯ ದಾರ ಧರಿಸುವುದು ಚಾಲ್ತಿಯಲ್ಲಿದೆ. ಕೆಟ್ಟದೃಷ್ಟಿ ತಾಕದಂತಿರಲಿ ಎಂದು ಕಪ್ಪುದಾರವನ್ನು ಕಟ್ಟಿಕೊಳ್ಳುತ್ತಾರೆ. ಈಗ ಆ ಕಪ್ಪುದಾರದಲ್ಲೇ ವೈವಿಧ್ಯಮಯ ವಿನ್ಯಾಸದ ಕಾಲ್ಗೆಜ್ಜೆಗಳನ್ನು ಪರಿಚಯಿಸಲಾಗಿದೆ. ಇಂಥ ವಿನ್ಯಾಸಗಳ ಕಾಲ್ಗೆಜ್ಜೆಗಳು ಟ್ರೆಂಡ್ ಆಗಿವೆ.

ಕಪ್ಪು ದಾರದ ಬೆಳ್ಳಿಯ ಕರಕುಶಲದ ಕಾಲ್ಗಜ್ಜೆ

ಕಪ್ಪು ಬಣ್ಣದ ದಪ್ಪನೆಯ ದಾರಕ್ಕೆ ವಿವಿಧ ವಿನ್ಯಾಸದ ಬೆಳ್ಳಿಯ ಮಣಿಗಳು, ಹರಳುಗಳನ್ನು ಜೋಡಿಸುವುದು ಇಂದಿನ ಟ್ರೆಂಡ್. ಬೆಳ್ಳಿಯ ಗೆಜ್ಜೆ, ಟೆಂಪಲ್ ವಿನ್ಯಾಸ, ಪುಟ್ಟ ಪುಟ್ಟ ಹರಳುಗಳನ್ನು ದಾರದೊಂದಿಗೆ ಪೋಣಿಸುವುದು ಈ ರೀತಿ ಸುಂದರವಾದ ಕಾಲ್ಗೆಜ್ಜೆ ಮಾಡಲಾಗುತ್ತದೆ. ಇದು ಭಾರತೀಯ ಹಾಗೂ ಪಾಶ್ಚಾತ್ಯ ಎರಡೂ ರೀತಿಯ ಡ್ರೆಸ್‌ಗಳಿಗೂ ಹೊಂದುತ್ತದೆ. ಕಾಲ್ಗೆಜ್ಜೆಯ ಬಗ್ಗೆ ಸಾಂಪ್ರದಾಯಿಕ ನಿಲುವು ಇರಿಸಿಕೊಂಡವರು ಇದನ್ನು ಧರಿಸಬಹುದು. ಇದು ನೋಡಲು ಸರಳವಾಗಿದ್ದು ಧರಿಸಿದಾಗ ಕಾಲಿನ ಅಂದವನ್ನು ಹೆಚ್ಚಿಸುತ್ತದೆ.

ಕಪ್ಪುದಾರ–ಜರ್ಮನ್ ಮಣಿಗಳು

ಕಪ್ಪುದಾರಕ್ಕೆ ಮೇಲಿಂದ ಹಾಗೂ ಕೆಳಗಿನಿಂದ ಜರ್ಮನ್ ಮಣಿಗಳಿಂದ ಜೋಡಿಸಿರುವ ಅಂದದ ಕಾಲ್ಗೆಜ್ಜೆಗಳತ್ತ ಹೆಣ್ಣುಮಕ್ಕಳು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಧರಿಸಿದಾಗ ಸರಳವಾಗಿ ಕಾಣುವ ಈ ಕಾಲ್ಗೆಜ್ಜೆಯನ್ನು ಸಿನಿಮಾ ನಟಿಯರು ಕೂಡ ಮೆಚ್ಚಿ ತೊಡುತ್ತಿದ್ದಾರೆ. ಚಿಕ್ಕ ಚಿಕ್ಕ ಮಣಿಗಳಿಂದ ಕೂಡಿರುವ ಈ ದಾರದ ಕಾಲ್ಗೆಜ್ಜೆ ಕಾಲಿನ ಅಂದ ಹೆಚ್ಚಿಸುವುದರಲ್ಲಿ ಅನುಮಾನವಿಲ್ಲ.



ವಿಂಟೇಜ್ ಸ್ಟೈಲ್ ದಾರದ ಗೆಜ್ಜೆ

ಕಪ್ಪುದಾರ ಧರಿಸುವ ರೂಢಿ ನಿಮಗಿದ್ದೂ ಬರಿಯ ದಾರ ಧರಿಸಿ ಬೇಸರವಾಗಿದ್ದರೆ ನೀವು ಈ ವಿನ್ಯಾಸದ ಕಾಲ್ಗೆಜ್ಜೆಯನ್ನು ಧರಿಸಬಹುದು. ಇದು ಸಾಂಪ್ರದಾಯಿಕ ಗೆಜ್ಜೆಯ ಹಾಗೆಯೂ ಕಾಣಿಸುತ್ತದೆ. ಬೆಳ್ಳಿಯ ಅಥವಾ ಆಕ್ಸಿಡೈಸ್ಡ್ ಆಭರಣದ ಗುಂಡನ್ನು ದಾರಕ್ಕೆ ಕಟ್ಟಲಾಗಿರುತ್ತದೆ. ಇದು ಸರಳವಾಗಿದ್ದು ಸುಂದರವಾಗಿಯೂ ಇರುತ್ತದೆ.

ಕಪ್ಪುದಾರದ ಚಿಪ್ಪಿನ ಕಾಲ್ಗೆಜ್ಜೆ

ದಪ್ಪಗೆ ಹೆಣೆದ ಕಪ್ಪುದಾರದ ಮೇಲೆ ಕಪ್ಪೆಚಿಪ್ಪನ್ನು ಜೋಡಿಸಿ ಸುಂದರವಾಗಿ ಕಾಲ್ಗೆಜ್ಜೆ ಮಾಡಿದ್ದಾರೆ. ಕಪ್ಪುದಾರದ ಮೇಲೆ ಬಿಳಿ, ಕ್ರೀಮ್ ಬಣ್ಣದ ಚಿಪ್ಪು ಹೆಚ್ಚು ಹೊಂದುತ್ತದೆ. ಇದು ಎಲ್ಲಾ ವರ್ಣದವರಿಗೂ ಹೊಂದಿಕೆಯಾಗುತ್ತದೆ. ಕಾಲಿನ ಅಂದ ಹೆಚ್ಚಿಸುತ್ತದೆ.

ಚೋಕರ್ ವಿನ್ಯಾಸದ ಕಾಲ್ಗೆಜ್ಜೆ

ಚೋಕರ್ ವಿನ್ಯಾಸದ ಕತ್ತಿನ ಹಾರ ಹಾಗೂ ಕಾಲ್ಗೆಜ್ಜೆ ಈಗ ಹೆಚ್ಚು ಟ್ರೆಂಡ್ ಸೃಷ್ಟಿಸುತ್ತಿದೆ. ಈ ವಿನ್ಯಾಸದ ಕಾಲ್ಗೆಜ್ಜೆಯೊಂದಿಗೆ ವಿವಿಧ ವಿನ್ಯಾಸದ ಕಪ್ಪು ದಾರದ ಕಾಲ್ಗೆಜ್ಜೆಯನ್ನು ಜೊತೆಯಾಗಿ ಧರಿಸಬಹುದು. ಚೋಕರ್ ವಿನ್ಯಾಸವು ಜೀನ್ಸ್, ಶಾರ್ಟ್ ಸ್ಕರ್ಟ್‌ನಂತಹ ಪಾಶ್ಚಾತ್ಯ ಶೈಲಿಯ ಉಡುಪಿನೊಂದಿಗೆ ಇದು ಹೆಚ್ಚು ಹೊಂದುತ್ತದೆ.





ಋತುಮಾನದ ಬದಲಾವಣೆ

ಚರ್ಮ–ಉಗುರಿನ ಕಾಳಜಿ

ಡಾ. ಗೀತಿಕಾ ಮಿತ್ತಲ್



ಡಾ. ಗೀತಿಕಾ ಮಿತ್ತಲ್



ಸೌಂದರ್ಯ

ಮಳೆಗಾಲದಲ್ಲಿ ಚಳಿ, ಚಳಿಗಾಲದಲ್ಲಿ ಬೇಸಿಗೆ... ಹೀಗೆ ಋತುಮಾನಗಳಲ್ಲಿನ ಏರುಪೇರು ಕಳೆದ ಕೆಲ ವರ್ಷಗಳಿಂದ ಸಾಮಾನ್ಯ. ಈ ಏರುಪೇರು ನಮ್ಮ ದೇಹಾರೋಗ್ಯ ಹಾಗೂ ಸೌಂದರ್ಯದ ಮೇಲೂ ಪರಿಣಾಮ ಬೀರುತ್ತದೆ. ಶುಷ್ಕ ಹಾಗೂ ಒಣಚರ್ಮ, ತಲೆ ಹೊಟ್ಟು.. ಇಂತಹ ಸಮಸ್ಯೆಗಳು ಹೆಚ್ಚುತ್ತವೆ. ಇಂಥ ಸಂದರ್ಭದಲ್ಲಿ ಹೆಚ್ಚು ಕಾಳಜಿ ಅಗತ್ಯ. ಈ ನಡುವೆ ಕೊರೊನಾ ಕಾರಣದಿಂದಾಗಿ ಅತಿಯಾದ ಸ್ಯಾನಿಟೈಸರ್ ಬಳಕೆಯಿಂದ ಚರ್ಮಕ್ಕೆ ಹಾನಿಯಾಗುತ್ತದೆ. ಹಾಗಾದರೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಹೇಗೆ? ಈ ಕುರಿತು ಒಂದಿಷ್ಟು ಮಾಹಿತಿ ಇಲ್ಲಿದೆ.

- ಅತಿಯಾದ ಸ್ಯಾನಿಟೈಸರ್ ಬಳಕೆಯಿಂದ ತ್ವಚೆ ಶುಷ್ಕವಾಗುವುದು, ಒಣಗುವುದು ಸೇರಿದಂತೆ ಬೇರೆ ಬೇರೆ ಚರ್ಮದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇದರ ಪರಿಹಾರಕ್ಕೆ ತೆಂಗಿನ ಎಣ್ಣೆಯ ಅಂಶಗಳಿರುವ ಕ್ರೀಮ್, ಮಾಯಿಶ್ಚರೈಸರ್‌ಗಳನ್ನು ಬಳಸಬೇಕು.
- ಬದಲಾದ ಋತುಮಾನದಲ್ಲಿw ಚರ್ಮವನ್ನು ಮಾಯಿಶ್ಚರೈಸ್ ಮಾಡಲು ಮತ್ತು ಒಣ ಚರ್ಮದ ಸಮಸ್ಯೆಯಿಂದ ರಕ್ಷಿಸಲು ವಾರಕ್ಕೆ 3 ರಿಂದ 4 ಬಾರಿ ಹೈಲುರೋನಿಕ್ ಆ್ಯಸಿಡ್‌ನಂತಹ ಅಂಶಗಳನ್ನು ಒಳಗೊಂಡಿರುವ ಹೈಡ್ರೇಟಿಂಗ್ ಮಾಸ್ಕ್‌ಗಳನ್ನು(ಫೇಸ್‌ಮಾಸ್ಕ್) ಹಚ್ಚಬೇಕು. ಹೈಲುರೋನಿಕ್ ಆ್ಯಸಿಡ್ ಚರ್ಮವನ್ನು ಮೃದುವಾಗಿಸಿ ತೇವಾಂಶದ ಮಟ್ಟ ನಿರ್ವಹಿಸುತ್ತದೆ. ಸೂಕ್ಷ್ಮ ರೇಖೆಗಳನ್ನು ಮೃದುವಾಗಿಸುತ್ತದೆ ಮತ್ತು ತೈಲ ಗ್ರಂಥಿಗಳ ಉತ್ಪಾದನೆಯನ್ನು ಸಮತೋಲನಗೊಳಿಸಿ ಚರ್ಮದ ಕಾಂತಿ ಹೆಚ್ಚಿಸುತ್ತದೆ.
- ರಾತ್ರಿ ಮಲಗುವ ಮುನ್ನ ತ್ವಚೆಗೆ ಹ್ಯುಮಿಡಿಫೈಯರ್ ಬಳಸಬೇಕು. ಇದು ಚರ್ಮದಲ್ಲಿನ ತೇವಾಂಶ ಆರದಂತೆ ತಡೆಗೋಡೆ ರೀತಿ ವರ್ತಿಸುವುದರಿಂದ, ಚರ್ಮ ಶುಷ್ಕವಾಗಲು ಬಿಡುವುದಿಲ್ಲ.
- ಪದೇ ಪದೇ ಸ್ಯಾನಿಟೈಸರ್ ಬಳಕೆ ಒಳೆಯದಲ್ಲ. ಸ್ಯಾನಿಟೈಸರ್ ಬಳಸಿದ ಮೇಲೆ ರಾತ್ರಿ ವೇಳೆ ಕೈಗಳಿಗೆ ತೆಂಗಿನೆಣ್ಣೆ ಹಚ್ಚಿಕೊಳ್ಳಬೇಕು. ಲೋಳೆಸರದ ಜೆಲ್ ಕೂಡ ಹಚ್ಚಬಹುದು.

ಉಗುರಿನ ಆರೈಕೆ

- ಅತಿಯಾದ ಸ್ಯಾನಿಟೈಸರ್ ಬಳಕೆ ಕೂಡ ಉಗುರಿನ ಹಾನಿಗೆ ಕಾರಣವಾಗಬಹುದು. ಉಗುರನ್ನು ಸದಾ ಒದ್ದೆಯಾಗಿರಲು ಬಿಡಬೇಡಿ ಮತ್ತು ಸ್ವಚ್ಛವಾಗಿರಿಸಿಕೊಳ್ಳಿ.
- ಉಗುರಿನ ಸುತ್ತಲಿನ ಚರ್ಮ ಒಡೆಯುವುದು ಮತ್ತು ಬಿರುಕು ಬಿಡುವುದನ್ನು ತಡೆಯಲು ದಿನದಲ್ಲಿ ಮೂರ್ನಾಲ್ಕು ಬಾರಿ ಕ್ರೀಮ್ ಹಚ್ಚಿಕೊಳ್ಳಿ.
- ವಾರಕ್ಕೊಮ್ಮೆ ಉಗುರನ್ನು ಬೆಚ್ಚಗಿನ ನೀರಿನಲ್ಲಿ ಕೆಲ ನಿಮಿಷಗಳ ಕಾಲ ನೆನೆಸಿ ನಂತರ ಚೆನ್ನಾಗಿ ಒರೆಸಿ ತೆಂಗಿನ ಎಣ್ಣೆಯ ಅಂಶಗಳಿರುವ ಕ್ರೀಮ್ / ತೈಲವನ್ನು ಹಚ್ಚಬೇಕು. ಇದು ಚರ್ಮದ ಆಳದಲ್ಲಿ ಉಗುರಿನ ಆಕಾರ ತುಂಡಾಗುವುದನ್ನು ತಡೆಯುತ್ತದೆ ಮತ್ತು ಚರ್ಮದಲ್ಲಿನ ತೇವವನ್ನು ಪರಿಣಾಮಕಾರಿಯಾಗಿ ಉಳಿಸಿಕೊಳ್ಳುತ್ತದೆ.
- ಉಗುರಿನ ಹೊರಪೊರೆಗಳನ್ನು ಕೀಳದಿರಿ. ಇದರಿಂದ ಉಗುರಿನ ಒಳಭಾಗಕ್ಕೆ ತೊಂದರೆಯಾಗುತ್ತದೆ ಹಾಗೂ ಬ್ಯಾಕ್ಟೀರಿಯಾದ ಸಂತಾನೋತ್ಪತ್ತಿಗೆ ಇದು ಕಾರಣವಾಗಬಹುದು.
- ವಾರಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ನೇಲ್ ಪೇಂಟ್ ರಿಮೂವರ್ ಬಳಸಬೇಡಿ ಅಥವಾ ಅಸೆಟೋನ್-ಮುಕ್ತ ನೇಲ್ ಪೇಂಟ್ ರಿಮೂವರ್ ಬಳಕೆ ಮಾಡಿ. ಆದರೆ, ನಿಮ್ಮ ಉಗುರಿನ ಪೇಂಟ್ ಅನ್ನು ಮೃದುವಾಗಿ ತೆಗೆಯಿರಿ. ಏಕೆಂದರೆ, ನೇಲ್ ಪೇಂಟ್ ರಿಮೂವರ್‌ನ ಪ್ರಮುಖ ಅಂಶವಾಗಿರುವ ಅಸೆಟೋನ್, ಉಗುರನ್ನು ಶುಷ್ಕವಾಗಿಸುತ್ತದೆ.
- ಉಗುರು ಆರೋಗ್ಯವಾಗಿರಲು ಹಾಗೂ ಅದರ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಸಮತೋಲಿತ ಆಹಾರ ಅಗತ್ಯ. ಬಯೋಟಿನ್, ಒಮೇಗಾ 3- ಫ್ಯಾಟಿ ಆ್ಯಸಿಡ್, ಪ್ರೊಟೀನ್, ವಿಟಮಿನ್ ಎ ಮತ್ತು ಝಿಂಕ್ ಹೊಂದಿರುವ ಆಹಾರಗಳು ಉಗುರಿನ ಆರೋಗ್ಯಕ್ಕೆ ಉತ್ತಮವಾಗಿವೆ.

(ಚರ್ಮರೋಗ ತಜ್ಞೆ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in


ಅಭಿಮತ



❦ ಸುಭಾಷಿತ ❦
ಪ್ರತಿದಿನವೂ ನಿಮ್ಮನ್ನು ನೀವು ಮರು ವ್ಯಾಖ್ಯಾನಿಸಿಕೊಳ್ಳಲು ಸಿದ್ಧರಾಗಿರಿ.
-ದೀಪಕ್ ಚೋಪ್ರಾ

ಕಟ್ಟಡ ಯೋಜನೆ ಉಲ್ಲಂಘನೆಗೆ ಉತ್ತೇಜನ ನೀಡುವ ನಡೆ ಸರಿಯಲ್ಲ

ಬೆಂಗಳೂರು ಮಹಾನಗರವು ವ್ಯವಸ್ಥಿತವಾಗಿ ಅಭಿವೃದ್ಧಿ ಹೊಂದಬೇಕೆಂಬ ಉದ್ದೇಶದಿಂದ ಹಾಗೂ ಲಂಗುಲಗಾಮಿಲ್ಲದೇ ಕಟ್ಟಡ ನಿರ್ಮಿಸುವುದನ್ನು ನಿಯಂತ್ರಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಕಟ್ಟಡ ಉಪವಿಧಿಗಳನ್ನು (ಬೈಲಾ) ರೂಪಿಸಿ, ಜಾರಿಗೊಳಿಸಿದೆ. ಈ ನಿಬಂಧನೆಗಳು ಜಾರಿಯಲ್ಲಿದ್ದರೂ ನಗರದಲ್ಲಿ ಹೆಚ್ಚಿನ ಕಟ್ಟಡಗಳು ಮಂಜೂರಾತಿ ಪಡೆದ ಕಟ್ಟಡ ಯೋಜನೆಯನ್ನು ಉಲ್ಲಂಘಿಸಿವೆ. ಕಟ್ಟಡ ಯೋಜನೆಗೆ ಮಂಜೂರಾತಿ ಪಡೆದ ಬಳಿಕ ನಿರ್ಮಾಣದ ವೇಳೆ ಶೇ 5ರಷ್ಟು ಉಲ್ಲಂಘನೆ ಮಾಡಿದರೂ ದಂಡ ವಿಧಿಸಿ, ಮುಕ್ತಾಯ ಪ್ರಮಾಣಪತ್ರ (ಸಿ.ಸಿ) ನೀಡಲು ಬಿಬಿಎಂಪಿ ಕಟ್ಟಡ ಉಪವಿಧಿಗಳಲ್ಲಿ ಅವಕಾಶವಿದೆ. ಉಲ್ಲಂಘನೆಯ ಮಿತಿಯನ್ನು ಶೇ 15ಕ್ಕೆ ಹೆಚ್ಚಿಸಲು ಈಗ ತಯಾರಿ ನಡೆದಿದೆ. ಈ ಉದ್ದೇಶದಿಂದ ಕಟ್ಟಡ ಉಪವಿಧಿಗಳಿಗೆ ತಿದ್ದುಪಡಿ ತರುವ ಬಿಬಿಎಂಪಿಯ ಪ್ರಸ್ತಾವಕ್ಕೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಭೆಯಲ್ಲೂ ಅನುಮೋದನೆ ನೀಡಲಾಗಿದೆ ಎಂಬ ವಿಚಾರ ನಿಜಕ್ಕೂ ಆಘಾತಕಾರಿ. ಈ ನಿರ್ಧಾರವು ನಗರದ ವ್ಯವಸ್ಥಿತ ಬೆಳವಣಿಗೆ ಮೇಲೆ ದೀರ್ಘ ಕಾಲದಲ್ಲಿ ತೀವ್ರ ದುಷ್ಪರಿಣಾಮವನ್ನು ಉಂಟುಮಾಡಲಿದೆ. ನಗರದ ಅಭಿವೃದ್ಧಿ ಬಗ್ಗೆ ಆಡಳಿತ ಯಂತ್ರಕ್ಕೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದನ್ನು ಇದು ತೋರಿಸುತ್ತದೆ. ಉಲ್ಲಂಘನೆಗಳನ್ನು ನಿಗ್ರಹಿಸಬೇಕಾದ ಆಡಳಿತ ಯಂತ್ರವೇ ಅಕ್ರಮಗಳಿಗೆ ಮತ್ತಷ್ಟು ಉತ್ತೇಜನ ನೀಡುವಂತಹ ಅಪಾಯಕಾರಿ ಹೆಜ್ಜೆ ಇಡಲು ಹೊರಟರೆ ಕಾನೂನು ಪಾಲನೆ ಮಾಡುವ ನಗರದ ಜನರ ಪಾಡೇನು? ಕಟ್ಟಡ ನಿರ್ಮಿಸುವಾಗ ನಿಯಮಗಳ ಬಗ್ಗೆ ಬಹುತೇಕರು ಈಗಲೂ ತಲೆಕೆಡಿಸಿಕೊಳ್ಳುತ್ತಿಲ್ಲ. ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನ್ನು ಉಲ್ಲಂಘಿಸಿ ಮನಸೋಇಚ್ಛೆ ಕಟ್ಟಡ ನಿರ್ಮಿಸುತ್ತಿರುವ ಪ್ರಕರಣಗಳು ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಇವೆ. ನಿಯಮ ಉಲ್ಲಂಘನೆ ಮಾಡಿ ನಿರ್ಮಿಸಿದ ಕಟ್ಟಡವನ್ನು ಕೆಡವಬೇಕೇ ವಿನಾ ಅದನ್ನು ಸಕ್ರಮಗೊಳಿಸುವುದು ಸರಿಯಲ್ಲ. ಬಿಬಿಎಂಪಿ ಕಟ್ಟಡ ಉಪವಿಧಿಗಳಿಗೆ ಇಂತಹದ್ದೊಂದು ತಿದ್ದುಪಡಿ ತಂದರೆ ಬಿಬಿಎಂಪಿಯ ಕಟ್ಟಡ ಉಪವಿಧಿಗಳಿಗೆ ಕಿಮ್ಮತ್ತೇ ಇಲ್ಲದಂತಾಗುತ್ತದೆ. ಕಾನೂನು ಉಲ್ಲಂಘನೆ ಮಾಡುವುದಕ್ಕೆ ಇದು ಮತ್ತಷ್ಟು ಪ್ರೇರಣೆ ನೀಡುವುದರಲ್ಲಿ ಸಂಶಯವಿಲ್ಲ. ಉಲ್ಲಂಘನೆ ಮಾಡಿದರೂ ದಂಡ ಕಟ್ಟಿ ಅದನ್ನು ಸಕ್ರಮಗೊಳಿಸಿಕೊಳ್ಳಬಹುದು ಎಂಬ ಭಾವನೆಯನ್ನು ಸ್ವತ್ತಿನ ಮಾಲೀಕರು ಬೆಳೆಸಿಕೊಂಡರೂ ಅಚ್ಚರಿ ಇಲ್ಲ. ಕಟ್ಟಡ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಹೊಣೆ ಹೊತ್ತ ಬಿಬಿಎಂಪಿ ಇದರಲ್ಲಿ ವೈಫಲ್ಯ ಕಂಡಿದೆ. ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಈಗ ಈ ಕಟ್ಟಡ ಉಪವಿಧಿಯನ್ನೇ ಸಡಿಲಗೊಳಿಸುವುದು ಸರಿಯಲ್ಲ.



ನಿಯಮ ಉಲ್ಲಂಘಿಸುವ ಕಟ್ಟಡ ಮಾಲೀಕರು ಹಾಗೂ ಅದಕ್ಕೆ ಸಹಕರಿಸುವ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವ ರೀತಿ ನಿಯಮವನ್ನು ಇನ್ನಷ್ಟು ಬಲಪಡಿಸಬೇಕಾಗಿದೆ

ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ಮಿತಿ ಮೀರಿರುವುದಕ್ಕೆ ನಿಯಮ ಮೀರಿ ನಿರ್ಮಾಣವಾಗುತ್ತಿರುವ ಕಟ್ಟಡಗಳೇ ಸಾಕ್ಷಿ. ನಿರ್ಮಾಣ ಹಂತದಲ್ಲೇ ಸ್ಥಳವನ್ನು ಪರಿಶೀಲನೆ ನಡೆಸಿ, ಇಂತಹ ಉಲ್ಲಂಘನೆಗಳನ್ನು ತಡೆಯುವುದು ಬಿಬಿಎಂಪಿ ಅಧಿಕಾರಿಗಳ ಜವಾಬ್ದಾರಿ. ಉಲ್ಲಂಘನೆಯನ್ನು ತಡೆಯಬೇಕಾದ ಅಧಿಕಾರಿಗಳೇ ಸ್ವತ್ತಿನ ಮಾಲೀಕರ ಜೊತೆ ಶಾಮೀಲಾಗಿ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವವರೆಗೂ ಕ್ರಮ ಕೈಗೊಳ್ಳದೇ ಅಕ್ರಮಗಳನ್ನು ಪೋಷಿಸುತ್ತಿರುವುದು ಗುಟ್ಟಿನ ವಿಚಾರವೇನಲ್ಲ. ಕಣ್ಣೆದುರೇ ನಿಯಮ ಉಲ್ಲಂಘನೆ ಕಾಣಿಸುತ್ತಿದ್ದರೂ ಕ್ರಮ ಕೈಗೊಳ್ಳದ ಅಧಿಕಾರಿಗಳ ಸಂಖ್ಯೆಯೇ ಜಾಸ್ತಿ ಇದೆ. ಕಟ್ಟಡ ನಿಯಮ ಉಲ್ಲಂಘನೆಗೆ ಅಧಿಕಾರಿಗಳೂ ಪರೋಕ್ಷವಾಗಿ ಸಹಕರಿಸುತ್ತಿರುವುದರಿಂದಲೇ ನಗರ ಅಸ್ತವ್ಯಸ್ತವಾಗಿ ಬೆಳವಣಿಗೆ ಹೊಂದುತ್ತಿದೆ. ಅಧಿಕಾರಿಗಳು ಸಾರ್ವಜನಿಕ ಹಿತಾಸಕ್ತಿಯನ್ನೇ ಮರೆತು ಕಟ್ಟಡ ಬೈಲಾ ಉಲ್ಲಂಘಿಸುವವರ ಬೆಂಬಲಕ್ಕೆ ನಿಲ್ಲುತ್ತಿರುವುದು ವಿಪರ್ಯಾಸವೇ ಸರಿ. ನಿಯಮ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಇರುವ ಗರಿಷ್ಠ ಮಿತಿಯನ್ನು ಶೇ 15ಕ್ಕೆ ಹೆಚ್ಚಿಸುವ ಬದಲು, ಇಂತಹ ನಿಯಮ ಉಲ್ಲಂಘನೆಗೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳನ್ನು ಮುಲಾಜಿಲ್ಲದೇ ಶಿಕ್ಷೆಗೆ ಗುರಿಪಡಿಸುವ ಕಾನೂನನ್ನು ಇನ್ನಷ್ಟು ಬಿಗಿಗೊಳಿಸುವ ತುರ್ತು ಅಗತ್ಯ ಇದೆ. 'ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವ ಸ್ವತ್ತಿನ ಮಾಲೀಕರಿಗೆ ಒಂದು ಸಲ ದಂಡ ವಿಧಿಸಿ, ಅದನ್ನು ಸಕ್ರಮಗೊಳಿಸುವುದು ಸಾಧುವಲ್ಲ. ಅದರ ಬದಲು ಅವರು ತಮ್ಮ ತಪ್ಪಿಗೆ ಪ್ರತಿ ವರ್ಷವೂ ದಂಡ ತೆರುವ ರೀತಿ ನಿಯಮ ತಿದ್ದುಪಡಿ ಮಾಡಬೇಕು. ಆಗ ಇಂತಹ ಉಲ್ಲಂಘನೆಗಳಿಗೆ ತನ್ನಿಂದ ತಾನೇ ಕಡಿವಾಣ ಬೀಳಲಿದೆ. ಸಣ್ಣಪುಟ್ಟ ಉಲ್ಲಂಘನೆ ಮಾಡುವ ಮುನ್ನವೂ ಹತ್ತು ಬಾರಿ ಯೋಚಿಸುವ ಪರಿಸ್ಥಿತಿ ನಿರ್ಮಾಣವಾಗಲಿದೆ' ಎಂಬುದು ನಗರ ಯೋಜನಾ ತಜ್ಞರ ಸಲಹೆ. ಈಗಲೂ ಕಾಲ ಮಿಂಚಿಲ್ಲ. ತಪ್ಪುಗಳನ್ನು ಮುಚ್ಚಿಹಾಕುವ ಉದ್ದೇಶದಿಂದ ತಯಾರಿಸಲಾದ ಬಿಬಿಎಂಪಿಯ ಕಟ್ಟಡ ಉಪವಿಧಿಗಳ ತಿದ್ದುಪಡಿ ಪ್ರಸ್ತಾವಕ್ಕೆ ಸಚಿವ ಸಂಪುಟ ಯಾವುದೇ ಕಾರಣಕ್ಕೂ ಅನುಮೋದನೆ ನೀಡಬಾರದು. ಇದಕ್ಕೆ ಅನುಮೋದನೆ ನೀಡಿದರೆ ಅದು, ಕಾನೂನು ಪಾಲನೆ ಮಾಡುವವರಿಗೆ ಮಾಡುವ ಅವಮಾನವಲ್ಲದೇ ಮತ್ತೇನಲ್ಲ. ಅದರ ಬದಲು ನಿಯಮ ಉಲ್ಲಂಘಿಸುವ ಕಟ್ಟಡ ಮಾಲೀಕರನ್ನು ಹಾಗೂ ಅದಕ್ಕೆ ಸಹಕರಿಸುವ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವ ರೀತಿ ನಿಯಮವನ್ನು ಇನ್ನಷ್ಟು ಬಲಪಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್



ಹೀಗಿದೆ ನಮ್ಮ ಮನಃಸ್ಥಿತಿ

ವ್ಯಕ್ತಿಯ ಜಾತಿ, ಧರ್ಮ, ಆಹಾರ ಪದ್ಧತಿ, ಕಸುಬು ಆಧರಿಸಿ ಬಾಡಿಗೆ ಮನೆ ನೀಡುವ ಪರಿಪಾಟವಿದೆ. ಮಾಲೀಕನ ಅಭಿರುಚಿಗೆ ಹೊಂದುವಂತಿದ್ದರೆ ಮಾತ್ರ ಮನೆ ನೀಡುತ್ತಾರೆ. ಇದಕ್ಕೆ ಬೆಂಗಳೂರು ಹೊರತಲ್ಲ. ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳಿರುವ ಹೊರನಾಡಿನವನು ಇಲ್ಲಿ ಸಲ್ಲುತ್ತಾನೆ. ಕನ್ನಡಿಗ ತಬ್ಬಲಿಯಾಗುತ್ತಾನೆ. ವಲಸೆ, ಭಾಷೆ ಮತ್ತು ಗಡಿಯನ್ನು ಮೀರಿದ ಕಟು ವಾಸ್ತವ.

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ



ದಕ್ಷಿಣದ ಇತರ ರಾಜ್ಯಗಳಲ್ಲಿ ನೀಡಿದಂತೆ ಕರ್ನಾಟಕದಲ್ಲಿ ಪ್ರಾದೇಶಿಕ ಶಕ್ತಿಗಳಿಗೆ ಜನರು ಉತ್ತೇಜನ ನೀಡಲಿಲ್ಲ. ಸದಾಕಾಲ ರಾಷ್ಟ್ರೀಯ ಪಕ್ಷಗಳೆಂಬ ಮಾಯಾಜಿಂಕೆಗಳ ಬೆನ್ನುಹತ್ತಿದ ಪರಿಣಾಮ ಇಂದಿಗೂ ನಾವು ನೀರಿಗಾಗಿ ಮಹಾರಾಷ್ಟ್ರ, ಗೋವಾ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳ ಜತೆ ಗುದ್ದಾಡುತ್ತಿದ್ದೇವೆ. ಈಗ ಮೇಕೆದಾಟು ಯೋಜನೆ ಆ ಒದ್ದಾಟದ ಹೊಸ ಹೆಸರು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಬುಧವಾರ, 8-1-1997

• ಹನಿ ನೀರಿಗೂ ಹೋರಾಟ: ತಮಿಳುನಾಡು ದೂರು

ನವದೆಹಲಿ, ಜ. 7– ಶತಮಾನಕ್ಕಿಂತಲೂ ಹಳೆಯದಾದ ಕಾವೇರಿ ವಿವಾದದ ಸಂಬಂಧ ಆದ ಒಪ್ಪಂದಗಳನ್ನು, ಕಾವೇರಿ ನ್ಯಾಯಮಂಡಳಿಯ ಆದೇಶಗಳನ್ನು ಉಲ್ಲಂಘಿಸಿಕೊಂಡು ಬರುತ್ತಿರುವ ಕರ್ನಾಟಕದ ಜತೆ 'ಹನಿ ಹನಿ ನೀರಿಗೂ ಹೋರಾಟ ಮಾಡಬೇಕಾಗಿ ಬಂದಿದೆ' ಎಂದು ತಮಿಳುನಾಡು ಇಂದು ಪ್ರತಿಪಾದಿಸಿತು; ಕಾವೇರಿ ನ್ಯಾಯಮಂಡಳಿಯ ಮುಂದೆ, ಕರ್ನಾಟಕದ ನಿಲುವನ್ನು ಹೆಜ್ಜೆ ಹೆಜ್ಜೆಗೂ ತೀವ್ರವಾಗಿ ಆಕ್ಷೇಪಿಸಿತು.

ನ್ಯಾಯಮಂಡಳಿಯ ಹಿಂದಿನ ಅಧ್ಯಕ್ಷ ನ್ಯಾಯಮೂರ್ತಿ ಚಿತ್ತತೋಷ್ ಮುಖರ್ಜಿ ಅವರು ಕಳೆದ ಜುಲೈನಲ್ಲಿ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಕಳೆದ 6 ತಿಂಗಳಿಂದ ಸ್ಥಗಿತಗೊಂಡಿದ್ದ ಕಲಾಪ ಮತ್ತೆ ಆರಂಭವಾಯಿತು. ಕಳೆದ ತಿಂಗಳು ಹೊಸದಾಗಿ ನೇಮಕವಾದ ನ್ಯಾಯಮೂರ್ತಿ ಎನ್.ಪಿ.ಸಿಂಗ್ ಅವರು ಕಾವೇರಿ ಪ್ರಕರಣದ ಕಲಾಪವನ್ನು ಪುನರಾರಂಭಿಸಿದರು.

50 ವರ್ಷಗಳ ಹಿಂದೆ
ಶನಿವಾರ, 8-1-1972

• ಶಾಂತಿ ನೆಲೆಸಲು ಭಾರತದ ಜತೆ ಚರ್ಚೆಗೆ ಸಿದ್ಧ: ಭುಟ್ಟೊ

ನವದೆಹಲಿ, ಜ. 7– ಭಾರತದೊಡನೆ ಶಾಂತಿಯಿಂದ ಇರಬಯಸುವ ಪಾಕಿಸ್ತಾನವು ಪರಸ್ಪರ ಮಾತುಕತೆಗೂ ಸಿದ್ಧವಾಗಿರುವುದೆಂದು ಅಧ್ಯಕ್ಷ ಭುಟ್ಟೊ ತಿಳಿಸಿರುವುದನ್ನು ಪಾಕ್ ರೇಡಿಯೊ ಇಂದು ಬಿತ್ತರಿಸಿತು.

ಈ ರೀತಿಯ ಚರ್ಚೆಗೂ ಮುಂಚೆ ಭಾರತವು ಯಾವುದೇ ರೀತಿಯ ಬೆದರಿಕೆಗಳನ್ನೂ ಹಾಕಬಾರದೆಂದು ಅವರು ಇಂದು ತಮ್ಮ ಸ್ವಸ್ಥಳವಾದ ಲರ್ಕಾನಾದಲ್ಲಿ ಪೀಪಲ್ಸ್ ಪಾರ್ಟಿ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು.

ತನ್ನ ಮಿಲಿಟರಿ ವಿಜಯದ ನಂತರ ನಾಚಿಕೆಗೇಡಿನ ಜೀವನ ನಡೆಸಲು ಪಾಕಿಸ್ತಾನವನ್ನು ಬಲಾತ್ಕರಿಸಿದಲ್ಲಿ ಅದು ಭಾರತದ ತಪ್ಪು ಆಗುವುದೆಂದು ಹೇಳಿದ ಭುಟ್ಟೊ ಅವರು ಪಾಕಿಸ್ತಾನ ಇದಕ್ಕೆ ಸಿದ್ಧವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

• 'ವಿದೇಶಿ ಒತ್ತಡ, ಭೇದ ನೀತಿಗಳಿಗೆ ಭಾರತ ಬಗ್ಗದು'

ಇಂದೋರ್, ಜ. 7– ಭಾರತಕ್ಕೆ ಕೇಡು ಹಾರೈಸುವ ಹಾಗೂ ಭಾರತ– ಬಾಂಗ್ಲಾ ದೇಶಗಳ ಮಧ್ಯೆ ಭಿನ್ನಾಭಿಪ್ರಾಯ ತರಲು ಅಂತರರಾಷ್ಟ್ರೀಯ ವಲಯಗಳಲ್ಲಿ ನಡೆದಿರುವ ಯತ್ನಗಳನ್ನು ಲೆಕ್ಕಿಸದೆ, ಶಾಂತಿ, ಪ್ರಜಾಸತ್ತೆ ಹಾಗೂ ಜಾತ್ಯತೀತತೆಯ ನೀತಿಗಳನ್ನು ಭಾರತ ಮುಂದುವರಿಸಿಕೊಂಡು ಹೋಗುವುದು ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಘೋಷಿಸಿದರು.

ಯಾರು ಯಾವತ್ತಿಗೂ ಆಡಬಹುದಾದ ಸುಳ್ಳುಗಳು ಸಾರ್ವಜನಿಕರಿಗೆ ಅರ್ಥವಾಗುತ್ತಲೇ ಇರುತ್ತವೆ

ಸತ್ಯದ ದಾರಿ ಕತ್ತಿಯ ಮೇಲಿನ ನಡಿಗೆ



ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು

ಗ್ರಾಮವೊಂದರಲ್ಲಿ ನಡೆಯುತ್ತಿದ್ದ ಬಯಲಾಟ 'ಸತ್ಯ ಹರಿಶ್ಚಂದ್ರ' ನಾಟಕದ ಆರಂಭಿಕ ದೃಶ್ಯದಲ್ಲಿ ವಸಿಷ್ಠ–ವಿಶ್ವಾಮಿತ್ರರ ಸಂಭಾಷಣೆ ಸ್ವಲ್ಪ ಉದ್ದವೆನಿಸಿತು. ಆದರೂ ಬಯಲಲ್ಲಿ ಕೂತ ಪ್ರೇಕ್ಷಕವೃಂದ ಕಣ್ಣುಬಿಟ್ಟು, ಚಿತ್ತವಿಟ್ಟು ನಾಟಕ ನೋಡುತ್ತಿತ್ತು.

ದೃಶ್ಯದಲ್ಲಿ ಇಬ್ಬರು ಮುನಿವರ್ಯರ ಸತ್ಯಸಂಬಂಧದ ವಾಗ್ವಾದವನ್ನು ದೇವೇಂದ್ರನು ಪ್ರೇಕ್ಷಕರಂತೆಯೇ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದನು. ಈ ಪಾತ್ರವು ಮಾತೇ ಆಡುತ್ತಿಲ್ಲವಲ್ಲ ಎಂದು ಅಲ್ಲೇ ಹಗ್ಗದ ಮಂಚದ ಮೇಲೆ ಕೂತಿದ್ದ ಯಜಮಾನರೊಬ್ಬರನ್ನು ಕೇಳಲು, ಅವರು ಥಟ್ಟನೆ 'ಅಯ್ಯೋ ಅವನು ಲೋಕ ಆಳುವ ದೊರೆ, ಅವನಿಗೂ ಸತ್ಯಕ್ಕೂ ಎಲ್ಲಿಗೆಲ್ಲಿಯ ಸಂಬಂಧ? ಆದರೂ ಮುನಿಗಳ ಮಾತುಕತೆಯನ್ನು ಅರೆಗಿವುಡಾಗಿ ಕೇಳಿಸಿಕೊಳ್ಳುತ್ತಿದ್ದಾನೆ' ಎಂದರು. ಆಶ್ಚರ್ಯವೆನಿಸಿ, ಈ ಮುನಿವರ್ಯರ ಸಂಭಾಷಣೆಯೂ ಸ್ವಲ್ಪ ಜಾಸ್ತಿಯಾಯಿತೆನ್ನಲು, ಯಜಮಾನರು ಗಂಭೀರ ಮುಖದಲ್ಲಿ 'ಸತ್ಯ ವಿಚಾರದ ದಾರಿ ಕಷ್ಟ, ಅದನ್ನು ಒಂದು ಮಾತಿನಲ್ಲಿ ಮುಗಿಸಲಾಗದು. ಅದಕ್ಕೇ ಅವರು ಒಬ್ಬ ರಾಜನನ್ನು ಮಧ್ಯ ತಂದು ಅವನು ಸತ್ಯವಂತ ಹೌದೋ ಅಲ್ಲವೋ ಅಂದು ವಾದಕ್ಕೆ ಬಿದ್ದಿರುವರು. ಋಜುಮಾರ್ಗವೆಂದರೆ ಅದೇನು ನಡೆಮುಡಿ ಹಾಸಿದ ದಿಬ್ಬಣದ ಮೆರವಣಿಗೆಯೇ' ಅಂದರು.

ಹಿರಿಯರು ಅನುಭವದ ಹಿನ್ನೆಲೆ ಮತ್ತು ಇದೀಗ ಕಣ್ಣೆದುರೇ ಕಾಣುತ್ತಿರುವ ಸತ್ಯದ ಹೆಸರಿನ ಮೇಲೆ ನಡೆಯುತ್ತಿರುವ ಘನ ಕಾರ್ಯ, ಸೇವೆ ಮತ್ತು ವಹಿವಾಟುಗಳನ್ನು ತಿಳಿದೋ ತಿಳಿಯದೆಯೋ ಮಾತಾಡಿದ್ದು ಕಳೆದ ಶತಮಾನಗಳ ಜನಬದುಕಿನ ಪಡಿಪಾಟಲುಗಳನ್ನೂ ಅರಸರ ಸತ್ಯಮಿಥ್ಯಾ ಸಂಗತಿಗಳನ್ನೂ ಹೇಳುವಂತಿತ್ತು. ಸತ್ಯವನ್ನು ನುಡಿಯಲಾಗದೆ, ನಡೆಯಲಾಗದೆ ಸ್ಮಶಾನ ಸೇರುತ್ತಿರುವ, ಒಂದು ವೇಳೆ ನುಡಿದು ನಡೆದರೂ ಅದೇ ದಾರಿಯಾಗಿಬಿಡುವ ಋಜುಮಾರ್ಗದ ಅಲ್ಪಸಂಖ್ಯಾತರ ಗತಿಯನ್ನೂ ಹೇಳುವಂತಿತ್ತು.

ನಾಟಕ ನೋಡುತ್ತ ಯಜಮಾನರು ಬಳಸಿದ 'ಸತ್ಯದ ದಾರಿ ಕಷ್ಟ' ಎಂಬ ಮಾತು ಗ್ರಾಮಸ್ಥ ಮಹಿಳೆಯರಲ್ಲಿ ಬೇರೊಂದು ಭಯವನ್ನೂ ಹುಟ್ಟುಹಾಕಿದ್ದು ಗೊತ್ತಾಯಿತು. ಸತ್ಯವಂತನ ಪಾರ್ಟು ಮಾಡುವ ತಮ್ಮ ಗಂಡಂದಿರು ಸ್ಮಶಾನದ ದಾರಿಯನ್ನೇ ಹಿಡಿದು ಗತಿ ಇಲ್ಲದಂತಾಗಿಬಿಡುವರೆಂಬ ಕಾಲಾನುಕಾಲದ ನಂಬಿಕೆ ಬಲವಾಗಿದ್ದು, ಆ ಥರದ ಕಷ್ಟ ಮಾರ್ಗಕ್ಕಿಂತ ಇನ್ನಾವುದಾದರೂ ಸುಲಭದ ದಾರಿ ಹಿಡಿಯುವುದೇ ಲೇಸು ಎಂಬ ಚಿಂತೆಯಲ್ಲಿದ್ದರು. ಇಂಥದೆಲ್ಲ ನಂಬಿಕೆಗಳ ಮೇಲೋ ಅಥವಾ ಇದಲ್ಲದೆಯೋ 'ನ ಬ್ರೂಯಾತ್ ಸತ್ಯಮಪ್ರಿಯಂ' ಎಂದೂ, ಶುದ್ಧ ಜನಪದದಲ್ಲಿ 'ಸತ್ಯ ನುಡಿದವನ ಬೆನ್ನು ಬೆತ್ತಲು' ಎಂಬೆಲ್ಲ ಲೋಕವಾರ್ತೆ ರೂಢಿಗೆ ಬಂದುಬಿಟ್ಟವು.

ನಾಟಕದ ಒಂದೆರಡು ಸೀನುಗಳ ನಂತರ, ಈಗ ನಮ್ಮೆದುರು ನಡೆಯುತ್ತಿದೆಯಲ್ಲ ಈ ಬಯಲಾಟದ ಕಥೆಯನ್ನು ಬರೆದವರು ಯಾರು ಎಂಬ ಪ್ರಶ್ನೆಗೆ, ನಿರೀಕ್ಷೆಯಂತೆ ಗ್ರಾಮ ಮಟ್ಟದ ಓದು ಮತ್ತು ಕಾವ್ಯಾಲಾಪದ ಅರಿವಿದ್ದ ಹಿರಿಯರೊಬ್ಬರು 'ಅದೇ ಎಂಟುನೂರು ವರ್ಷಗಳ ಹಿಂದಿನ ಕವಿ ರಾಘವಾಂಕ' ಎಂದು ಉತ್ತರಿಸಬಹುದೆನಿಸಿತು. ಅನೇಕಾನೇಕ ಪ್ರಾಚೀನ ಪುರಾಣ ಕಥನ ಕಾವ್ಯಗಳಲ್ಲೆಲ್ಲ ಪ್ರಸ್ತಾಪಗೊಂಡು ಭಾರತದಾದ್ಯಂತ ನಾನಾ ಪ್ರಕಾರಗಳಲ್ಲಿ ಪ್ರಸಿದ್ಧವಾಗಿ, ತತ್ಸಂಬಂಧದಲ್ಲಿಯೇ ಉತ್ತರ ಕೊಡಬಹುದು ಎಂದುಕೊಳ್ಳುವಲ್ಲಿ ಹಿರಿಯರು ಅದೇ ನಮ್ಮ ಬರಹದ ನರಸಿಂಹಪ್ಪ ಭಾಗವತರು ಬರೆದದ್ದು ಅಂದರು! ನನ್ನ ಯಥಾವಿಧಿಯಾದ ತಿಳಿವಳಿಕೆ ಬದಲಾಗಿಬಿಟ್ಟಿತು.

ನಿರಂತರ ಶಾಶ್ವತ ಮೌಲ್ಯ ಸಾರುವ ನಮ್ಮ ಕಣ್ಣ ಮುಂದಿನ ಯಾವುದೇ ಕಥೆಯಾಗಲಿ ಅದು ಯಾವತ್ತೂ ತನ್ನ ರೂಪವನ್ನು ಬದಲಿಸಿಕೊಂಡೇ ಬಂದಿರುತ್ತದೆ. ಈ ಮಾತು ಮಹಾಭಾರತಕ್ಕೂ ರಾಮಾಯಣಕ್ಕೂ ಯಾವುದೇ ಪುರಾಣಗಳಿಗೂ ಅದರೊಳಗೇ ಕಂಡು ಬರುವ ಹರಿಶ್ಚಂದ್ರನ ಕಥೆಗೂ ಅನ್ವಯವಾಗುತ್ತದೆ. ಆದರೆ ಒಂದನ್ನಂತೂ ತಿಳಿಯಲೇಬೇಕು, ಕಥನ ಸ್ವರೂಪ ಬದಲಾದರೂ ಅದರ ಮೂಲ ತತ್ವ ಅಂದರೆ ಮೌಲ್ಯ ಬದಲಾಗುವುದಿಲ್ಲ. ಅದು ಹರಿಶ್ಚಂದ್ರನ ಕಥೆಗೆ ಮಾತ್ರ ಯಾಕೆ, ಸತ್ಯವನ್ನು ಕುರಿತ ತತ್ವಕ್ಕಾಗಿ ಮಹಾತ್ಮ ಗಾಂಧಿಯವರೂ ಮೆಚ್ಚಿದ ಗೋವಿನ ಹಾಡಿಗೂ ಅನ್ವಯಿಸುತ್ತದೆ. ಅದೇ ಕಾರಣಕ್ಕೋ ಏನೋ ಎದುರು ಜರುಗುತ್ತಿದ್ದ ನರಸಿಂಹಪ್ಪ ಭಾಗವತರ ನಾಟಕದಲ್ಲಿ ಸತ್ಯವನ್ನು ಕುರಿತಾದ ಸಂಭಾಷಣೆಯು ದೀರ್ಘವಾಗಿ, ದೇವೇಂದ್ರನು ಅರೆಗಿವುಡನಾಗಿ, ನಕ್ಷತ್ರಿಕನು ಕಾಸು ವಸೂಲಿಯವನಾಗಿ, ರೈತರು ಹರಿಶ್ಚಂದ್ರನಲ್ಲಿ ತಮ್ಮ ಕಷ್ಟ ಹೇಳಿಕೊಳ್ಳುವವರಾಗಿ, ಅವನು ಅಲ್ಲಿಂದ ಬೇಟೆಗೆ ಹೊರಟು ಸತ್ಯದ ಕಠಿಣ ಮಾರ್ಗ ತುಳಿದದ್ದು, ಹಳೆಯ ಕಥೆಯ ಹಳಿಯ ಮೇಲಿನ ಹೊಸ ಪಠ್ಯವಾಗಿ ಕಾಣಿಸುತ್ತಿತ್ತು.

ಆಗೀಗ ದೃಶ್ಯಾವಳಿಗಳ ಮಧ್ಯೆ ಮಾತಾಡುತ್ತಲೇ ಇದ್ದ ಹಿರಿಯರು ಹರಿಶ್ಚಂದ್ರನ ಅರಣ್ಯ ಗಮನವನ್ನು ಕುರಿತಾಗಿ, 'ಇದೀಗ ನೋಡಪ್ಪ, ಹರಿಶ್ಚಂದ್ರ ತನ್ನ ಸುಳ್ಳಿನ ಸಿಂಹಾಸನ ಬಿಟ್ಟು ಸತ್ಯದ ಸಿಂಹಾಸನ ಹುಡುಕಿ ಹೊಂಟನಲ್ಲ' ಎಂಬ ಅರ್ಥಪೂರ್ಣ ಮಾತನಾಡಿದರು. ಅದು ಸರಿ ಇತ್ತು. ಬಿಜ್ಜಳನ ಅರಮನೆಯನ್ನು ತೊರೆದು ಬಸವಣ್ಣನವರು ಹೊರಟದ್ದು ಬಯಲ ಶೂನ್ಯ ಸಿಂಹಾಸನದ ಕಡೆಗೆ ತಾನೇ ಎನಿಸಿತು. ಅನುಭವ ಮಂಟಪದ ಸಿಂಹಾಸನವೆಂದರೆ ಜನಪದರಿಗೆ ಅದು ಮುರಿದು ಬೀಳುವ, ಅದೃಷ್ಟ ಕೆಟ್ಟಾಗ ಕಳೆದು ಹೋಗುವ ಕುರ್ಚಿಯಲ್ಲ ಎಂಬುದು ಗೊತ್ತಿದೆ. ಅದು ಭೂಮಿಯ ಕಾಠಿಣ್ಯ, ಜಲದ ರಸ, ಅಗ್ನಿಯ ಬಿಸಿ, ವಾಯುವಿನ ಕಲೆ, ಆಕಾಶದ ಶಬ್ದಗುಣ ಇದೆಲ್ಲದರ ದೃಶ್ಯ, ಅದೃಶ್ಯ ರೂಪಿ ಆಸನ. ಇಂಥದೊಂದು ಪರಮ ಪವಿತ್ರ ಆಸನ ಒಂದು ಕಡೆಗೆ ಇದ್ದರೆ, ಇದರ ಸಮೀಪ ಬಂದು ಅಹವಾಲು ಹೇಳಿಕೊಳ್ಳಬೇಕಾದವನು ರೋಗಗ್ರಸ್ತ ಕುರೂಪಿಯಾಗಿ, ಜರಾಜೀರ್ಣವೇಷಿಯಾಗಿ ದೂರದಲ್ಲಿ ಹೊರಗೆ ನಿಂತಿದ್ದಾನೆ. ಇಂತಹವನನ್ನು ಈ ದಿವ್ಯ ಸಿಂಹಾಸನದತ್ತ ಕರೆತರುವವನಿಗೆ ಅಸಾಧಾರಣ ಶಕ್ತಿ, ಆತ್ಮಸ್ಥೈರ್ಯ, ಮನುಷ್ಯಪ್ರೀತಿ ಇರಬೇಕಾಗುತ್ತದೆ. ಆ ಶಕ್ತಿ ಒದಗಿ ಬರುವುದು ಸತ್ಯ ಮತ್ತು ಮಹಾ ಪ್ರಾಮಾಣಿಕತೆಯಿಂದಲೇ!

ಯುದ್ಧ ಮತ್ತು ಪರಾಕ್ರಮ, ಅದರ ಸಾವಿನಲ್ಲೇ ದೊರಕುವ ಇನ್ನೊಂದು ಲೋಕದ ಬರೀ ಕನಸುಗಳನ್ನು ತೊಡೆದುಹಾಕಲು ಹೊರಟ ಬಸವಾದಿ ವಚನಕಾರರು, ಸಂತರು ಸತ್ಯದ ಪರಾಕಾಷ್ಠೆಯನ್ನು ಮುಟ್ಟಿಯೇ ತೀರುವ ಹಾದಿಯಲ್ಲಿ ಚದುರಿಹೋದರು. ಆದರೆ ಅವರು ಹಚ್ಚಿದ ಬೆಳಕಲ್ಲೇ ಇರುವ ಜನಜಗತ್ತಿಗೆ, ಯಾರು ಯಾವತ್ತಿಗೂ ಆಡಬಹುದಾದ ನಿತ್ಯದ ಮಿಥ್ಯಾಪ್ರಚಾರವು ಸಾರ್ವಜನಿಕರಿಗೆ ಅರ್ಥವಾಗುತ್ತಲೇ ಇರುತ್ತದೆ. ಭ್ರಷ್ಟ ಸಂಗತಿಗಳು ಅರಿವಿಗೆ ಬರುತ್ತಲೇ ಇರುತ್ತವೆ.

'... ಇನ್ನು ಸುಮ್ಮನಿರಲಾಗದು, ಸತ್ಯವನ್ನು ಬಿಚ್ಚಿಡಬೇಕಾಗಿದೆ, ಆಗ ಜನಕ್ಕೆ ಎಲ್ಲ ಗೊತ್ತಾಗಿಬಿಡುತ್ತದೆ...' '... ನಾನು ಭ್ರಷ್ಟನೆಂಬುದು ಸತ್ಯಕ್ಕೆ ದೂರವಾದ ಮಾತು...' '...ಸಮಗ್ರ ತನಿಖೆಯ ನಂತರ ಸತ್ಯ ಹೊರಬಂದ ಮೇಲೆ ಅದು ಯಾರೇ ಆಗಿದ್ದರೂ ಕ್ರಮ ನಿಶ್ಚಿತ. ಜನರ ಮುಂದೆ ಸತ್ಯವನ್ನು ಬಿಚ್ಚಿಡುವುದೇ ನಮ್ಮ ಉದ್ದೇಶ...' '...ಸತ್ಯ ಹೇಳಬೇಕೆಂದರೆ ನನಗೆ ನೆನ್ನೆಯವರೆಗೆ ಟಿಕೆಟ್ ಸಿಗುತ್ತದೆ ಎಂಬ ನಂಬಿಕೆ ಇರಲಿಲ್ಲ. ಅದು ಇಂದು ಅನೌನ್ಸ್ ಆಗಿದೆ. ದೇವರ ಆಶೀರ್ವಾದ ನನ್ನ ಮೇಲೆ ಇದೆ...' '... ಸಾಹಿತ್ಯ ಸೇವೆಗಾಗಿ ಈ ರಾಷ್ಟ್ರೀಯ ಪ್ರಶಸ್ತಿ ಬಂದದ್ದು ಆಶ್ಚರ್ಯ. ಇದು ನನಗೆ ಸಂದಾಯವಾದದ್ದು ಎಂಬುದನ್ನು ಖಚಿತಪಡಿಸಿಕೊಳ್ಳಲು ಎರಡು ದಿನ ಬೇಕಾಯಿತು...' '... ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲ...' ಇವು ಇತ್ತೀಚಿನ ದಿನಮಾನಗಳ ನಿತ್ಯ ಸತ್ಯದ ಸಂಭಾಷಣೆಗಳು.

ಎಂಟುನೂರು ವರ್ಷಗಳ ಹಿಂದೆ ವಚನಕಾರರು, ಶ್ರೀಸಾಮಾನ್ಯರು ಮತ್ತು ರಾಜಕಾರಣದ ಹಿನ್ನೆಲೆಯಲ್ಲಿ ಸತ್ಯ ಪ್ರತಿಪಾದನೆಯ ಕಥೆಯನ್ನು ಸೃಷ್ಟಿಸಿದವನು ಮಹಾಕವಿ ರಾಘವಾಂಕ. ದೊಡ್ಡವರ ಸಭೆಯಲ್ಲಿ ಸತ್ಯದ ಚರ್ಚೆಯನ್ನು ಏರ್ಪಡಿಸಿ, ರಾಜನೊಬ್ಬನನ್ನು ನಿಮಿತ್ತ ಮಾಡಿ, ಅವನನ್ನು ಅರಮನೆಯ ಕೃತಕ ಸಿಂಹಾಸನದಿಂದ ಇಳಿಸಿ, ಕಾಶಿಗೆ ನಡೆಸಿ, ಹೆಂಡತಿ ಮಕ್ಕಳನ್ನು ಮಾರಿಸಿ, ಕಡೆಗೆ ಸ್ಮಶಾನದಲ್ಲಿ ಸತ್ಯ ಸ್ವರೂಪಿ ಶಿವನನ್ನು ಸಾಕ್ಷಾತ್ಕಾರಗೊಳಿಸಿಬಿಟ್ಟ ಅನನ್ಯ ಕಥೆಯನ್ನು ರಚಿಸಿದ ನಂತರ ಇದು ಎಲ್ಲ ಶತಮಾನಗಳ ಜನರ ಕೈದೀವಿಗೆಯಾಗಲಿ ಎಂದು ಬಿಟ್ಟುಹೋದ. ಹೋಗುವಲ್ಲಿ 'ಇದರಿಂದ ನನಗೆ ಯಾವ ಅಪೇಕ್ಷೆಯೂ ಇಲ್ಲ, ಇದನ್ನು ಕೇಳಿ ಜನ ಬದುಕಬೇಕಷ್ಟೆ' ಎಂದ.



ಚುರುಮುರಿ



ವೈರಸ್ ವೈರಾಗ್ಯ

• ಸಿ.ಎನ್.ರಾಜು

'ಡಾಕ್ಟ್ರೇ, ನನ್ನ ಗಂಡ ರಾತ್ರಿ ನಿದ್ದೆಯಲ್ಲಿ ಚೀಟಾರನೆ ಚೀರುತ್ತಾರೆ, ಹಗಲಲ್ಲಿ ವಿಚಿತ್ರವಾಗಿ ಆಡ್ತಾರೆ. ಏನು ಕಾಯಿಲೆ ಅಂತ ಚೆಕ್ ಮಾಡಿ ಚಿಕಿತ್ಸೆ ಕೊಡಿ' ಅನು ಕೇಳಿಕೊಂಡಳು.

'ಹೌದಾ ಸಾರ್?' ಡಾಕ್ಟರ್ ಕೇಳಿದರು. ಹೌದೆಂದು ಗಿರಿ ತಲೆಯಾಡಿಸಿದ.

'ಮಾತು ಕಮ್ಮಿ ಮಾಡಿದ್ದಾರೆ. ನಾನು ರೇಗಿದರೆ ತಿರುಗಿಸಿ ರೇಗುವುದಿಲ್ಲ, ಬೈದರೆ ವಾಪಸ್ ಬೈಯ್ಯುವುದಿಲ್ಲ. ಗಂಡ-ಹೆಂಡ್ತಿ ನಡುವೆ ಸಣ್ಣ ಜಗಳವೂ ಇಲ್ಲ, ಹಿಂಗಾದ್ರೆ ಸಂಸಾರ ನಡೆಯುತ್ತಾ ಸಾರ್?' ಅನುವಿನ ಆತಂಕದ ನುಡಿ.

'ಹೌದೇ? ಛೇಛೇ...' ಡಾಕ್ಟರ್ ಲೊಚಗುಟ್ಟಿದರು.

'ಮನೇಲಿ ನಾನು, ಮಕ್ಕಳು ಕೆಮ್ಮುವಂತಿಲ್ಲ, ಸೀನುವಂತಿಲ್ಲ. ಒಗ್ಗರಣೆ ಘಾಟಿಗೂ ಕೆಮ್ಮ ಬಾರದೇ? ಕೆಮ್ಮು ಬಂದಾಗ ಆಚೆ ಹೋಗಿ ಕೆಮ್ಮಿ ಬರ್ತೀವಿ' ಸಂಕಟ ತೋಡಿಕೊಂಡಳು.

'ಮನೆ ಅಂದಮೇಲೆ ಒಗ್ಗರಣೆ ಇದ್ದೇ ಇರುತ್ತೆ, ಕೆಮ್ಮಿಕೊಂಡಿರಬೇಕು... ಎರಡು ಡೋಸ್ ಲಸಿಕೆ ಪಡೆದಿದ್ದಾರಾ?' ಕೇಳಿದ್ರು ಡಾಕ್ಟರ್.

'ಪಡೆದಿದ್ದಾರೆ. ಇನ್ನಾವುದೋ ಹೊಸ ವೈರಸ್ ಅಟ್ಯಾಕ್ ಆಗಿರಬೇಕು ಅನಿಸ್ತಿದೆ...' ಅನು ಕಣ್ಣೀರು ಒರೆಸಿಕೊಂಡಳು.

ಗಿರಿಯನ್ನು ಡಾಕ್ಟರ್ ಒಳಗೆ ಕರೆದುಕೊಂಡು ಹೋಗಿ, 'ಏನು ನಿಮ್ಮ ಸಮಸ್ಯೆ?' ಎಂದು ಕೇಳಿದರು.

'ಡಾಕ್ಟ್ರೇ, ಮೊದಲ ಅಲೆಯಲ್ಲಿ ಕೊರೊನಾ ಟ್ರೀಟ್‌ಮೆಂಟಿಗೆ ಸಾವಿರಾರು ರೂಪಾಯಿ ಖರ್ಚಾಯಿತು. ಅದರ ಸಾಲ ಇನ್ನೂ ತೀರಿಲ್ಲ. ಮತ್ತೆ ವೈರಸ್ ವಕ್ಕರಿಸಿಕೊಂಡರೆ ಗತಿಯೇನು ಎನ್ನುವ ಆತಂಕದಲ್ಲಿದ್ದೀನಿ' ಅಂದ.

ಗಿರಿ ಜೊತೆ ಹೊರಗೆ ಬಂದ ಡಾಕ್ಟರ್, 'ನಿಮ್ಮ ಗಂಡನಿಗೆ ವೈರಸ್ ವೈರಾಗ್ಯ ರೋಗವಿದೆ' ಎಂದರು.

'ಇದ್ಯಾವ ರೂಪಾಂತರಿ ರೋಗ ಸಾರ್?' ಅನುಗೆ ಭಯ.

'ಇದು ಹಳೆ ರೋಗದ ಹೊಸ ಲಕ್ಷಣ. ಕೊರೊನಾ ಮೂರನೇ ಅಲೆ ಮುಗಿಯುವವರೆಗೂ ವೈರಾಗ್ಯದ ವೈರಸ್ ಕಾಟ ಇರುತ್ತದೆ. ನೀವೆಲ್ಲರೂ ಕೋವಿಡ್ ಮಾರ್ಗಸೂಚಿಯನ್ನ ಕಟ್ಟುನಿಟ್ಟಾಗಿ ಪಾಲಿಸ್ತಾ ನಿಮ್ಮ ಪಾಡಿಗೆ ನೀವು ತೆಪ್ಪಗಿದ್ರೆ ವೈರಾಗ್ಯ ನಿವಾರಣೆಯಾಗಿ ಆರೋಗ್ಯ ಸುಧಾರಣೆಯಾಗುತ್ತದೆ...' ಎಂದು ಡಾಕ್ಟರ್ ಧೈರ್ಯ ಹೇಳಿದರು.

ಸಂಗತ

ಅಜ್ಞಾತ ಯೋಧರಿಗೂ ಸಿಗಲಿ ಕಾಳಜಿ

ಜನಹಿತ ಕಾಯುವ ಆಪದ್ಬಾಂಧವರಿಗೆಲ್ಲ ನಮ್ಮದೊಂದು ಸಲಾಮು ಸಲ್ಲಬೇಕಿದೆ

• ಯೋಗಾನಂದ

ಅದು ವಿಮಾನ ನಿಲ್ದಾಣದ ನಿತ್ಯ ನೋಟ. ಹೊರ ಊರಿನಿಂದ ಹಾರಿ ಬಂದ ವಿಮಾನ ಭೂಸ್ಪರ್ಶ ಮಾಡುತ್ತಲೇ ಅದರ ಷೋಡಶೋಪಚಾರಗಳಿಗೆ ವಾಹನಗಳು ಅತ್ತ ಧಾವಿಸಿರುತ್ತವೆ! ಪ್ರಯಾಣಿಕರಿಗೆ ಇಳಿಯಲು ಏಣಿ, ಅವರ ಲಗೇಜುಗಳ ವರ್ಗಾವಣೆ, ವಿಮಾನ ಶುದ್ಧೀಕರಣ ಮತ್ತು ಕ್ರಿಮಿನಾಶಕ ಸಿಂಚನ, ಇಂಧನ ಪೂರೈಕೆ... ಹೀಗೆ ಪರಿಚಾರಿಕೆ ಅದಕ್ಕೆ.

ನಾವು ವಾಸಿಸುವ ಮನೆಗೂ ಇದೇ ಬಗೆಯ ಸೇವೆ ದಿನನಿತ್ಯ ಸಲ್ಲುತ್ತಲೇ ಇರುತ್ತದೆ. ನಾವು ಗಮನಿಸಬೇಕಷ್ಟೆ. ಟಪಾಲು ತರುವವರಾದಿಯಾಗಿ ಅಜ್ಞಾತ ಯೋಧರನ್ನು, ಅವರ ಮೌಲಿಕ ಸೇವೆಯನ್ನು ಲಕ್ಷಿಸದಿರಬಾರದು. ಹಲವರ ಮನೆಯಲ್ಲಿ ಮನೆಗೆಲಸದ ಸಹಾಯಕರು ಗೈರಿರಲಿ, ತುಸು ಸಮಯ ತಡ ಬಂದರೂ ಮನೆ ಅಲ್ಲೋಲ ಕಲ್ಲೋಲ. ಭಾನುವಾರ ಎಂದಿಗಿಂತ ಅಷ್ಟು ಬೇಗನೆ ಬರಲು ಸೂಚನೆ ಬೇರೆ. ಅವರ ಮನೆಯಲ್ಲೂ ಕಿಂಚಿತ್ ಬಿಡುವು ಮೆರೆಯಲಿ, ಅಲ್ಲಿ ತಿಂಗಳಿಗೊಂದಾದರೂ ಭಾನುವಾರವಿರಲಿ ಎನ್ನುವ ಮನಸ್ಸಿದ್ದರೆ ಎಷ್ಟು ಚಲೋ!

ಬೆಳಿಗ್ಗೆ ಸುದ್ದಿ ಓದುತ್ತಾ ಕಾಫಿ ಹೀರುವುದೇ ಸ್ವರ್ಗ ಸರಿ. ಆದರೆ ಹಾಲು, ದಿನಪತ್ರಿಕೆ ವಿತರಣೆಯ ಹಿಂದೆ ಬದ್ಧತೆ, ಸಮಯಪ್ರಜ್ಞೆ ಮೈದಳೆದಿರುತ್ತದೆ. ಇದ ಮನಗಂಡರೆ ಸರಬರಾಜಿನಲ್ಲಿನ ಆಕಸ್ಮಿಕ ಲೋಪದೋಷಗಳು ನಗಣ್ಯವೆನ್ನಿಸುತ್ತವೆ. ಅವರಿಗದರಿಂದ ಕಾಸು, ಕಮಿಷನ್ ಮಾತಿರಲಿ. ಅತಿಪ್ರಿಯವಾದದ್ದು, ಅತ್ಯಗತ್ಯವಾದದ್ದನ್ನು ಚಳಿ, ಮಳೆ ಎನ್ನದೆ ಮನೆಗೆ ತಂದುಕೊಡುವ ಅವರ ಕಾಳಜಿಯೇ ಹಿರಿದಲ್ಲವೇ?

ಹಾಲು ನೀರಾಯ್ತು, ಪತ್ರಿಕೆ ಮಳೆಯಲ್ಲಿ ತೊಯ್ದಿತ್ತು ಎಂಬ ಮನೆಯೊಡೆಯರ ದೂರು ಇದ್ದದ್ದೇ. ಹಾಲಿಗೆ ಮಳೆ ನೀರೇ ಆಗಬೇಕೆ ಅಂತಲೋ ಅಥವಾ ಪತ್ರಿಕೆಗೆ ನೀರು ಅಗತ್ಯವಿಲ್ಲ ಎಂದೋ ಚಟಾಕಿ ಸಿಡಿಸಿ ಪರಿಣಾಮಕಾರಿಯಾಗಿ ಎಚ್ಚರಿಸಬಹುದಲ್ಲ! ಮನುಷ್ಯ ಎಷ್ಟೇ ಆದರೂ ಸಮಾಜಜೀವಿ. ಮುನಿಸಿಕೊಂಡರೆ ನಾಳೆ ಅದೇ ಮುಖ ಎದುರಿಸುವುದು ಕಠಿಣವೆಂಬ ಕಾರಣಕ್ಕಾದರೂ ಜಗಳಕ್ಕೆ ಕೆಂಪುಹಾಸು ಸಲ್ಲದು. ಬೀದಿಯ ಏರು, ತಗ್ಗುಗಳನ್ನು ಲೆಕ್ಕಿಸದೆ ತಳ್ಳುಗಾಡಿಯಲ್ಲಿ ಸೊಪ್ಪು ಸದೆ, ಹೂವು, ಹಣ್ಣು, ಕಾಯಿ, ತರಕಾರಿ ಪೇರಿಸಿಕೊಂಡಿರುತ್ತಾರೆ. ಅವರು ನಮಗಾಗಿ ಮನೆ ಬಾಗಿಲಿಗೆ ಬಂದು, ನಾವು ಮಾರುಕಟ್ಟೆಗೆ ಹೋಗುವುದನ್ನು ನಿವಾರಿಸುತ್ತಾರೆ ಎನ್ನುವ ಕೃತಜ್ಞತಾ ಮನೋಭಾವ ನಮ್ಮಲ್ಲಿರಲಿ.

ಬೀದಿ ಕಸ ಗುಡಿಸುವವರ, ತ್ಯಾಜ್ಯ ವಿಲೇವಾರಿ ಮಾಡುವವರ ಕಾಯಕ ಅದೆಷ್ಟು ಮಹತ್ವದ್ದೆಂದು ನಮಗೆ ವಿಶೇಷವಾಗಿ ಅರಿವಾಗಿದ್ದು ಕೋವಿಡ್ ವ್ಯಾಧಿ ವಿರುದ್ಧದ ಸಮರದಲ್ಲೇ. ವೈದ್ಯರು, ಶುಶ್ರೂಷಕರು, ಆರಕ್ಷಕರು, ಗೃಹ ರಕ್ಷಕರು, ನೀರು, ಒಳಚರಂಡಿ ಹಾಗೂ ವಿದ್ಯುತ್ತಿನ ಸಂಪರ್ಕ ಕಲ್ಪಿಸುವವರು, ಪೌರ ಕಾರ್ಮಿಕರು... ಇವರೆಲ್ಲರೂ ಜನಹಿತ ಕಾಪಾಡುವ ಯೋಧರೆಂಬ ಭಾವ ಜನಮಾನಸದಲ್ಲಿ ಅಚ್ಚಳಿಯದಂತೆ ಮೂಡಿತು. ಅಂದಹಾಗೆ ಹೂಕುಂಡಗಳಿಗೆ ಹೊಸ ಮಣ್ಣುತುಂಬಿಸುವ, ತೆಂಗಿನ ಕಾಯಿ ಕೀಳುವ, ತರಾವರಿ ಸಲಕರಣೆಗಳ ದುರಸ್ತಿಗೊಳಿಸುವ, ನೀರಿನ ಟ್ಯಾಂಕ್ ಶುಚಿಗೊಳಿಸುವ, ಮನೆ ಹೊಕ್ಕ ಹಾವು ಹಿಡಿಯುವವರ ಪಡೆಯೇ ಉಂಟೆನ್ನಿ. ಆ ಅಜ್ಞಾತ ಆಪದ್ಬಾಂಧವರಿಗೆಲ್ಲ ನಮ್ಮದೊಂದು ಸಲಾಮು ಸಲ್ಲಬೇಕಿದೆ. ಗೆಳೆಯರ ದಿನ, ಪ್ರೇಮಿಗಳ ದಿನ, ಪೋಷಕರ ದಿನ, ಮಹಿಳೆಯರ ದಿನ ಎನ್ನುವಂತೆ 'ಮನೆ ಪರಿಚಾರಕರ ದಿನ' ಆಚರಣೆ ಅರ್ಥಪೂರ್ಣ.



ಅರವತ್ತರ ದಶಕದ ಸುಮಾರಿನಲ್ಲಿ ಬಾವಿಗಳಿಲ್ಲದಿದ್ದ ಮನೆಗಳೇ ಅಪರೂಪ. 'ಕೊಡ, ತಪ್ಪಲೆ, ಬಕೀಟು, ಚೊಂಬು ತೆಗೀಬ್ಯಾಕ್ರ?' ಎಂದು ಕೂಗುತ್ತ ಬರುವವರಿದ್ದರು. ಹಗ್ಗದ ಜೊತೆಗೆ ಪಾತಾಳಗರಡಿ ಅವರ ಸಾಧನ. ಅದಕ್ಕೆ ಮೈತುಂಬ ಕೊಕ್ಕೆಗಳು! ಇಳಿಬಿಟ್ಟರೆ ಬಾವಿಯಲ್ಲಿ ಯಾವುದೇ ಮೂಲೆಯಲ್ಲಿ ಪಾತ್ರೆ, ಪಡಗ ಅವಿತಿದ್ದರೂ ಕೊಕ್ಕೆಗೆ ಲಗತ್ತಾಗುತ್ತಿತ್ತು. ಒಂದು ವೇಳೆ ತಂತ್ರ ಫಲಿಸದಿದ್ದರೆ ದಿಢೀರನೆ ಅವರೇ ಬಾವಿಗಿಳಿದು ತಡಕಾಡಿ ಅಂತೂ ಮುಳುಗಿದ್ದನ್ನು ಮೇಲೆ ತೇಲಿಸುತ್ತಿದ್ದರು, ಹಗ್ಗದಲ್ಲಿ ಬಂಧಿಸಿ 'ಇಗೊಳ್ಳಿ ಎಳೆದುಕೊಳ್ಳಿ' ಎನ್ನುತ್ತಿದ್ದರು. ಹಾಗೆ ಹೇಳಿದವರು ಬಾವಿಯ ತಳ ಜೋರಾಗಿ ಬಡಿದು ಮೇಲೆ ಬರುತ್ತಿದ್ದ ದೃಶ್ಯವೇ ಕಣ್ಣಿಗೆ ಹಬ್ಬ. ನ್ಯೂಟನ್ನನ ಮೂರನೇ ನಿಯಮ 'ಕ್ರಿಯೆ, ಪ್ರತಿಕ್ರಿಯೆ ಸಮ ಸಮ ಮತ್ತು ವಿರುದ್ಧ' ಪ್ರಾತ್ಯಕ್ಷಿಕೆ ಕಂಡು ನಾವು ಹುಡುಗರು ಬೆರಗಾಗುತ್ತಿದ್ದೆವು. ಮಾತ್ರವಲ್ಲ, ಆರ್ಕಿಮಿಡೀಸ್ ಕೂಡ ಅಲ್ಲಿರುತ್ತಿದ್ದ!

ಶ್ರೇಷ್ಠವಂತರ ಸಹಾಯಕರನ್ನು ಕೀಳರಿಮೆ ಕಾಡದು ಎನ್ನುವುದು ಜರ್ಮನ್ ಗಾದೆ. ಏಕೆಂದರೆ ಅವರು ತಮಗೆ ನೆರವಾಗುವವರನ್ನು ತಮ್ಮಂತೆಯೇ ಪರಿಭಾವಿಸುತ್ತಾರೆ. ತಮ್ಮ ಕಾರಿನ ಚಾಲಕರು ಸರ್ಕಾರಿ ಸೇವೆಯಿಂದ ನಿವೃತ್ತರಾದಾಗ ಉನ್ನತಾಧಿಕಾರಿಗಳು ಮಾದರಿಯಾದ ನಿದರ್ಶನಗಳಿವೆ. ಚಾಲಕರಾಗಿ ದುಡಿದವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ನಂತರ ಅಧಿಕಾರಿಯೇ ಕಾರಿನ ಸಾರಥಿಯಾಗಿ ಅವರ ಮನೆ ಮುಟ್ಟಿಸಿದ ಪ್ರಸಂಗಗಳು ಮನಮಿಡಿಯುತ್ತವೆ.

'ನೀವೇ ಅಟ್ಟ ಹತ್ತಿ ಸ್ವಚ್ಛಗೊಳಿಸುತ್ತಿದ್ದೀರಲ್ಲ ಸಾರ್, ಒಂದು ವೇಳೆ ಬಿದ್ದರೇನು ಗತಿ? ನಿಮ್ಮ ಆಳಿಗೆ ಹೇಳಬಹುದಿತ್ತಲ್ಲ' ಅಂತ ಆ ಅತಿ ಗಣ್ಯ ವ್ಯಕ್ತಿಯ ಮನೆಗೆ ಬಂದವರೊಬ್ಬರು ಪ್ರಶ್ನಿಸಿದ್ದರು. ಥಟ್ಟನೆ 'ನಿಜವೆ, ಆದರೆ ಆ ಆಳೇ ಅಟ್ಟದಿಂದ ಬೀಳಬಹುದಲ್ಲ?' ಎಂದು ಪ್ರತಿಕ್ರಿಯಿಸುವ ಧೀಮಂತಿಕೆ ಆದರಣೀಯ ರಾಜಾಜಿಯವರಿಗಲ್ಲದೆ ಮತ್ತ್ಯಾರಿಗೆ ಹೇಳಿ?

ವಾಚಕರ ವಾಣಿ

ಕಲಿಕೆ ಪರ ತೀರ್ಮಾನ ಕೈಗೊಳ್ಳಬೇಕಿದೆ

ಓಮೈಕ್ರಾನ್ ಹರಡುತ್ತಿರುವ ಕಾರಣದಿಂದ ಬೆಂಗಳೂರಿನ ಶಾಲೆಗಳನ್ನು ರಾಜ್ಯ ಸರ್ಕಾರ 15 ದಿನಗಳ ಕಾಲ ಮುಚ್ಚುವಂತೆ ಆದೇಶಿಸಿದೆ. ಎರಡು ವರ್ಷಗಳ ಲಾಕ್‌ಡೌನ್ ನಂತರ ಪ್ರಾರಂಭವಾದ ಶಾಲೆಗಳಿಗೆ ಹೋಗುತ್ತಿರುವ ವಿದ್ಯಾರ್ಥಿಗಳು ಈಗಷ್ಟೇ ಕಲಿಕೆಯ ಕಡೆಗೆ ಮುಖ ಮಾಡಿದ್ದಾರೆ. ಅದರಲ್ಲಿಯೂ ಸರ್ಕಾರಿ ಶಾಲೆಗಳ ಮಕ್ಕಳ ಆರೈಕೆಯ ಜೊತೆಗೆ ಕಲಿಕೆಗೂ ದೊಡ್ಡ ಹೊಡೆತ ಬೀಳಲಿದೆ.

ಸರ್ಕಾರಿ ವ್ಯವಸ್ಥೆಯಲ್ಲಿ ಆನ್‌ಲೈನ್ ಕಲಿಕೆಗೆ ಅವಕಾಶಗಳು ತುಂಬಾ ಕಡಿಮೆ. ಈ ಕಾರಣದಿಂದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ನಡುವೆ ಅಂತರ ಕಾಯ್ದುಕೊಂಡು ಒಂದು ಬೆಂಚ್‌ನಲ್ಲಿ ಇಬ್ಬರೇ ವಿದ್ಯಾರ್ಥಿಗಳು ಕೂರುವಂತೆ ನೋಡಿಕೊಂಡು ತರಗತಿಗಳನ್ನು ನಡೆಸುವುದು ಸೂಕ್ತ. ಸ್ಥಳಾವಕಾಶ ಕಡಿಮೆ ಇರುವ ಶಾಲೆಗಳಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಶಿಫ್ಟ್‌ಗಳಲ್ಲಿ ಶಾಲೆಗಳನ್ನು ನಡೆಸಬಹುದಾಗಿದೆ. ಸರ್ಕಾರವು ವಿದ್ಯಾರ್ಥಿಗಳ ಕಲಿಕೆಯ ಪರವಾಗಿ ತೀರ್ಮಾನಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ.

ಈ.ಬಸವರಾಜು, ಬೆಂಗಳೂರು

ಶಾಕ್ ಪ್ರೂಫ್ ಆಗಿಬಿಟ್ಟಿದ್ದೇವೆ...!

ಸ್ವಾಮಿ, ನಮಗೆ ಯಾವ ಬೆಲೆಯೇರಿಕೆಯ ಶಾಕೂ ಹತ್ತುವುದಿಲ್ಲ ಎಂದು ತಿಳಿಸಲು ವಿಷಾದಿಸುತ್ತೇವೆ. ಯಾಕೆಂದರೆ ಇಷ್ಟು ವರ್ಷಗಳ ಕಾಲ ಶಾಕ್ ಹೊಡೆಸಿಕೊಂಡು ಹೊಡೆಸಿಕೊಂಡು ನಾವೀಗ ಶಾಕ್ ಪ್ರೂಫ್ ಆಗಿಬಿಟ್ಟಿದ್ದೇವೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಕಳವಳ ತರುತ್ತಿದೆ ಉತ್ಸಾಹ!

ಅಧಿಕಾರಕ್ಕಾಗಿ ಪಕ್ಷವನ್ನೇ ತ್ಯಜಿಸಲು ಹಿಂಜರಿಯದ, ರಾಜ್ಯದಲ್ಲಿ ನೆರೆ ಬಂದಾಗ ಹೊರ ರಾಜ್ಯಗಳ ರೆಸಾರ್ಟುಗಳಲ್ಲಿ ಪ್ರತ್ಯಕ್ಷರಾದ, ವಿಧಾನಸಭೆಯ ಅಧಿವೇಶನದ ವೇಳೆ ಚರ್ಚೆಯಲ್ಲಿ ಪಾಲ್ಗೊಳ್ಳುವ ಬದಲು ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದ, ಚರ್ಚೆಯಲ್ಲಿ ಪಾಲ್ಗೊಂಡಾಗ ಅಸಭ್ಯ ಮಾತುಗಳಿಂದ ರಾಷ್ಟ್ರದೆಲ್ಲೆಡೆ ಖಂಡನೆಗೊಳಗಾದ, ಅಧಿವೇಶನ ನಡೆಯದ ವೇಳೆ 'ಸಿ.ಡಿ'ಗಳನ್ನು ಸೃಷ್ಟಿಸಿ, ಮಾಧ್ಯಮಗಳು ಕೋವಿಡ್ ಸೇರಿದಂತೆ ರಾಜ್ಯದ ಎಲ್ಲ ಸಮಸ್ಯೆಗಳನ್ನು ಮರೆಯುವಂತೆ ಮಾಡಿದ ಕರ್ನಾಟಕದ 'ಗಂಡು' ರಾಜಕಾರಣಿಗಳು ರಾಜ್ಯದ ಮಾನವನ್ನು ಇನ್ನೂ ಕೆಳಕ್ಕೆ ತಳ್ಳಲು ಸಾಧ್ಯವಿಲ್ಲ ಎಂದುಕೊಳ್ಳುತ್ತಿರುವಾಗಲೇ ಈ ರಾಜಕಾರಣಿಗಳು ತಮ್ಮ 'ಗಂಡಸುತನ'ದ ಬಗ್ಗೆ ಇದೆಲ್ಲದರ ನಡುವೆಯೂ ಹೆಮ್ಮೆಯುಳ್ಳವರಾಗಿ ಮತ್ತು ಅದನ್ನು ಪ್ರದರ್ಶಿಸಲು ಇನ್ನೂ ಉತ್ಸುಕರಾಗಿರುವುದನ್ನು ನೋಡಿದಾಗ, ಕರ್ನಾಟಕಕ್ಕೆ ಒದಗಲಿರುವ ಪರಿಸ್ಥಿತಿಯನ್ನು ನೆನೆದು ಕಳವಳವಾಗುತ್ತಿದೆ.

ಸುನೀಲ ನಾಯಕ, ಬೆಂಗಳೂರು

ಪ್ರಸಕ್ತ ವರ್ಣಮಾಲೆಗೇಕೆ ತಕರಾರು?

ಕೆಲವು ವರ್ಷಗಳ ಹಿಂದೆ 'ಋ' ಅಕ್ಷರವೇ ಬೇಡ ಎಂಬ ಒಂದು ವಾದ ಎದ್ದಿತ್ತು. ಆಗ ಕೆಲವರು, ರುಷಿ, ಕ್ರುತಕ, ಕ್ರುತ್ಯ, ತ್ರುಪ್ತಿ, ಕ್ರುಪಣ... ಹೀಗೆಲ್ಲ ಬರೆದು ತೃಪ್ತಿಪಟ್ಟುಕೊಂಡರು. ಅದೃಷ್ಟವಶಾತ್ ಅದು ಬಹಳ ದಿನ ಮುನ್ನಡೆಯಲಿಲ್ಲ. 'ಮಹಾಪ್ರಾಣ'ಗಳ ಅಗತ್ಯ ಇಲ್ಲ ಎಂಬ ವಾದ ಕೂಡ ಆಗೀಗ ಚರ್ಚೆಯಾಗುತ್ತಿದೆ. 'ವಧೆ' ಯಾಕೆ 'ವದೆ' ಸಾಕಲ್ಲವೇ ಎನ್ನುತ್ತಾರೆ. ಮುಂದೊಮ್ಮೆ ಇದು 'ಒದೆ' ಆಗುವುದಿಲ್ಲ ಎಂದು ಹೇಳಲಾದೀತೆ? ಎಲ್ಲರೂ ತಮತಮಗೆ ತಿಳಿದಂತೆ ಬದಲಾಯಿಸಲು ತೊಡಗಿದರೆ, ವರ್ಣಮಾಲೆ ಎಲ್ಲಿದ್ದೀತು?! ಈಗೀಗ ಇಡೀ ತಂತ್ರಜ್ಞಾನವೇ ಇದಕ್ಕೆ ಹೊಂದಿಕೊಂಡಿರುವಾಗ ಕೆಲವರದೇನು ತಕರಾರು? ವರ್ಣಮಾಲೆ ಅದು ಇದ್ದಂತೆಯೇ ಇರಲಿ ಬಿಡಿ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಮೊಟ್ಟೆ ನೀಡಿಕೆಗೆ ವಿರೋಧ ಸಲ್ಲ

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ನೀಡುವುದನ್ನು ಆಕ್ಷೇಪಿಸಿರುವ ಶಾಂತಿನಾಥ ಕೆ. ಅವರ ವಾದವನ್ನು (ವಾ.ವಾ., ಜ. 7) ಒಪ್ಪಲಾಗದು. ಸಾಮಾನ್ಯವಾಗಿ ಆಹಾರ ಪದ್ಧತಿಯು ಅವರವರ ಮನೆಯ ಆಚಾರ ವಿಚಾರ, ಧಾರ್ಮಿಕ, ವೈಚಾರಿಕ ಸಂಸ್ಕೃತಿಗಳಿಗೆ ತಕ್ಕಂತೆ ಮಕ್ಕಳ ಮನಸ್ಸಿನಲ್ಲಿ ಮೈಗೂಡಿರುತ್ತದೆ. ಇದಕ್ಕೆ ಒಂದು ನಿದರ್ಶನವೆಂದರೆ, ನಾನು ಆರರಿಂದ ಹತ್ತನೆಯ ತರಗತಿಯವರೆಗೂ ಜವಾಹರ್ ನವೋದಯ ವಿದ್ಯಾಲಯದಲ್ಲಿ ಅಭ್ಯಸಿಸಿದ್ದು. ಅಲ್ಲಿ ಊಟದ ಸಮಯದಲ್ಲಿ ವಾರಕ್ಕೆ ಎರಡು ಬಾರಿ ಮೊಟ್ಟೆ ನೀಡುತ್ತಿದ್ದರು. ಆದರೆ ನನ್ನ ಕೆಲವು ಸಸ್ಯಾಹಾರಿ ಸ್ನೇಹಿತರು, ಸಹಪಾಠಿಗಳು ಮಾತ್ರ ಶಿಕ್ಷಕರು, ಸ್ನೇಹಿತರು ಹೇಳಿದರೆಂದು ಅಥವಾ ನಾವು ಮೊಟ್ಟೆ ತಿನ್ನುವುದನ್ನು ನೋಡಿ ಪ್ರಚೋದನೆಗೊಂಡು ತಿನ್ನುವ ನಿರ್ಧಾರ ಮಾಡಲಿಲ್ಲ. ಅ ಒಡನಾಡಿಗಳು ಇಂದಿಗೂ ಸಸ್ಯಾಹಾರಿಗಳಾಗಿಯೇ ಉಳಿದಿದ್ದಾರೆ.

ಸರ್ವಸಮ್ಮತ ಆಹಾರಕ್ಕೆ ನಮ್ಮ ಒಪ್ಪಿಗೆ ಇದೆ. ಅದರೆ ಮೊಟ್ಟೆ ನೀಡುವುದನ್ನು ನಿಲ್ಲಿಸಬೇಕು ಎಂಬ ತರ್ಕವಿಲ್ಲದ ವಾದಕ್ಕೆ ನಮ್ಮ ಆಕ್ಷೇಪವಿದೆ. ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನದಂತೆ, ದೇಶದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮೊಟ್ಟೆ ನೀಡುವುದು ಸಹಕಾರಿಯಾಗಲಿದೆ.

ಪ್ರದೀಪ್ ಕುಮಾರ್ ಡಿ., ಹಿರಿಯೂರು

ನೆರವಿಗೆ ಮನವಿ

ಹದಿಮೂರು ವರ್ಷದ ನನ್ನ ಮಗ ರಾಹುಲ್ ಅಂಗವಿಕಲನಾಗಿದ್ದು, ಅವನ ಕಾಲಿಗೆ ಶಸ್ತ್ರಚಿಕಿತ್ಸೆ ನಡೆಸಬೇಕಾದ ಅಗತ್ಯವಿದೆ. ಅದಕ್ಕಾಗಿ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ. ಈಗಾಗಲೇ ಆತನ ಚಿಕಿತ್ಸೆಗಾಗಿ ಬಹಳಷ್ಟು ಹಣ ಖರ್ಚಾಗಿದೆ. ಅಂಗಡಿಯೊಂದರಲ್ಲಿ ಕೆಲಸ ಮಾಡುವ ನನಗೆ ಈಗ ಮತ್ತೆ ಅವನ ಶಸ್ತ್ರಚಿಕಿತ್ಸೆಗಾಗಿ ಅಷ್ಟೊಂದು ಹಣವನ್ನು ಭರಿಸುವ ಶಕ್ತಿ ಇಲ್ಲ. ದಯಮಾಡಿ ದಾನಿಗಳು ನೆರವಾಗಿ.

ರಾಹುಲ್‌ನ ತಾಯಿ ರಾಧಾದೇವಿ ಅವರ ಬ್ಯಾಂಕ್ ಖಾತೆ ವಿವರ: ಟಿಎಂಬಿ ಬ್ಯಾಂಕ್, ಖಾತೆ ಸಂಖ್ಯೆ: 277100050301604, ಹೆಬ್ಬಗೋಡಿ ಶಾಖೆ, ಬೆಂಗಳೂರು, IFSC: TMBL0000277, ಮೊಬೈಲ್ ಸಂಖ್ಯೆ– 9916270073.

ದಲ್‌ಪತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇವಾಲಯಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವುದು ಸರಿಯಾದ ಕ್ರಮವೇ?

ಹಣಕಾಸು ಅಕ್ರಮಕ್ಕೆ ಅವಕಾಶ ಕೊಡುವ ಹುನ್ನಾರ



● ಬಂಜಗೆರೆ ಜಯಪ್ರಕಾಶ

ದೇವಸ್ಥಾನಗಳು ಸಂಪೂರ್ಣ ಸ್ವತಂತ್ರ ಎಂದು ಕಾನೂನು ಮಾಡಿದರೆ ಅಲ್ಲಿ ತಲೆದೋರುವ ಸ್ವಹಿತಾಸಕ್ತಿಯ ಅಕ್ರಮಗಳಿಗೆ ಕಡಿವಾಣ ಎಲ್ಲಿರುತ್ತದೆ. ದೇವಸ್ಥಾನಗಳ ಸಿಬ್ಬಂದಿ ಈಗ ಸರ್ಕಾರಿ ಇಲಾಖೆಯ ನಿಯಮಾನುಸಾರ ನೇಮಕಗೊಳ್ಳುತ್ತಿದ್ದು ಅದರಲ್ಲಿ ಅರ್ಚಕರನ್ನು ಹೊರತುಪಡಿಸಿ ಉಳಿದ ಸಿಬ್ಬಂದಿ ನೇಮಕಕ್ಕೆ ನೀತಿ ನಿಬಂಧನೆಗಳಿವೆ. ದೇವಸ್ಥಾನಗಳನ್ನು ಸ್ವತಂತ್ರಗೊಳಿಸುವುದೆಂದರೆ ಅವುಗಳ ನೇಮಕಾತಿಯ ನೀತಿ ನಿಬಂಧನೆಗಳು ಇಲ್ಲವಾಗುತ್ತವೆ. ಇದರಿಂದ ಕೆಲವೇ ಜಾತಿಗಳ ಜನ ದೇವಸ್ಥಾನದ ಸಿಬ್ಬಂದಿಯಾಗಿ ನೇಮಕಗೊಳ್ಳುವುದಕ್ಕೆ ಅವಕಾಶ ನಿರ್ಮಾಣವಾಗುತ್ತದೆ

ದೇವಸ್ಥಾನಗಳನ್ನು ಸ್ವತಂತ್ರಗೊಳಿಸುವ ಪ್ರಸ್ತಾವವನ್ನು ಸರ್ಕಾರ ಮುಂದಿಟ್ಟಿದೆ. ಆಯಾ ದೇವಸ್ಥಾನಗಳಿಂದ ಬರುವ ಆದಾಯದಿಂದ ಆಯಾ ದೇವಸ್ಥಾನಗಳನ್ನೇ ಅಭಿವೃದ್ಧಿಪಡಿಸಬೇಕು ಎಂಬ ಪ್ರಸ್ತಾವವು ಇದರ ಭಾಗವಾಗಿದೆ. ಹಿಂದೂಯೇತರ ಪ್ರಾರ್ಥನಾ ಮಂದಿರಗಳಿಗೆ ಇರದ ಕಟ್ಟುಪಾಡು ಹಿಂದೂ ದೇವಸ್ಥಾನಗಳಿಗೆ ಮಾತ್ರ ಏಕೆ? ಹಿಂದೂ ದೇವಾಲಯಗಳ ಆದಾಯದಿಂದ ಹಿಂದೂಯೇತರ ಪ್ರಾರ್ಥನಾ ಮಂದಿರಗಳ ನಿರ್ವಹಣೆಗೆ ಅನುದಾನ ಒದಗಿಸಬಾರದು ಎಂಬ ಆಗ್ರಹಗಳನ್ನು ಬಲಪಂಥೀಯ ಸಂಘಟನೆಗಳು ಮುಂದಿಟ್ಟಿದ್ದವು. ಈ ಸಂಘಟನೆಗಳ ಬೇಡಿಕೆಯನ್ನು ಈಡೇರಿಸುವುದಕ್ಕೆ ಎಂಬಂತೆ ಆಡಳಿತಾರೂಢ ಬಿಜೆಪಿಯು ದೇವಸ್ಥಾನಗಳನ್ನು ಸ್ವತಂತ್ರಗೊಳಿಸಲು ಮುಂದಾಗಿದೆ.

ದೇವಸ್ಥಾನಗಳ ಸ್ವಾತಂತ್ರ್ಯಕ್ಕೆ ಈವರೆಗೆ ಅಡ್ಡಿ ಆತಂಕಗಳಿದ್ದವು ಎಂಬ ರೀತಿಯಲ್ಲಿ ಪ್ರಚಾರ ಮಾಡಲಾಗುತ್ತಿದ್ದು ಅದು ವಾಸ್ತವವಲ್ಲ. ದೇವಸ್ಥಾನಗಳಲ್ಲಿ ನಡೆಯುವ ಪೂಜಾ ವಿಧಿಗಳ ಮೇಲೆ ಸರ್ಕಾರದ ನಿಯಂತ್ರಣವೇನೂ ಇಲ್ಲ. ಪಾರಂಪರಿಕವಾಗಿ ಆಯಾ ದೇವಸ್ಥಾನಗಳು ಈ ಹಿಂದಿನಿಂದ ನಡೆಸಿಕೊಂಡು ಬಂದ ಪೂಜಾಪದ್ಧತಿಗಳನ್ನು, ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗಲು ಅಲ್ಲಿನ ಅರ್ಚಕರಿಗೆ ಸಂಪೂರ್ಣ ಅವಕಾಶವಿದೆ. ದೇವಸ್ಥಾನದ ಧರ್ಮದರ್ಶಿ ಮಂಡಳಿಯಾಗಲಿ, ಆಡಳಿತ ಮಂಡಳಿಯಾಗಲಿ ಈವರೆಗಿನ ಸಂಪ್ರದಾಯಕ್ಕೆ ವ್ಯತಿರಿಕ್ತವಾಗುವಂತೆ ಪೂಜಾಪದ್ಧತಿಗಳನ್ನು, ಉತ್ಸವ, ಜಾತ್ರೆ ಮುಂತಾದವುಗಳನ್ನು ಬದಲಿಸುವ ಅಧಿಕಾರವನ್ನು ಹೊಂದಿಲ್ಲ.

ಶೈವ, ವೈಷ್ಣವ, ಶಾಕ್ತ್ಯ ಇತ್ಯಾದಿ ಪಂಥದ ದೇವಸ್ಥಾನಗಳು ತಮ್ಮ ತಮ್ಮ ಆಗಮಶಾಸ್ತ್ರಗಳ ಅನುಸಾರ ಅರ್ಚನೆ, ಉತ್ಸವಗಳನ್ನು ನಡೆಸುತ್ತಿವೆ. ದೇವಾಲಯಗಳ ಸ್ವರೂಪ, ವಿಗ್ರಹಗಳ ಲಕ್ಷಣಗಳು ಇತ್ಯಾದಿಗಳನ್ನು ನಿರ್ಧರಿಸುವುದು ಶಾಸ್ತ್ರಾಚಾರ ಗ್ರಂಥಗಳು ಮತ್ತು ಅರ್ಚಕ ಮಂಡಳಿಯೇ ಹೊರತು ಅದನ್ನು ಸರ್ಕಾರದ ಯಾವ ಇಲಾಖೆಯೂ ನಿರ್ದೇಶಿಸುವುದಿಲ್ಲ. ಕೆಲವು ದೇವಾಲಯಗಳಲ್ಲಿ ಆಚರಣೆಯಲ್ಲಿದ್ದ ಪ್ರಾಣಿಬಲಿ ಮುಂತಾದ ಹಿಂಸಾಚಾರ ಸಂಬಂಧಿ ಆಚರಣೆಗಳನ್ನು ಒಟ್ಟಾರೆಯಾಗಿ ನಿಷೇಧಿಸಲಾಗಿದೆ. ಮಿಕ್ಕಂತೆ ದೇವಸ್ಥಾನಗಳ ಪಾರಂಪರಿಕ ಆಚರಣೆಗಳಿಗೆ ಯಾವ ಅಡ್ಡಿಯನ್ನೂ ಮಾಡಲಾಗುತ್ತಿಲ್ಲ.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಇಲಾಖೆಯಡಿ ಸುಮಾರು ಮೂವತ್ತೈದು ಸಾವಿರ ದೇವಸ್ಥಾನ ಹಾಗೂ ಧಾರ್ಮಿಕ ಸಂಸ್ಥೆಗಳಿವೆ. ಇವುಗಳನ್ನು ಅವುಗಳ ಆದಾಯ ಪ್ರಮಾಣದ ಆಧಾರದಲ್ಲಿ ಎ, ಬಿ ಮತ್ತು ಸಿ ಕೇಂದ್ರಗಳೆಂದು ವರ್ಗೀಕರಿಸಲಾಗಿದೆ. ವಾರ್ಷಿಕವಾಗಿ ₹25 ಲಕ್ಷಕ್ಕೂ ಹೆಚ್ಚು ಆದಾಯವಿರುವ ದೇವಾಲಯಗಳು 'ಎ' ವಿಭಾಗದಲ್ಲೂ, ವಾರ್ಷಿಕವಾಗಿ ಹತ್ತು ಲಕ್ಷ ರೂಪಾಯಿ ಮೀರಿದ ಆದಾಯವುಳ್ಳವುಗಳು 'ಬಿ' ವಿಭಾಗದಲ್ಲೂ ಇದ್ದು, ಮೊದಲನೆಯ ವಿಭಾಗದವುಗಳು ತಮ್ಮ ಆದಾಯದ ಶೇ 10ರಷ್ಟನ್ನು, ಎರಡನೆಯ ವಿಭಾಗದವುಗಳು ಶೇ 5ರಷ್ಟನ್ನು ದೇವಾಲಯ ಮತ್ತು ಧಾರ್ಮಿಕ ದತ್ತಿ ಇಲಾಖೆಗೆ ಸಲ್ಲಿಸುತ್ತವೆ. ಸಿ' ವಿಭಾಗದ ದೇವಸ್ಥಾನಗಳಿಗೆ ವಾರ್ಷಿಕವಾಗಿ ₹12,000 ಅನುದಾನವನ್ನು ಅರ್ಚನೆಯ ನಿರ್ವಹಣೆಗಾಗಿ ಇಲಾಖೆಯೇ ಒದಗಿಸುತ್ತದೆ.



ಪ್ರಸ್ತುತ ಇಲಾಖೆಯ ಮುಖ್ಯ ಕಾರ್ಯಗಳು ದೇವಸ್ಥಾನಗಳ ನಿರ್ಮಾಣ, ದುರಸ್ತಿ ಹಾಗೂ ಪುನರುಜ್ಜೀವನ ಎಂಬವುಗಳಾಗಿವೆ. ದೇವಸ್ಥಾನಗಳ ವಾರ್ಷಿಕ ಆಯವ್ಯಯ ಪ್ರಸ್ತಾವಕ್ಕೆ ಅನುಮೋದನೆ ನೀಡುವುದು, ದೇವಸ್ಥಾನ ನಿರ್ವಹಣಾ ಮಂಡಳಿ ಅಥವಾ ಅಭಿವೃದ್ಧಿ ಮಂಡಳಿಗಳನ್ನು ನೇಮಿಸುವುದು ಕೂಡ ಇದರ ವ್ಯಾಪ್ತಿಗೆ ಬರುತ್ತದೆ. ದೇವಸ್ಥಾನದ ನಿರ್ವಹಣಾ ಮಂಡಳಿಯ ಸದಸ್ಯರಾಗಿ ನೇಮಕವಾಗುವವರು ಭಕ್ತಾದಿಗಳೇ ಆಗಬೇಕಿದ್ದು ಇದರಲ್ಲಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾದ ವ್ಯಕ್ತಿ ಇರಬಾರದೆಂಬ ನಿಯಮವಿದೆ. ದೇವಸ್ಥಾನಗಳಲ್ಲಿ ನೇಮಕಗೊಂಡಿರುವ ಅರ್ಚಕರು ಮತ್ತು ಇತರೆ ಸಿಬ್ಬಂದಿಗೆ ವೇತನವನ್ನು ಇಲಾಖೆಯು ನಿಯಮಾನುಸಾರ ಪಾವತಿಸುತ್ತದೆ. ಆಗಮಶಾಲೆಗಳನ್ನು ಆರಂಭಿಸಲು ಅನುಮತಿ ನೀಡುತ್ತದೆ. ಅರ್ಚಕರಿಗೆ ತರಬೇತಿ, ಅವರ ಯೋಗಕ್ಷೇಮ ಚರ್ಚೆಗಾಗಿ ಸಮ್ಮೇಳನ, ಸಮಾವೇಶಗಳನ್ನು ಇಲಾಖೆ ನಡೆಸುತ್ತದೆ. ಸಿಬ್ಬಂದಿಗೆ ವಿಮಾ ಸೌಲಭ್ಯ ದೊರೆಯುವಂತೆ ಮಾಡುವುದೂ ಕೂಡ ಇದರಲ್ಲಿ ಸೇರಿದೆ.

ಹೀಗಿರುವ ಪದ್ಧತಿಯಲ್ಲಿ ಸರ್ಕಾರ ಅಥವಾ ಇಲಾಖೆ ದೇವಸ್ಥಾನಗಳ ವಿಷಯಗಳಲ್ಲಿ ವಿನಾಕಾರಣ ಮೂಗು ತೂರಿಸುವ ಪ್ರಶ್ನೆಯೇ ಇಲ್ಲ. ಉತ್ಸವ, ಜಾತ್ರೆ ಸಂದರ್ಭಗಳಲ್ಲಿ ಭಕ್ತಾದಿಗಳ ಅನುಕೂಲಕ್ಕೆ ಬೇಕಾದ ಸಾರಿಗೆ, ಕುಡಿಯುವ ನೀರು, ವೈದ್ಯಕೀಯ ನೆರವು, ಶಾಂತಿ ಸುವ್ಯವಸ್ಥೆ ಪಾಲನೆಗೆ ಬಂದೋಬಸ್ತ್ ಮುಂತಾದ ಹೊಣೆಗಾರಿಕೆಗಳನ್ನು ಸರ್ಕಾರದ ವಿವಿಧ ಇಲಾಖೆಗಳು ನಿರ್ವಹಿಸುತ್ತವೆ.

ದೇವಾಲಯ ಮತ್ತು ಧಾರ್ಮಿಕ ಕೇಂದ್ರಗಳು ಸರ್ಕಾರದ ಬೊಕ್ಕಸಕ್ಕೆ ಆದಾಯ ಒದಗಿಸುವ ಮೂಲಗಳಾಗಿದ್ದಾಗಲೂ ಆ ಆದಾಯವನ್ನು ಸರ್ಕಾರವು ತನ್ನ ಆಯವ್ಯಯದಲ್ಲಿ ಬೇರೆ ಬೇರೆ ಇಲಾಖೆಗಳ ಖರ್ಚಿಗೆ ಒದಗಿಸುವಂತಿಲ್ಲ ಎಂಬ ನಿಯಮವಿದ್ದು ಆದಾಯದ ಹೆಚ್ಚುವರಿಯು ರಕ್ಷಿತಗೊಂಡಿರುತ್ತದೆ. ಈ ರೀತಿಯಾಗಿ ಹೆಚ್ಚುವರಿಯಾದ ಆದಾಯದಲ್ಲಿ ₹33 ಕೋಟಿಯನ್ನು 2014-15ರ ಸಾಲಿನವರೆಗೆ ನಿಶ್ಚಿತ ಠೇವಣಿಗಳಲ್ಲಿ ಇರಿಸಲಾಗಿತ್ತು. ಹೀಗಿರುವಾಗ ದೇವಸ್ಥಾನಗಳನ್ನು ಸ್ವತಂತ್ರಗೊಳಿಸಲಾಗುವುದು ಎನ್ನುವ ಸರ್ಕಾರದ ಪ್ರಸ್ತಾಪಕ್ಕೆ ಅರ್ಥವೇನು?

ಹಿಂದೂ ದೇವಾಲಯಗಳು ಹಾಗೂ ಧಾರ್ಮಿಕ ಕೇಂದ್ರಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸುವುದು ಎಂದರೆ ತಮ್ಮ ಆದಾಯ ಮತ್ತು ವೆಚ್ಚಗಳ ಬಗ್ಗೆ ಇವು ವಾರ್ಷಿಕವಾಗಿ ನಡೆಸಬೇಕಾಗಿರುವ ಲೆಕ್ಕಪತ್ರ ತಪಾಸಣೆಯಿಂದ ಮುಕ್ತಗೊಳ್ಳುವುದು ಎಂದರ್ಥ. ಭಕ್ತಾದಿಗಳೇ ಸ್ವತಂತ್ರವಾಗಿ ದೇವಸ್ಥಾನವನ್ನು ನಿರ್ವಹಿಸುವುದು ಎಂದರೆ ಸಾರ್ವಜನಿಕ ಆಸ್ತಿಗಳಾದ ದೇವಾಲಯಗಳು ಖಾಸಗಿ ವ್ಯಕ್ತಿಗಳ ಮರ್ಜಿಗಳ ನಿಯಂತ್ರಣಕ್ಕೊಳಪಡುವುದು ಎಂದರ್ಥ. ದೇವಸ್ಥಾನಕ್ಕೆ ಸೇರಿದ ಜಮೀನು ಹಾಗೂ ಇತರೆ ಆಸ್ತಿಪಾಸ್ತಿಗಳ ವಿಲೇವಾರಿ ಅಧಿಕಾರವನ್ನು ಖಾಸಗಿ ವ್ಯಕ್ತಿಗಳ ವಶಕ್ಕೆ ಕೊಡುವುದು ಎಂದರ್ಥ.

ಕರ್ನಾಟಕದ ದೇವಸ್ಥಾನಗಳಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವು ಅತ್ಯಧಿಕ ಆದಾಯ ಗಳಿಸುತ್ತಿರುವವುಗಳಲ್ಲಿ ಮುಂಚೂಣಿಯಲ್ಲಿವೆ. ಇದರಲ್ಲಿನ ಹಲವಾರು ದೇವಸ್ಥಾನಗಳು ಕಳೆದ ಮೂರು ವರ್ಷಗಳಿಂದ ಲೆಕ್ಕಪತ್ರ ತಪಾಸಣೆ ಮಾಡಿಸಲಿಲ್ಲ, ಅನುದಾನ ಹಾಗೂ ಆದಾಯ ಯಾವ ಯಾವ ಬಾಬುಗಳಿಗೆ ಹೇಗೆ ಖರ್ಚಾಗಿದೆ ಎಂಬ ಬಗ್ಗೆ ಪಾರದರ್ಶಕತೆಯನ್ನು ಕಾಪಾಡಿಲ್ಲ ಎಂದು ಲೆಕ್ಕ ತಪಾಸಣಾ ಇಲಾಖೆಯ ವರದಿಗಳು ಆಕ್ಷೇಪಗಳನ್ನು ಎತ್ತಿವೆ. ಸರ್ಕಾರಿ ಕಾಯ್ದೆಯ ನಿಬಂಧನೆಗಳಿದ್ದಾಗಲೇ ಈ ಬಗೆಯ ಲೋಪಗಳು ಕಂಡುಬರುತ್ತಿವೆ.

ದೇವಸ್ಥಾನಗಳು ಸಂಪೂರ್ಣ ಸ್ವತಂತ್ರ ಎಂದು ಕಾನೂನು ಮಾಡಿದರೆ ಅಲ್ಲಿ ತಲೆದೋರುವ ಸ್ವಹಿತಾಸಕ್ತಿಯ ಅಕ್ರಮಗಳಿಗೆ ಕಡಿವಾಣ ಎಲ್ಲಿರುತ್ತದೆ. ದೇವಸ್ಥಾನಗಳ ಸಿಬ್ಬಂದಿ ಈಗ ಸರ್ಕಾರಿ ಇಲಾಖೆಯ ನಿಯಮಾನುಸಾರ ನೇಮಕಗೊಳ್ಳುತ್ತಿದ್ದು ಅದರಲ್ಲಿ ಅರ್ಚಕರನ್ನು ಹೊರತುಪಡಿಸಿ ಉಳಿದ ಸಿಬ್ಬಂದಿ ನೇಮಕಕ್ಕೆ ನೀತಿ ನಿಬಂಧನೆಗಳಿವೆ. ದೇವಸ್ಥಾನಗಳನ್ನು ಸ್ವತಂತ್ರಗೊಳಿಸುವುದೆಂದರೆ ಅವುಗಳ ನೇಮಕಾತಿಯ ನೀತಿ ನಿಬಂಧನೆಗಳು ಇಲ್ಲವಾಗುತ್ತವೆ. ಇದರಿಂದ ಕೆಲವೇ ಜಾತಿಗಳ ಜನ ದೇವಸ್ಥಾನದ ಸಿಬ್ಬಂದಿಯಾಗಿ ನೇಮಕಗೊಳ್ಳುವುದಕ್ಕೆ ಅವಕಾಶ ನಿರ್ಮಾಣವಾಗುತ್ತದೆ. ದೇವಸ್ಥಾನವೊಂದು ಸ್ವತಂತ್ರ ಎಂದಾದಾಗ ಅದು ಖಾಸಗಿ ಗುಂಪಿನ ಆಸ್ತಿ ಎಂಬಂತಾಗಿ, ಸಂಪ್ರದಾಯ-ಕಟ್ಟುಪಾಡಿನ ಹೆಸರಿನಲ್ಲಿ ದೇವಸ್ಥಾನ ಪ್ರವೇಶಕ್ಕೆ ಸಾರ್ವಜನಿಕರಿಗಿರುವ ಮುಕ್ತ ಅವಕಾಶ ನಿರ್ಬಂಧಕ್ಕೊಳಗಾಗಬಹುದು. ಈಗಾಗಲೇ ದೇವಸ್ಥಾನಗಳ ವ್ಯವಹಾರಗಳು ವ್ಯಾಪಾರೀಕರಣಗೊಂಡಿವೆ. ಖಾಸಗಿ ಮಂಡಳಿಯ ನಿಯಂತ್ರಣಕ್ಕೊಳಪಟ್ಟಲ್ಲಿ ದೇವಾಲಯಕ್ಕೆ ಸೇರಿದ ಜಮೀನು, ಆವರಣ ಮತ್ತಷ್ಟು ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗತೊಡಗುತ್ತದೆ. ಇದಕ್ಕೆ ಅಡತಡೆಗಳಿರುವುದಿಲ್ಲ.

ಹಿಂದೂ ದೇವಾಲಯಗಳ ಆದಾಯವನ್ನು ಹಿಂದೂಯೇತರ ಧಾರ್ಮಿಕ ಸ್ಥಳಗಳ ನಿರ್ವಹಣೆಗೆ ನೀಡಬಾರದೆಂಬ ನಿಯಮ 1997ರಲ್ಲಿ ತಂದಿರುವ ಕಾನೂನಿನಲ್ಲಿದೆ. ಹೀಗಿರುವಾಗ ಹಿಂದೂಯೇತರ ಧಾರ್ಮಿಕ ಸ್ಥಳಗಳಿಗೆ ಹಿಂದೂ ದೇವಾಲಯಗಳ ಆದಾಯ ಒದಗಿಸಲಾಗುತ್ತಿದೆ ಎಂಬ ವಾದವೇ ಆಧಾರರಹಿತ. 2020-21ರ ಆಯವ್ಯಯದಲ್ಲಿ 26,666 ದೇವಾಲಯಗಳು ಮತ್ತು ಧಾರ್ಮಿಕ ಕೇಂದ್ರಗಳಿಗೆ ₹133.62 ಕೋಟಿ ಅನುದಾನ ಮೀಸಲು ಇಡಲಾಗಿತ್ತು. ಇದರಲ್ಲಿ ಶೇ 3ರಷ್ಟಿರುವ ಹಿಂದೂಯೇತರ 764 ಧಾರ್ಮಿಕ ಕೇಂದ್ರಗಳಿಗೆ ಕೊಟ್ಟಿದ್ದು ₹3.67 ಕೋಟಿ ಮಾತ್ರ. ಈ ಹಿಂದೂಯೇತರ ಎಂಬವುಗಳು ಕೂಡ ಜೈನ ಮತ್ತು ಬೌದ್ಧ ಧಾರ್ಮಿಕ ಕೇಂದ್ರಗಳೇ ಹೊರತು ಮುಸ್ಲಿಂ ಅಥವಾ ಕ್ರಿಶ್ಚಿಯನ್ ಧರ್ಮದವುಗಳಲ್ಲ. ಮುಸ್ಲಿಂ ಅಥವಾ ಕ್ರಿಶ್ಚಿಯನ್ ಪ್ರಾರ್ಥನಾ ಸ್ಥಳಗಳಿಗೆ ತಸ್ತಿಕ್ (ಇನಾಂ ರದ್ದತಿಗಳಿಗಾಗಿ ಕೊಡುವ ಪರಿಹಾರ ಧನ) ಮತ್ತು ವರ್ಷಾಸನವನ್ನು ಕಂದಾಯ ಇಲಾಖೆಯು ಒದಗಿಸುತ್ತಿದ್ದು ಅದನ್ನು ಮುಜರಾಯಿ ಇಲಾಖೆಯ ಮೂಲಕ ಬಿಡುಗಡೆ ಮಾಡಲಾಗುತ್ತಿತ್ತು. ಅದು ಹಿಂದೂ ದೇವಾಲಯಗಳ ಆದಾಯದಿಂದ ಒದಗಿಸಿದ ಮೊತ್ತವಲ್ಲ. ಈಗ ಮುಜರಾಯಿ ಇಲಾಖೆಯ ಬದಲು ವಕ್ಫ್ ಮಂಡಳಿ ಹಾಗೂ ಹಿಂದುಳಿದ ವರ್ಗ, ಧಾರ್ಮಿಕ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಮೂಲಕ ಕೊಡಲಾಗುತ್ತಿದೆ.

ಈ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ದೇವಸ್ಥಾನಗಳನ್ನು ಸ್ವತಂತ್ರಗೊಳಿಸುವ ಸರಕಾರದ ಪ್ರಸ್ತಾವವು, ದೇವಾಲಯ ಹಾಗೂ ಧಾರ್ಮಿಕ ಕೇಂದ್ರಗಳ ಖಾಸಗೀಕರಣಕ್ಕೆ, ಆ ಮೂಲಕ ಆಯಾ ಪ್ರದೇಶದಲ್ಲಿ ಬಲಾಢ್ಯರಾಗಿರುವ ಮೇಲ್ಜಾತಿ ಕೋಮುಗಳ ನಿಯಂತ್ರಣ ಸ್ಥಾಪಿಸುವುದಕ್ಕೆ, ತಮ್ಮದೇ ರಾಜಕೀಯ ಪಕ್ಷದ ಬೆಂಬಲಿಗ ವ್ಯಕ್ತಿಗಳ ಅನಿಯಂತ್ರಿತ ಹಸ್ತಕ್ಷೇಪ ಮತ್ತು ಹಣಕಾಸು ಅಕ್ರಮಗಳಿಗೆ ಅನುವು ಮಾಡಿಕೊಡುವ ಹುನ್ನಾರ ಎಂಬಂತೆ ಕಾಣುತ್ತಿದೆ.

ಲೇಖಕ: ಬರಹಗಾರ, ಚಿಂತಕ



ಸಾರ ಕಳೆದುಕೊಳ್ಳುತ್ತಿರುವ ಸಂಸಾರ

ಮನುಷ್ಯಸಂಬಂಧಗಳು ಸಂಕೀರ್ಣವಾಗುತ್ತಿವೆ; ನಂಬಿಕೆ ಮೊಳೆಯುವ ಬದಲು ದ್ವೇಷ ಚಿಗುರೊಡೆಯುತ್ತಿದೆ. ಸಂಬಂಧಗಳು ವಿಶ್ವಾಸ ಬಂಧದಲ್ಲಿ ವಿಸ್ತರಿಸುವ ಬದಲು ಕ್ಷೀಣಿಸುತ್ತಿರುವುದಕ್ಕೆ ಮನಸ್ಸಿನೊಳಗೆ ಬಿತ್ತುತ್ತಿರುವ ಅಪನಂಬಿಕೆ ಬಿತ್ತನೆಗಳೇ ಮೂಲ ಕಾರಣ. ಜೊಳ್ಳು ಬಿತ್ತಿ ಒಳ್ಳೆಯ ಫಲ ಹೇಗೆ ಸಿಗುವುದಿಲ್ಲವೋ, ಹಾಗೇ ನಮ್ಮ ಸಂಬಂಧಗಳಿಗೆ ತೋರಿಕೆಯ ಲೇಪ ಹಾಕಿ ಬಿಗಿಯುವುದರಿಂದ ಸಡಿಲವಾಗುತ್ತಿದೆ. ಹಿಂದೆಲ್ಲ ಕೂಡುಕುಟುಂಬಗಳಿದ್ದವು; ನೂರಾರು ಜನ ಒಂದುಗೂಡಿ ಬದುಕು ಕಟ್ಟಿಕೊಳ್ಳುತ್ತಿದ್ದರು. ಇಂಥ ಅವಿಭಕ್ತ ಕುಟುಂಬಗಳು ಸಡಿಲಗೊಂಡಿದ್ದು ಸಹ ಮನೆಯ ಸದಸ್ಯರ ಅಪನಂಬಿಕೆ-ಅಸೂಯಾಪರ ಮನಃಸ್ಥಿತಿಗಳಿಂದ.

ಅವಿಭಕ್ತ ಕುಟುಂಬಗಳು ಕ್ಷೀಣಿಸಿದ ನಂತರ ಮುಂದುವರೆದ ವಿಭಕ್ತ ಕುಟುಂಬಗಳಲ್ಲೂ ಹತ್ತಾರು ಮಂದಿ ಬದುಕುತ್ತಿದ್ದರು. ಈಗಿನ 21ನೇ ಶತಮಾನದ ಹೊತ್ತಿಗೆ ಮೂರ್ನಾಲ್ಕು ಮಂದಿಗೆ ಕುಟುಂಬಗಳು ಸೀಮಿತಗೊಂಡಿವೆ. ಹೀಗಿದ್ದರೂ ಮನೆಯಲ್ಲಿ ಅಪನಂಬಿಕೆ-ಅಸಮಾಧಾನಗಳು ಇಮ್ಮಡಿಸುತ್ತಲೇ ಇವೆ. ಇದರಿಂದ ಸುಮಧುರ ಬಾಂಧವ್ಯಗಳು ಹಾಳಾಗುತ್ತಿವೆ. ಸಂಸಾರವೆಂಬ ಸುಂದರ ವ್ಯವಸ್ಥೆ ಕುರೂಪವಾಗುತ್ತಿವೆ. ದಿನಕಳೆದಂತೆ ಸಾರ ಕಳೆದುಕೊಳ್ಳುತ್ತಿರುವ ಸಂಸಾರವೆಂಬ ಸಾಗರ ಬತ್ತಿದರೆ ಮನುಷ್ಯಕುಲ ನಾಶವಾದಂತೆ ಎಂಬ ಪ್ರಜ್ಞೆ ಯಾರಲ್ಲೂ ಕಾಣದಿರುವುದು ಆತಂಕಕಾರಿಯಾಗಿದೆ.

ಹಿಂದೆಲ್ಲಾ ಮನುಷ್ಯಸಂಬಂಧಗಳ ಮಧ್ಯೆ ಗೋಡೆಗಳೆದ್ದು ಮನೆ-ಮನಗಳನ್ನು ಪ್ರತ್ಯೇಕಿಸುತ್ತಿದ್ದವು. ಈಗ ಮನುಷ್ಯರ ವಾಸ ಊರು-ಕೇರಿಗಳನ್ನು ದಾಟಿ ದೇಶಗಳ ಗಡಿಯಾಚೆ ವಿಸ್ತರಿಸುತ್ತಿರುವುದರಿಂದ ಹತ್ತಾರು ತಲೆಮಾರುಗಳ ವಂಶವೃಕ್ಷಗಳು ಸಂಬಂಧದ ಬೆಸುಗೆ ಕಾಣದೆ ಒಣಗುತ್ತಿವೆ. ತನ್ನ ಮಕ್ಕಳು, ಮೊಮ್ಮಕ್ಕಳು ಬಾಳಿ ಬದುಕಲೆಂದು ಕಡುಕಷ್ಟ ಕಾಲದಲ್ಲಿ ಹೊಟ್ಟೆಬಟ್ಟೆ ಕಟ್ಟಿ ಕಟ್ಟಿದ ಸೂರುಗಳು ಬಾಳುವ ಕುಡಿಗಳಿಲ್ಲದೆ ಸೊರಗಿ ಹೋಗುತ್ತಿವೆ. ಮನೆಗೆ ವಾರಸುದಾರರಿಲ್ಲದೆ ತಮ್ಮ ಕಣ್ಣೆದುರೇ ಪಾಳು ಬೀಳುತ್ತಿರುವ ಮನೆಯನ್ನು ನೋಡಲಾಗದೆ, ನೋಡಿದರೂ ಏನೂ ಮಾಡಲಾಗದೆ ವೃದ್ಧಾಶ್ರಮ ಸೇರುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅನಾಥಾಶ್ರಮಗಳಿಗಿಂತ ವೃದ್ಧಾಶ್ರಮಗಳು ಹೆಚ್ಚಾಗಿವೆ ಅನ್ನುವ ಮಾತು ಕುಹಕ ಮಾತ್ರವಲ್ಲ, ಈ ಸಮಾಜದ ದುರಂತ ಪರಿಸ್ಥಿತಿಯ ಪ್ರತಿಬಿಂಬವಾಗಿದೆ.

ಸಂಬಂಧಗಳು ಹಾಳಾಗುತ್ತಿರುವುದರ ಹಿಂದೆ ಮನುಷ್ಯರ ಸಲ್ಲದ ದುರಾಸೆಗಳು ಮೂಲ ಕಾರಣವಾಗುತ್ತಿವೆ. ಹಣ ಮತ್ತು ಗುಣದ ನಡುವಿನ ವ್ಯತ್ಯಾಸ ಮತ್ತು ಅದರ ಫಲದ ಅರಿವಿಲ್ಲದ ಜನ, ಸಂಬಂಧಗಳನ್ನು ಬೆಲೆ ಕಟ್ಟಿ ತೂಗಿನೋಡುವ ಅಸಹ್ಯಕರ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಇದರಿಂದ ನಿತ್ಯ ಅನಾರೋಗ್ಯಕರ ಪೈಪೋಟಿಯ ವಾತಾವರಣ ಸೃಷ್ಟಿಯಾಗಿದೆ. ಇಂಥ ಕೃತಕ ಜಗತ್ತಿನಲ್ಲಿ ತಮ್ಮ ಮಾನ-ಪ್ರಾಣಗಳನ್ನು ಹಣದ ನೋಟನಲ್ಲಿ ಸಿಂಗರಿಸುವ ಪ್ರಯತ್ನ ಅವ್ಯಾಹತವಾಗಿ ಸಾಗುತ್ತಿದೆ. ತಮ್ಮ ಜೀವನದಲ್ಲಿ ಕಳೆದುಕೊಳ್ಳುತ್ತಿರುವುದೇನು, ತಮ್ಮ ಬದುಕಿಗೆ ಅಮೂಲ್ಯವಾದುದೇನು – ಎಂಬ ಸತ್ಯ ತಿಳಿಯದೆ ಪ್ರತಿ ಜೀವಕ್ಕೂ ಅಗತ್ಯವಾದ ಸುಖ-ಶಾಂತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಮನೆ ಒಳಗೂ-ಹೊರಗೂ, ಮನದೊಳಗೂ ಮನದ ಹೊರಗೂ ನೆಮ್ಮದಿ ಕಾಣದೆ ಚಡಪಡಿಸುತ್ತಿರುವ ಮನುಷ್ಯರ ನಡವಳಿಕೆ ವಿನಾಶದ ಮುನ್ಸೂಚನೆ ಅನಿಸುತ್ತೆ. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಬರುತ್ತೆ ಅನ್ನೋ ನಾಣ್ಣುಡಿಯಂತೆ ಮನುಷ್ಯ ವಿಪರೀತವಾಗಿ ಯೋಚಿಸುತ್ತಾ ವಿಚಿತ್ರವಾಗಿ ಆಡುತ್ತಿದ್ದಾನೆನಿಸುತ್ತೆ.

ಮನುಷ್ಯರ ಒಟ್ಟಾರೆ ಗುಣಗಳು ಜೀವನ್ಮುಖಿಯಾಗಿ ಹೊಮ್ಮುತ್ತಿಲ್ಲ, ಮೃತ್ಯುಮುಖಿಯಾಗಿ ಕಾಣುತ್ತಿವೆ. ಮನುಷ್ಯ ತನ್ನ ತಾನು ಸುಧಾರಿಸಿಕೊಳ್ಳದೆ, ಸಮಾಜವನ್ನು, ಆಮೂಲಕ ಈ ದೇಶವನ್ನು ಸುಧಾರಿಸಲಾರ. ಒಂದು ದೇಶ ಚೆನ್ನಾಗಿರಬೇಕಾದರೆ, ಆ ದೇಶದ ಜನರೂ ಚೆನ್ನಾಗಿರಬೇಕು. ಹಾಗೇ, ಒಂದು ದೇಹ ಉತ್ತಮವಾಗಿರಬೇಕಾದರೆ ಅದರೊಳಗಿನ ಮನಸ್ಸೂ ಉತ್ತಮವಾಗಿರಬೇಕು. ದೇಶದೊಳಗಿನ ಜನ ಒಳ್ಳೆ ಆಲೋಚನೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಜನ ಕೆಟ್ಟ ಆಲೋಚನೆಯಲ್ಲಿ ಮುಳುಗಿದರೆ, ದೇಶ ಸಹ ಕೆಟ್ಟದರಲ್ಲಿ ಮುಳುಗಿ ಹೋಗುತ್ತದೆ. ಹಾಗೇ ನಮ್ಮ ದೇಹ ಸಹ ಒಳ್ಳೇ ಚಿಂತನೆ ಮಾಡದಿದ್ದರೆ, ಕೆಟ್ಟು ಹೋಗುತ್ತದೆ. ನಾವು, ನಮ್ಮ ಕುಟುಂಬ ಚೆನ್ನಾಗಿದ್ದರೆ, ಈ ದೇಶ ಚೆನ್ನಾಗಿರುತ್ತದೆ ಎಂಬ ಸತ್ಯ ಅರ್ಥವಾದಾಗ 'ಸಚ್ಚಿದಾನಂದ'ದ ದರ್ಶನವಾಗುತ್ತದೆ.

ಪ್ರಜಾವಾಣಿ ಚರ್ಚೆ

ದೇಗುಲಗಳಿಗೆ ಸರ್ಕಾರದ ನಿಯಂತ್ರಣ: ಸಂವಿಧಾನದ ಉಲ್ಲಂಘನೆ

● ಎ. ಸೂರ್ಯಪ್ರಕಾಶ್



ಸಂವಿಧಾನವು ನೀಡಿದ ಖಾತರಿಯನ್ನು ಮುಸ್ಲಿಂ, ಕ್ರೈಸ್ತ, ಸಿಖ್ ಮತ್ತು ಇತರ ಧರ್ಮಗಳು ಪೂರ್ಣವಾಗಿ ಬಳಸಿಕೊಂಡು ತಮ್ಮ ತಮ್ಮ ಧರ್ಮಕ್ಕೆ ಸಂಬಂಧಿಸಿ ಸಂಸ್ಥೆಗಳನ್ನು ನಿರ್ವಹಿಸುತ್ತಿವೆ. ಈ ಎಲ್ಲ ಸಂಸ್ಥೆಗಳು ಸರ್ಕಾರದ ನಿಯಂತ್ರಣದಿಂದ ಹೊರಗೇ ಇವೆ. ಹಾಗಿದ್ದರೂ, ಸ್ವಾತಂತ್ರ್ಯದ ಬಳಿಕ ಸರ್ಕಾರವು ಹಿಂದೂ ಧಾರ್ಮಿಕ ಸಂಸ್ಥೆಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ

ದೇಶದಲ್ಲಿರುವ ಹಿಂದೂ ದೇವಾಲಯಗಳ ನಿರ್ವಹಣೆಯಲ್ಲಿ ಸರ್ಕಾರದ ಅನಿರ್ಬಂಧಿತ ಪಾಲ್ಗೊಳ್ಳುವಿಕೆಯು ಸ್ವತಂತ್ರ, 'ಜಾತ್ಯತೀತ' ಭಾರತದ ವಿವರಣೆಯೇ ಇಲ್ಲದ ಕಗ್ಗಂಟುಗಳಲ್ಲಿ ಒಂದು.

ಈ ವಿಚಾರವು ದಶಕಗಳಿಂದ ಒಳಗೊಳಗೇ ಕುದಿಯುತ್ತಿತ್ತು. ಆದರೆ, ನೆಹರೂವಾದಿಗಳು ಮತ್ತು ಮಾರ್ಕ್ಸ್‌ವಾದಿಗಳು ಇದನ್ನು ಮೂಲೆಗೆ ಸರಿಸುವಲ್ಲಿ ಯಶಸ್ವಿಯಾಗಿದ್ದರು. ತಮ್ಮ ರಾಜ್ಯದಲ್ಲಿರುವ ದೇವಾಲಯಗಳನ್ನು ಸರ್ಕಾರದ ಹಿಡಿತದಿಂದ ಬಿಡಿಸುವ ವಾಸ್ತವಿಕವಾದ ಕ್ರಮಕ್ಕೆ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿರುವುದರಿಂದ ವಿಚಾರವು ಮತ್ತೆ ಮುನ್ನೆಲೆಗೆ ಬಂದಿದೆ.

ಜವಾಹರಲಾಲ್ ನೆಹರೂ ಅವರ ಕಾಲದಿಂದಲೂ ಸಂದೇಹಾಸ್ಪದವಾದ ಜಾತ್ಯತೀತತೆಯ ಬ್ರ್ಯಾಂಡ್ ಅನ್ನು ದೇಶದ ಮೇಲೆ ಹೇರುವುದರ ಮೂಲವಾಗಿ ಕಾಂಗ್ರೆಸ್ ಪಕ್ಷವು ಇದೆ. ಈ ಪಕ್ಷವು ವಿವಿಧ ಕಾಯ್ದೆಗಳು ಮತ್ತು ನಿಯಮಗಳ ಮೂಲಕ ಹಿಂದೂ ದೇಗುಲಗಳ ನಿಯಂತ್ರಣವು ಸರ್ಕಾರದ ಬಳಿಯಲ್ಲಿಯೇ ಇರುವಂತೆ ನೋಡಿಕೊಂಡಿದೆ. ಆದರೆ, ಇದು ಸಂವಿಧಾನದ ಮೂಲ ಜಾತ್ಯತೀತ ತತ್ವಗಳಿಗೆ ವಿರುದ್ಧವಾದುದಾಗಿದೆ. ಅಂದರೆ, ನೆಹರೂ ಅವರ ಸರ್ಕಾರವು ದೇಗುಲಗಳ ನಿಯಂತ್ರಣದ ವಿಚಾರದಲ್ಲಿ ಬ್ರಿಟಿಷರ ನೀತಿಯನ್ನೇ ಮುಂದುವರಿಸಿತು ಮತ್ತು ದೇವಾಲಯಗಳ ನಿಧಿಗೆ ಕೈ ಹಾಕಿತು.

1950ರಲ್ಲಿ ಜಾರಿಗೆ ಬಂದ ಸಂವಿಧಾನದ ಪ್ರಸ್ತಾವನೆಯು ಭಾರತವನ್ನು 'ಸಾರ್ವಭೌಮ ಪ್ರಜಾಸತ್ತಾತ್ಮಕ ಒಕ್ಕೂಟ' ಎಂದು ವ್ಯಾಖ್ಯಾನಿಸುತ್ತದೆ. ನಂತರ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ 'ಸಮಾಜವಾದಿ' ಮತ್ತು 'ಜಾತ್ಯತೀತ' ಎಂಬ ಪದಗಳನ್ನು ಸೇರಿಸಲಾಯಿತು. ಪ್ರಸ್ತಾವನೆಯಲ್ಲಿ ಮಾತ್ರವಲ್ಲದೆ, ಸಂವಿಧಾನದ ವಿವಿಧ ವಿಧಿಗಳಲ್ಲಿ ಮುಖ್ಯವಾಗಿ 25 ಮತ್ತು 26ನೇ ವಿಧಿಗಳಲ್ಲಿಯೂ ಜಾತ್ಯತೀತ ಸಿದ್ಧಾಂತದ ಪ್ರತಿಪಾದನೆ ಇದೆ.

25ನೇ ವಿಧಿಯು ಧಾರ್ಮಿಕ ಸ್ವಾತಂತ್ರ್ಯ ಮತ್ತು ಯಾವುದೇ ವೃತ್ತಿ ಆಯ್ಕೆಯ ಸ್ವಾತಂತ್ರ್ಯ, ಧರ್ಮದ ಆಚರಣೆ ಮತ್ತು ಧರ್ಮ ಪ್ರಚಾರದ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ. ಧಾರ್ಮಿಕ ವ್ಯವಹಾರಗಳ ನಿರ್ವಹಣೆಯ ಸ್ವಾತಂತ್ರ್ಯವನ್ನು 26ನೇ ವಿಧಿಯು ಖಾತರಿಪಡಿಸುತ್ತದೆ. 'ಧಾರ್ಮಿಕ ಮತ್ತು ಸಮಾಜ ಸೇವೆಯ ಉದ್ದೇಶಕ್ಕಾಗಿ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆಯ ಹಕ್ಕು ಪ್ರತೀ ಧರ್ಮ ಅಥವಾ ಯಾವುದೇ ವರ್ಗಕ್ಕೆ ಇದೆ ಎಂದು ಈ ವಿಧಿಯು ಘೋಷಿಸುತ್ತದೆ. ಧರ್ಮಕ್ಕೆ ಸಂಬಂಧಿಸಿದ ವಿಚಾರಗಳ ನಿರ್ವಹಣೆ, ಆಸ್ತಿಯ ಖರೀದಿ ಮತ್ತು ನಿರ್ವಹಣೆಯ ಹಕ್ಕು ಕೂಡ ಇದೆ ಎಂದು ಈ ವಿಧಿಯು ಹೇಳುತ್ತದೆ.

ಸಂವಿಧಾನವು ನೀಡಿದ ಈ ಖಾತರಿಯನ್ನು ಮುಸ್ಲಿಂ, ಕ್ರೈಸ್ತ, ಸಿಖ್ ಮತ್ತು ಇತರ ಧರ್ಮಗಳು ಪೂರ್ಣವಾಗಿ ಬಳಸಿಕೊಂಡು ತಮ್ಮ ತಮ್ಮ ಧರ್ಮಕ್ಕೆ ಸಂಬಂಧಿಸಿ ಸಂಸ್ಥೆಗಳನ್ನು ನಿರ್ವಹಿಸುತ್ತಿವೆ. ಈ ಎಲ್ಲ ಸಂಸ್ಥೆಗಳು ಸರ್ಕಾರದ ನಿಯಂತ್ರಣದಿಂದ ಹೊರಗೇ ಇವೆ. ಹಾಗಿದ್ದರೂ, ಸ್ವಾತಂತ್ರ್ಯದ ಬಳಿಕ ಸರ್ಕಾರವು ಹಿಂದೂ ಧಾರ್ಮಿಕ ಸಂಸ್ಥೆಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ. ಇದು ಸಂವಿಧಾನದಲ್ಲಿ ಇರುವ ಅವಕಾಶಗಳ ಸ್ಪಷ್ಟ ಉಲ್ಲಂಘನೆ. ದೇಶದ ನೂರು ಕೋಟಿ ಹಿಂದೂಗಳ ಭಾವನೆಗಳಿಗೆ ಧಕ್ಕೆ.

ದೇಗುಲಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವ ಬೊಮ್ಮಾಯಿ ಅವರ ಯೋಚನೆಯ ಬಗ್ಗೆ ಕಾಂಗ್ರೆಸ್ ಚಿತ್ರ ವಿಚಿತ್ರ ವಾದಗಳನ್ನು ಮುಂದಿಡುತ್ತಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವಾದವೂ ವಿಚಿತ್ರವೇ ಆಗಿದೆ. ದಕ್ಷಿಣದ ರಾಜ್ಯಗಳ ಹಿಂದೂ ದೇವಾಲಯಗಳಿಂದ ಭಾರಿ ಮೊತ್ತವು ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಕೋವಿಡ್‌ನ ಪರಿಣಾಮವಾಗಿ ರಾಜ್ಯದ ಬೊಕ್ಕಸ ಬರಿದಾಗಿದೆ. ಇಂತಹ ಸಂದರ್ಭದಲ್ಲಿ, ದೇಗಲುಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸಿ ವ್ಯಕ್ತಿಗಳ ನಿಯಂತ್ರಣಕ್ಕೆ ಕೊಡುವುದು ಗಾಯಕ್ಕೆ ಉಪ್ಪು ಸವರಿದಂತೆ ಎಂದು ಶಿವಕುಮಾರ್ ಅವರು ಟ್ವೀಟ್ ಮಾಡಿದ್ದಾರೆ.

ಕರ್ನಾಟಕ ಸರ್ಕಾರದ ಈ ನಡೆಯು 'ಚಾರಿತ್ರಿಕ ಪ್ರಮಾದ'. ದೇವಾಲಯಗಳು 'ಸರ್ಕಾರದ ಸಂಪತ್ತು'. ಏಕೆಂದರೆ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ವರಮಾನ ಬರುತ್ತದೆ ಎಂದು ಅವರು ಹೇಳಿದ್ದಾರೆ. ಅವರ ವಾದವು ಸಂವಿಧಾನದ ತರ್ಕವನ್ನು ನಿರ್ಲಕ್ಷಿಸುತ್ತದೆ. ಹಿಂದೂ ಭಕ್ತರು ದೇವಾಲಯಕ್ಕೆ ನೀಡುವ ದೇಣಿಗೆಯನ್ನು ಎಕ್ಸೈಸ್, ಮಾರಾಟ ತೆರಿಗೆಯ ರೀತಿಯಲ್ಲಿಯೇ 'ವರಮಾನ' ಎಂದು ಶಿವಕುಮಾರ್ ಬಣ್ಣಿಸಿದ್ದಾರೆ.

ಕರ್ನಾಟಕ ಕಾಂಗ್ರೆಸ್‌ನ ಅಧ್ಯಕ್ಷರ ಹೇಳಿಕೆಯನ್ನು ಪ್ರಶ್ನಿಸಬೇಕಿದೆ. ಕೋವಿಡ್ ಈಗಲೂ ನಮ್ಮನ್ನು ಕಾಡುತ್ತಲೇ ಇದೆ. ಹಾಗಾಗಿ, ಮಸೀದಿಗಳು, ಚರ್ಚ್‌ಗಳು ಮತ್ತು ಗುರುದ್ವಾರಗಳಲ್ಲಿ ಭಕ್ತರು ನೀಡುವ ದೇಣಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕು ಎಂದು ಹೇಳುವ ಧೈರ್ಯ ಶಿವಕುಮಾರ್ ಅವರಿಗೆ ಇದೆಯೇ? ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಸರ್ಕಾರದ ಬೊಕ್ಕಸವನ್ನು ತುಂಬಿಸುವುದು ಹಿಂದೂಗಳ ಹೊಣೆಗಾರಿಕೆ ಮಾತ್ರ ಆಗಿದೆಯೇ?

ಸಂವಿಧಾನದಲ್ಲಿ 'ಜಾತ್ಯತೀತ' ಎಂಬ ಪದವನ್ನು ಕಾಂಗ್ರೆಸ್ ಪಕ್ಷವೇ ಸೇರಿಸಿರುವುದರಿಂದ ಅದನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ಶಿವಕುಮಾರ್ ವಿವರಿಸಬಹುದೇ? ಎಲ್ಲ ಧರ್ಮಗಳನ್ನು ಸಮಾನವಾಗಿ ನೋಡುವುದೇ ಜಾತ್ಯತೀತ ಎಂಬುದರ ಆಧಾರ ಸ್ತಂಭ ಅಲ್ಲವೇ?

ದೇವಾಲಯಗಳ ನಿರ್ವಹಣೆಯನ್ನು ಹಿಂದೂ ವ್ಯಕ್ತಿಗಳ ಕೈಗೆ ಕೊಟ್ಟರೆ ನಿರ್ವಹಣೆ ಕಳಪೆ ಆಗಬಹುದು ಎಂಬುದು ನಕಲಿ ಜಾತ್ಯತೀತರ ವಾದವಾಗಿದೆ. ಮುಸ್ಲಿಂ, ಕ್ರೈಸ್ತ ಧಾರ್ಮಿಕ ಸ್ಥಳಗಳು ಮತ್ತು ಸಂಸ್ಥೆಗಳ ನಿರ್ವಹಣೆ ಚೆನ್ನಾಗಿದೆಯೇ? ಅದು ಚೆನ್ನಾಗಿಲ್ಲ ಎಂದಾದರೆ, ಅಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಇದೆಯೇ?

ಸದ್ಗುರು ಜಗ್ಗಿ ವಾಸುದೇವ ಅವರಂತಹ ಜನಾಭಿಪ್ರಾಯ ರೂಪಿಸುವ ವ್ಯಕ್ತಿಗಳು ಹಿಂದೂ ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕು ಎಂಬ ಪ್ರತಿಪಾದನೆ ಆರಂಭಿಸಿದ್ದಾರೆ. ಇಂತಹ ಹೊತ್ತಿನಲ್ಲಿಯೇ ಬೊಮ್ಮಾಯಿ ಅವರು ದೇಗುಲಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸುವ ಬಗ್ಗೆ ಮಾತನಾಡಿದ್ದಾರೆ.


ತಮಿಳುನಾಡು ಸರ್ಕಾರದ ನಿಯಂತ್ರಣದಲ್ಲಿ ಇರುವ 44,000 ದೇವಾಲಯಗಳಲ್ಲಿ 5 ಲಕ್ಷ ಎಕರೆಗೂ ಹೆಚ್ಚು ಜಮೀನು ಇದೆ. ಹಾಗಿದ್ದರೂ ಈ ದೇವಾಲಯಗಳಿಂದ ಬರುವ ವರಮಾನ ₹128 ಕೋಟಿ ಮಾತ್ರ. ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯು ನಿರ್ವಹಿಸುತ್ತಿರುವ 85 ಗುರುದ್ವಾರಗಳ ಬಜೆಟ್ ₹1,000 ಕೋಟಿಗೂ ಹೆಚ್ಚು. ಈ ಅಂಕಿ ಅಂಶವೇ ನಮ್ಮ ಕಣ್ಣು ತೆರೆಸುವ ಅಂಶ ಎಂದು ಜಗ್ಗಿ ವಾಸುದೇವ ಅವರು ಹೇಳುತ್ತಾರೆ.

ದೇಗುಲ ನಿಯಂತ್ರಣದ ವಿಚಾರವನ್ನು ಮುನ್ನೆಲೆಗೆ ತಂದಿದ್ದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಅಭಿನಂದಿಸಬೇಕು. ಈ ಭರವಸೆಯನ್ನು ಅವರು ಈಡೇರಿಸಬೇಕು. ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಬಿಡಿಸಲು ಬೇಕಿರುವ ಯೋಜನೆ ರೂಪಿಸಬೇಕು ಮತ್ತು ಇತರ ರಾಜ್ಯಗಳು ಅನುಸರಿಸುವುದಕ್ಕೆ ನಿದರ್ಶನ ರೂಪಿಸಬೇಕು.

ಲೇಖಕ: ಪ್ರಸಾರ ಭಾರತಿಯ ಮಾಜಿ ಮುಖ್ಯಸ್ಥ

ಪದಬಂಧ 4832

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
3.ನಕ್ಷತ್ರಗಳ ಗುಂಪು (4)
5.ಕೈಯಲ್ಲಿರುವ ಹಣ (3)
6.ಈತ ಆನೆ ನಡೆಸುವಾತ (4)
8.ಎಲ್ಲೆಯಿಂದ ಹೊರಹಾಕುವಿಕೆ (4)
12.ನಡುವೆ ಕೈಯಿರಿಸಿದಾಗಿನ ಘಟನೆ! (4)
14.ಒಪ್ಪವಾಗಿ ಮಾಡಿದ ತರ್ಜುಮೆ (4)
15.ವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು (3)
16.ಮಾನವುಳ್ಳ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
2.ಈತ ಲಗ್ನವಾಗುತ್ತಿರುವವ (4)
3.ಕೊನೆಗೆ ವಿಕ್ರಯಿಸು ಎನ್ನುವಾಗಿನ ಅಸಾಂಗತ್ಯ (4)
4.ಒಂದು ಪಂಗಡಕ್ಕೆ ಸೇರಿದ ಜನವರ್ಗವು ಜಗದಲ್ಲಿದೆ! (3)
7.ಕೊರಳಲ್ಲಿ ಧರಿಸುವ ಚಿನ್ನದ ಆಭರಣ (2)
9.ಪಾಕದೊಳಗಿರುವ ಬಾಣಸಿಗ ಕಾಣುತ್ತಿದ್ದನೆಯೇ? (3)
10.ಫೋಟೊ ತೆಗೆಯುವುದು (5)
11.ಮಕರಂದವನ್ನು ನೀಡುವ ಕೀಟ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಕೆಟ್ಟ ಸ್ವಭಾವವಿಲ್ಲಿ ತಿರುವು ಮುರುವಾಗಿದೆಯಲ್ಲಾ? (4)
14.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)

4831ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿರೂಪಣೆ
3.ತಹನಾಮೆ 5.ಬಿಲ
6.ಪ್ರಾದುರ್ಭಾವ 8.ದವಾ
9.ಕಾಯಿ 10.ರಸಹೀನ
12.ತುತ್ತು 15.ರಸದಾಳಿ
16.ಅಂಗರಾಗ

ಮೇಲಿಂದ ಕೆಳಕ್ಕೆ:
1.ನಿನ್ನೆ 2.ಪತ್ತಲ
3.ತರದೂದು 4.ಮೆದೆ
5.ಬಿಲವಾರ 6.ಪ್ರಾಚೀನ
7.ವಕಾಲತ್ತು
11.ಹೀನಚಾಳಿ
12.ತುರಂಗ 13.ಸ್ತರ
14.ಬೀಗ

ಸುಡೊಕು 5218

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5217 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ

ಶನಿವಾರ ಜನವರಿ 8, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ-ಹೇಮಂತ ಋತು ಧನುರ್ಮಾಸದ 23ನೇ ದಿನ ತಿಥಿ: (ಪೌಷ ಶುಕ್ಲ) ಷಷ್ಠಿ ಗಂ. 10-44 ನಕ್ಷತ್ರ: ಉತ್ತರಾಭಾದ್ರ ಅಹೋರಾತ್ರ ಯೋಗ: ವರಿಯಾನ್ ಗಂ. 11-40, ಕರಣ: ತೈತಿಲ ಗಂ. 10-44. ರಾಹುಕಾಲ: ಬೆಳಿಗ್ಗೆ 09:00 – 10:30 ಸೂರ್ಯೋದಯ: 06-59 ಸೂರ್ಯಾಸ್ತ: 06-15 ಮುಸ್ಲಿಂ ದಿನಾಂಕ : 04 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 8, 13

ಮೇಷ: ಮಿತ್ರರಿಂದ ಉತ್ತಮ ಸಹಾಯ ದೊರೆಯುವ ಸಾಧ್ಯತೆ. ಶುಭಸೂಚನೆಯೊಂದಿಗೆ ಪ್ರಾರಂಭವಾಗುವ ಈ ದಿನವು ನಿಮ್ಮ ಜೀವನದಲ್ಲಿ ಮಹತ್ವಪೂರ್ಣವಾಗಿ ಪರಿಣಮಿಸಲಿದೆ. ಜವಳಿ ವ್ಯಾಪಾರಿಗಳಿಗೆ ಲಾಭದಾಯಕವಾಗಲಿದೆ.

ವೃಷಭ: ಕೃಷಿಕರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು, ಎಚ್ಚರ ವಹಿಸಿ. ಸಂಜೆಯ ಸಮಯದಲ್ಲಿ ಕೆಲಸದ ಒತ್ತಡ ಹೆಚ್ಚಾಗಿ ಶಿರೋವೇದನೆಯಂತಹ ಸಮಸ್ಯೆಗೆ ಒಳಗಾಗಬೇಕಾಗುವುದು. ಅವಿವಾಹಿತರಿಗೆ ಶುಭ ಫಲ.

ಮಿಥುನ: ವೃತ್ತಿಯ ಕೆಲಸಗಳಿಗಾಗಿ ಹೆಚ್ಚಿನ ಓಡಾಟ ನಡೆಸುವಿರಿ ಹಾಗೂ ಹಣದ ವಿಚಾರದಲ್ಲಿ ಸ್ಥಿರತೆಯ ಬಗ್ಗೆ ಯೋಚನೆಯನ್ನು ಮಾಡಿ. ಮುಂದಾಲೋಚನೆ ಹಾಗೂ ವಿವೇಚನೆಯಿಂದ ನಡೆದುಕೊಂಡಲ್ಲಿ ಹೆಚ್ಚಿನ ಏಳಿಗೆ, ಯಶಸ್ಸು.

ಕರ್ಕಾಟಕ: ದಾಂಪತ್ಯದಲ್ಲಿ ತಗ್ಗಿ-ಬಗ್ಗಿ ನಡೆಯುವುದನ್ನು ಕಲಿಯಿರಿ, ಇಲ್ಲವಾದಲ್ಲಿ ವಿರಸಕ್ಕೆ ಕಾರಣವಾಗುವುದು. ಎಲ್ಲಾ ಕಾರ್ಯದಲ್ಲೂ ತಾಳ್ಮೆ ಮುಖ್ಯವಾಗುವುದು. ಈ ದಿನ ದೇಹಕ್ಕೆ ಗಾಯಗಳಾಗುವ ಸಾಧ್ಯತೆಗಳಿವೆ.

ಸಿಂಹ: ಆದಾಯದಲ್ಲಿ ಗಣನೀಯ ಏರಿಕೆ. ಹಾಗೆಯೇ ನಿಮ್ಮ ದುಡಿಮೆಯು ಸಾರ್ಥಕವಾಗಲಿದೆ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಇರುವುದು.

ಕನ್ಯಾ: ನವದಂಪತಿಗಳಿಗೆ ಸಂತಾನದ ಶುಭಸುದ್ದಿ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ, ಸಿವಿಲ್ ಕಂಟ್ರಾಕ್ಟರ್‌ಗಳಿಗೆ ಒಳ್ಳೆಯ ದಿನ. ತಂದೆ-ತಾಯಿಯವರ ಆರೋಗ್ಯ ಉತ್ತಮವಾಗಿದ್ದು ಮನಸ್ಸು ನಿರಾಳವಾಗಿರಲಿದೆ.

ತುಲಾ: ಅನಿರೀಕ್ಷಿತವಾದ ಸಂತೋಷದ ಕ್ಷಣಗಳು ಬರಲಿವೆ. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಅವರಲ್ಲಿನ ಸಾಮರಸ್ಯ ಕಾಪಾಡಿಕೊಳ್ಳಿರಿ. ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.

ವೃಶ್ಚಿಕ: ಕಂಟ್ರಾಕ್ಟ್ ಕೆಲಸಗಾರರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ. ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ ಹಾಗೂ ಬಂದ ಅವಕಾಶವನ್ನು ಬಳಸಿಕೊಳ್ಳುವುದು ಉತ್ತಮ.

ಧನು: ರಾಜಕೀಯ ವರ್ಗದವರು ಜನಮನ್ನಣೆ ಪಡೆದುಕೊಂಡು ಉತ್ತಮ ಶುಭಫಲಗಳನ್ನು ಹೊಂದಲಿದ್ದಾರೆ. ಆಲಸ್ಯತನವನ್ನು ದೂರ ಮಾಡಿಕೊಳ್ಳುವುದು ಒಳ್ಳೆಯದು. ನಾನಾ ಮೂಲಗಳಿಂದ ಧನ ಸಂಪಾದನೆ.

ಮಕರ: ಷೇರು ಮಾರಾಟದಿಂದ ಅಧಿಕ ಲಾಭ. ಮನೆಯಲ್ಲಿ ಸೌಹಾರ್ದಯುತವಾದ ವಾತಾವರಣ ಸೃಷ್ಟಿಯಾಗಲಿದೆ. ಚಿನ್ನಾಭರಣ ಮಾರಾಟಗಾರರಿಗೆ ಆದಾಯ. ತರಕಾರಿ ಬೆಳೆಗಾರರಿಗೆ ಸಮಾಧಾನಕರ ವರಮಾನ ಸಿಗುವುದು.

ಕುಂಭ: ನಿಮಗಿಂತ ಅನುಭವದಲ್ಲಿ ಹಿರಿಯರಾದವರ ಸಲಹೆಗಳನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಸಹೋದರರಲ್ಲಿ ಅಥವಾ ದಾಂಪತ್ಯದಲ್ಲಿ ಸಣ್ಣಪುಟ್ಟ ಮಾನಸಿಕವಾಗಿ ಅಸಮಾಧಾನ.

ಮೀನ: ಹತ್ತಿ ಬಟ್ಟೆಗಳ ತಯಾರಕರಿಗೆ ಹೆಚ್ಚಿನ ಬೇಡಿಕೆ. ಕಳೆದುಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು. ನೀವು ಬಹಳ ದಿನದಿಂದಲೂ ಆರಂಭಿಸಬೇಕೆಂದಿದ್ದ ನೂತನ ಕಾರ್ಯವನ್ನು ಆರಂಭಿಸಲು ಸಮಯಾವಕಾಶ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟಾ	
ಚಿಪ್ಪು	24809-33019
ಕೋಕ	18019-26099
ಹಳೆಚಾಲಿ	46509-49749
ಹೊಸಚಾಲಿ	3569-40699
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	28639-39469
ಚಾಲಿ	44122-48509
ಕೋಕ	26409-37899
ಹೊಸಚಾಲಿ	33699-45012
ರಾಶಿ	43599-48509
ತಟ್ಟಿಬೆಟ್ಟೆ	30899-47899
ಶಿರಸಿ	
ಬೆಟ್ಟೆ	30509-46409
ಬಿಳಿಗೋಟು	24169-42599
ಚಾಲಿ	30699-49399
ರಾಶಿ	39009-49001
ಸಿದ್ದಾಪುರ	
ಬಿಳಿಗೋಟು	26899-33501
ಚಾಲಿ	38629-48699
ಕೋಕ	23099-30899
ಕೆಂಪುಗೋಟು	28899-37899
ರಾಶಿ	45639-52519
ತಟ್ಟಿಬೆಟ್ಟೆ	38768-44799
ರಾಮನಗರ ರೇಷ್ಮೆ	
ಮಿಶ್ರತಳಿ	400-609
ದ್ವಿತಳಿ	501-818


ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15500	15500	231.70 ಸೆಂಟ್ಸ್
ಎಸಿ	7055	6800	6700	
ಆರ್‌ಪಿ	6500	6900	7000	ಲಂಡನ್
ಆರ್‌ಸಿ	3875	4050	3900	2307ಡಾಲರ್ಸ್

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,746
ಇಂದಿನ ಅಂತ್ಯ	17,812
▲	66
ದಿನದ ಗರಿಷ್ಠ	17,905

ವಿನಿಮಯ ದರ

$ ಡಾಲರ್	74.42
£ ಪೌಂಡ್	100.66
€ ಯುರೊ	84.08
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1200 (1197)
ಸೂರ್ಯಕಾಂತಿ (ರಿಫೈನ್ಡ್)	₹1245 (1245)
ಪಾಮೋಲಿನ್	₹1165 (1160)

ಕೊಬ್ಬರಿ ಧಾರಣೆ



ಪುತ್ತೂರು	₹9232-9250
ತುಮಕೂರು	₹10200-11600
ತುರುವೇಕೆರೆ	₹17200-17300

ಮುಂಬೈ ಧಾರಣೆ

ಶೇಂಗಾ

7-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1150 (1145)
ಪಾಮ್ ವಾರದ ಡೆಲಿವರಿ	1163 (1160)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,300 (47,500)
ಬೆಳ್ಳಿ ಕೆ.ಜಿ	59,950 (60,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂದಾಜು

ಕೋವಿಡ್ ಪೂರ್ವ ಮಟ್ಟ ಮೀರಲಿದೆ ಜಿಡಿಪಿ ಗಾತ್ರ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ ಬೆಳವಣಿಗೆ ದರ) ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 9.2ರಷ್ಟು ಆಗಲಿದ್ದು, ಕೋವಿಡ್‌ಗೂ ಮೊದಲಿನ ಮಟ್ಟವನ್ನು ಮೀರಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಹೇಳಿದೆ.

ಎನ್‌ಎಸ್‌ಒ ಶುಕ್ರವಾರ ಬಿಡುಗಡೆ ಮಾಡಿದ ರಾಷ್ಟ್ರೀಯ ಆದಾಯದ ಮೊದಲ ಸುಧಾರಿತ ಅಂದಾಜಿನ ಪ್ರಕಾರ, ಎಲ್ಲಾ ಕ್ಷೇತ್ರಗಳಲ್ಲಿ ಬೆಳವಣಿಗೆ ಆಗಿದೆ.

ಕೃಷಿ, ಗಣಿಗಾರಿಕೆ ಮತ್ತು ತಯಾರಿಕಾ ವಲಯಗಳ ಬೆಳವಣಿಗೆಯಲ್ಲಿ ಸುಧಾರಣೆ ಕಂಡುಬಂದಿದೆ. ಇದರಿಂದಾಗಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಲಿದೆ ಎಂದು ಅದು ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕ ಮತ್ತು ಅದನ್ನು ನಿಯಂತ್ರಿಸಲು ಜಾರಿಗೊಳಿಸಿದ ಲಾಕ್‌ಡೌನ್‌ನಿಂದಾಗಿ 2020-21ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ (–)7.3ರಷ್ಟು ಕುಸಿತ ಕಂಡಿತ್ತು.

2021ರ ಮೇ 31ರಂದು ಬಿಡುಗಡೆ ಮಾಡಿದ್ದ ವರದಿಯಲ್ಲಿ ಜಿಡಿಪಿಯ ಗಾತ್ರವು 2020-21ರಲ್ಲಿ ₹ 135.13 ಲಕ್ಷ ಕೋಟಿಗಳಷ್ಟು ಆಗಲಿದೆ ಎಂದು ಎನ್‌ಎಸ್‌ಒ ಹೇಳಿತ್ತು. 2021-22ರಲ್ಲಿ ಜಿಡಿಪಿ ಗಾತ್ರವು ₹ 147.54 ಲಕ್ಷ ಕೋಟಿಗಳಷ್ಟು ಆಗಲಿದೆ ಎಂದು ಶುಕ್ರವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

ಎನ್‌ಎಸ್‌ಒ ಅಂದಾಜಿನ ಪ್ರಕಾರ, 2021-22ರಲ್ಲಿ ಜಿಡಿಪಿ ಗಾತ್ರವು 2019-20ರಲ್ಲಿ ಇದ್ದಂತಹ ₹ 145.69 ಲಕ್ಷ ಕೋಟಿ ಗಾತ್ರವನ್ನು ಮೀರಲಿದೆ.

ಜಿಡಿಪಿಯು ಶೇ 9.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಆರ್‌ಬಿಐ ಹೇಳಿದೆ. ಎನ್‌ಎಸ್‌ಒ ಅಂದಾಜು ಅದಕ್ಕಿಂತಲೂ ಕಡಿಮೆ ಇದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ತಯಾರಿಕಾ ವಲಯವು ಶೇ 12.5ರಷ್ಟು ಬೆಳವಣಿಗೆ ಕಾಣುವ ಅಂದಾಜು ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಶೇ 7.2ರಷ್ಟು ಇಳಿಕೆ ಕಂಡಿತ್ತು.

ಎನ್‌ಎಸ್‌ಒ ಅಂದಾಜಿನ ಪ್ರಕಾರ, ಗಣಿಗಾರಿಕೆ ಮತ್ತು ಕ್ವಾರಿ ಶೇ 12.5ರಷ್ಟು ಕಾಣಲಿದೆ.

ಕೃಷಿ ವಲಯವು ಶೇ3.9ರಷ್ಟು ಬೆಳವಣಿಗೆ ಕಾಣುವ ಅಂದಾಜು ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಶೇ 3.6ರಷ್ಟು ಬೆಳವಣಿಗೆ ಕಂಡಿತ್ತು.

‘ಏಷ್ಯಾದ ಎರಡನೆಯ ಅತಿದೊಡ್ಡ ಆರ್ಥಿಕತೆ ಆಗಲಿದೆ ಭಾರತ’

ನವದೆಹಲಿ (ಪಿಟಿಐ): 2030ಕ್ಕೂ ಮೊದಲು ಭಾರತದ ಅರ್ಥ ವ್ಯವಸ್ಥೆಯು ಜಪಾನ್ ದೇಶವನ್ನು ಹಿಂದಿಕ್ಕಿ, ಏಷ್ಯಾದ ಎರಡನೆಯ ಅತಿದೊಡ್ಡ ಅರ್ಥ ವ್ಯವಸ್ಥೆ ಆಗುವ ಸಾಧ್ಯತೆ ಇದೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಅಂದಾಜಿಸಿದೆ. ಆಗ ಭಾರತದ ಅರ್ಥ ವ್ಯವಸ್ಥೆಯು ವಿಶ್ವದ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆ ಆಗಲಿದೆ ಎಂದು ಕೂಡ ಅದು ಅಂದಾಜಿಸಿದೆ.

ಈಗ ಭಾರತದ್ದು ಜಗತ್ತಿನ ಆರನೆಯ ಅತಿದೊಡ್ಡ ಅರ್ಥ ವ್ಯವಸ್ಥೆ. ಅಮೆರಿಕ, ಚೀನಾ ಮತ್ತು ಜಪಾನ್ ಮೊದಲ ಮೂರು ಸ್ಥಾನಗಳಲ್ಲಿ ಇವೆ. ಜರ್ಮನಿ ಮತ್ತು ಬ್ರಿಟನ್ ಕ್ರಮವಾಗಿ ನಾಲ್ಕು ಮತ್ತು ಐದನೆಯ ಸ್ಥಾನಗಳಲ್ಲಿ ಇವೆ. ‘ಮುಂದಿನ ಒಂದು ದಶಕದ ಅವಧಿಯಲ್ಲಿ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ವಿಶ್ವದಲ್ಲಿ ಅತ್ಯಂತ ವೇಗವಾಗಿ ಬೆಳೆಯುವ ವ್ಯವಸ್ಥೆಗಳ ಪೈಕಿ ಒಂದಾಗಿರಲಿದೆ’ ಎಂದು ಸಂಸ್ಥೆ ಹೇಳಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಚಿನ್ನ, ಬೆಳ್ಳಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ, ಬೆಳ್ಳಿ ಬೆಲೆಯು ಇಳಿಕೆ ಆಗಿದೆ.

ಚಿನ್ನದ ಬೆಲೆಯು 10 ಗ್ರಾಂಗೆ ₹ 301ರಷ್ಟು ಇಳಿಕೆಯಾಗಿದ್ದು, ₹ 46,415ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆ ಆಗಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 402ರಷ್ಟು ಇಳಿಕೆಯಾಗಿ ₹ 59,044ರಂತೆ ಮಾರಾಟವಾಗಿದೆ.


ಸುದ್ದಿ 2 ನಿಮಿಷ

ಷೇರುಪೇಟೆ ವಹಿವಾಟು ಚೇತರಿಕೆ

ಮುಂಬೈ (ಪಿಟಿಐ): ಇಂಧನ, ಮೂಲಸೌಕರ್ಯ ಮತ್ತು ಐ.ಟಿ. ವಲಯದ ಷೇರುಗಳು ಉತ್ತಮ ಗಳಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳು ಶುಕ್ರವಾರ ಏರಿಕೆಯ ಹಾದಿಗೆ ಮರಳಿವೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 142 ಅಂಶ ಹೆಚ್ಚಾಗಿ 59,744 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 66 ಅಂಶ ಹೆಚ್ಚಾಗಿ 17,812 ಅಂಶಗಳಿಗೆ ತಲುಪಿತು.

ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಇಳಿಮುಖ ವಹಿವಾಟಿನಿಂದಾಗಿ ದೇಶಿ ಷೇರುಪೇಟೆ ಸೂಚ್ಯಂಕಗಳು ಆರಂಭದಲ್ಲಿ ಇಳಿಕೆ ಕಂಡವು. ಆರೋಗ್ಯಸೇವೆ ಮತ್ತು ಗ್ರಾಹಕ ಬಳಕೆ ವಸ್ತುಗಳನ್ನು ಮಾರಾಟ ಮಾಡುವ ಕಂಪನಿಗಳ ಷೇರುಗಳು ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ದಿನದ ವಹಿವಾಟಿನಲ್ಲಿ ಏಷ್ಯನ್ ಪೇಂಟ್ಸ್ ಷೇರು ಮೌಲ್ಯವು ಶೇ 1.79ರಷ್ಟು ಗರಿಷ್ಠ ಗಳಿಕೆ ಕಂಡುಕೊಂಡಿತು. ಟಿಸಿಎಸ್, ನೆಸ್ಲೆ ಇಂಡಿಯಾ, ಅಲ್ಟ್ರಾ ಟೆಕ್ ಸಿಮೆಂಟ್, ಐಸಿಐಸಿಐ ಬ್ಯಾಂಕ್ ಷೇರುಗಳ ಮೌಲ್ಯವು ಹೆಚ್ಚಾಯಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 12 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.41ರಂತೆ ವಿನಿಮಯಗೊಂಡಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಶೇ 0.99ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 82.80 ಡಾಲರ್‌ಗಳಿಗೆ ತಲುಪಿತು.

ಕೋವಿಡ್ ಪೀಡಿತ ವಲಯಕ್ಕೆ ಬೆಂಬಲ: ಬ್ಯಾಂಕ್‌ಗೆ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಸಮಸ್ಯೆ ಎದುರಿಸುವ ಕೃಷಿ, ರಿಟೇಲ್ ಮತ್ತು ಎಂಎಸ್‌ಎಂಇ ವಲಯಗಳಿಗೆ ನೆರವನ್ನು ಮುಂದುವರಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಶುಕ್ರವಾರ ತಿಳಿಸಿದರು.

ವರ್ಚುವಲ್ ವೇದಿಕೆಯ ಮೂಲಕ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಪ್ರಮುಖರ ಜೊತೆ ಚರ್ಚೆ ನಡೆಸಿದ ಅವರು, ಓಮೈಕ್ರಾನ್‌ನಿಂದ ಆಗಬಹುದಾದ ಪರಿಣಾಮಗಳನ್ನು ಎದುರಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಯಾವ ರೀತಿಯ ಸಿದ್ಧತೆ ಮಾಡಿಕೊಂಡಿವೆ ಎನ್ನುವ ಕುರಿತು ಪರಿಶೀಲಿಸಿದರು.

ಕೋವಿಡ್‌ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಸೂಚಿಸಿರುವ ಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಬ್ಯಾಂಕ್‌ಗಳು ತೆಗೆದುಕೊಂಡಿರುವ ಕ್ರಮಗಳನ್ನು ಪರಿಶೀಲನೆ ನಡೆಸಿದರು ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

‘26ರಿಂದ ಜನತಾ ಜಲಧಾರೆ ಅಭಿಯಾನ’

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಡಿಎಸ್‌ಗೆ ಪೂರ್ಣ ಬಹುಮತದೊಂದಿಗೆ ಐದು ವರ್ಷದ ಪೂರ್ಣಾವಧಿ ಅಧಿಕಾರ ನೀಡಿದರೆ ರಾಜ್ಯದ ಎಲ್ಲ ನದಿಗಳ ನೀರಿನ ಸಮರ್ಪಕ ಬಳಕೆಗೆ ಯೋಜನೆ ರೂಪಿಸಿ, ಅನುಷ್ಠಾನಕ್ಕೆ ತರುವ ಭರವಸೆಯೊಂದಿಗೆ ಜನವರಿ 26ರಿಂದ ಜನತಾ ಜಲಧಾರೆ ಅಭಿಯಾನ ಆರಂಭಿಸಲಾಗುವುದು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಶುಕ್ರವಾರ ಪ್ರಕಟಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಅಭಿಯಾನ 2023ರ ಚುನಾವಣೆಯವರೆಗೂ ಮುಂದುವರಿಯಲಿದೆ. ನದಿ ಮೂಲಗಳಿರುವ 51 ಸ್ಥಳಗಳಿಗೆ ಯಾತ್ರೆಯ ಮೂಲಕ ಭೇಟಿ ನೀಡಲಾಗುವುದು’ ಎಂದರು.

ರಾಜ್ಯದ ಎಲ್ಲ ನದಿಗಳಲ್ಲಿ ಲಭ್ಯವಿರುವ ನೀರಿನ ಬಳಕೆಗೆ ಸಮಗ್ರ ಯೋಜನೆ ರೂಪಿಸಲಾಗಿದೆ. ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಕೆ ಮತ್ತು ರಾಜ್ಯದ ಉದ್ದಗಲಕ್ಕೆ ಕೃಷಿ ಚಟುವಟಿಕೆಗೆ ನೀರಾವರಿ ಕಲ್ಪಿಸುವ ಯೋಜನೆಗಳನ್ನು ಜೆಡಿಎಸ್ ಸಿದ್ಧಪಡಿಸಿದೆ. ಅವುಗಳೊಂದಿಗೆ ಜನರ ಎದುರು ಹೋಗಿ ಬೆಂಬಲ ಕೋರಲಾಗುವುದು ಎಂದರು.

ಪಕ್ಷದ ಶಾಸಕರು, ಮಾಜಿ ಸಚಿವರು, ಹಿರಿಯ ಮುಖಂಡರ ನೇತೃತ್ವದಲ್ಲಿ 15 ತಂಡಗಳನ್ನು ರಚಿಸಲಾಗುವುದು. ಈ ತಂಡಗಳು ನದಿ ಮೂಲಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿ, ಜಲ ಸಂಗ್ರಹಿಸಲಿವೆ. ಕೋವಿಡ್ ಪ್ರಕರಣಗಳ ಸಂಖ್ಯೆ ಜಾಸ್ತಿ ಆಗದಿದ್ದರೆ ಜ.26ಕ್ಕೆ ಆಂದೋಲನ ಆರಂಭಿಸುವುದು ಖಚಿತ. ಕೋವಿಡ್ ಹೆಚ್ಚಾದರೆ ಕೆಲವು ದಿನಗಳ ಕಾಲ ಮುಂದೂಡಲಾಗುವುದು ಎಂದು ವಿವರಿಸಿದರು.

ಜೆಡಿಎಸ್‌ಗೆ ಸೋಲು, ಗೆಲುವು ಹೊಸದಲ್ಲ. ಅನೇಕ ಚುನಾವಣೆಗಳಲ್ಲಿ ಸೋಲು, ಗೆಲುವು ನೋಡಿದ್ದೇವೆ. ಈಗ ಸಂಪೂರ್ಣ ಬಹುಮತದೊಂದಿಗೆ ಅಧಿಕಾರನೀಡಿದರೆ ಜನರ ಕೆಲಸ ಮಾಡುತ್ತೇವೆ ಎಂಬ ಭರವಸೆಯೊಂದಿಗೆ ಹೋರಾಟ ಮಾಡುತ್ತೇವೆ. ಯಾವ ರೀತಿಯಲ್ಲೂ ಮುಚ್ಚುಮರೆ ಮಾಡುವುದಿಲ್ಲ. ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಜನರಲ್ಲಿ ಕೇಳುವುದಕ್ಕಾಗಿಯೇ ಈ ಯಾತ್ರೆ ಮಾಡುತ್ತಿದ್ದೇವೆ ಎಂದರು.

‘ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಪಾದಯಾತ್ರೆಗೆ ವಿರುದ್ಧವಾಗಿ ಕಾರ್ಯಕ್ರಮ ರೂಪಿಸಿಲ್ಲ. ಮೇಕೆದಾಟು ಜತೆಯಲ್ಲೇ ಮಹದಾಯಿ, ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ ಎಲ್ಲ ಯೋಜನೆಗಳೂ ಆಗಬೇಕು. ಅದಕ್ಕೆ ಪೂರಕವಾಗಿ ನಮ್ಮ ಹೋರಾಟ’ ಎಂದರು.

ಪಾದಯಾತ್ರೆಯಿಂದ ನೀರು ಸಿಗುವುದಿಲ್ಲ: ಕಾಂಗ್ರೆಸ್‌ನ ಪಾದಯಾತ್ರೆಯಿಂದ ಮೇಕೆದಾಟು ಯೋಜನೆಗೆ ಅನುಮತಿ ಸಿಗುವುದಿಲ್ಲ. ಬೆಂಗಳೂರಿಗೆ ನೀರೂ ಸಿಗುವುದಿಲ್ಲ. ಇವರ ಪಾದಯಾತ್ರೆಯಿಂದ ಆ ಭಾಗದ ಜನರ ಜೀವನ ಸಂಕಷ್ಟಕ್ಕೆ ಸಿಲುಕಲಿದೆ ಎಂದರು.

> ಪಾದಯಾತ್ರೆಯಿಂದ ನೀರು ಸಿಗುತ್ತದೆ ಎಂದು ಸಾಬೀತುಪಡಿಸುವ ಸಾಕ್ಷ್ಯವನ್ನು ಕಾಂಗ್ರೆಸ್ ನೀಡಿದರೆ ನಾನೇ ಖುದ್ದಾಗಿ ಯಾತ್ರೆ ಬೆಂಬಲಿಸುವೆ
>
> **ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

‘ಕಲ್ಲು ಖಾಲಿಯಾಗಿದ್ದಕ್ಕೆ ಮೇಕೆದಾಟು’

‘ಕುಮಾರಣ್ಣ ಹೊಡೆದರೂ ಹೊಡೆಸಿಕೊಳ್ಳುವೆ ಎಂದು ಕೆಪಿಸಿಸಿ ಅಧ್ಯಕ್ಷರು ಹೇಳಿದ್ದಾರೆ. ಅಣ್ಣ, ತಮ್ಮ, ಅಪ್ಪ, ಅಮ್ಮ ಇವೆಲ್ಲ ಬೇಕಾಗಿಲ್ಲ. ಜನರ ಸಮಸ್ಯೆಗೆ ಪರಿಹಾರ ಒದಗಿಸುವುದು ಮುಖ್ಯ. ಕನಕಪುರದಲ್ಲಿ ಕಲ್ಲು ಖಾಲಿ ಆಗಿರಬಹುದು. ಅದಕ್ಕಾಗಿ ಈಗ ಅವರಿಗೆ ಮೇಕೆದಾಟು ನೀರಿನ ನೆನಪಾಗಿದೆ’ ಎಂದು ಕುಮಾರಸ್ವಾಮಿ ಟೀಕಿಸಿದರು.



ಜೆಡಿಎಸ್ ಯಾತ್ರೆಗೆ ಸಿದ್ಧಪಡಿಸಿರುವ ‘ಗಂಗಾರಥ’

‘ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಯಾರಿಗೂ ಇಲ್ಲ’

‘ಸಿದ್ದರಾಮಯ್ಯ ಸೇರಿದಂತೆ ಯಾರಿಗೂ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಹಿಂಬಾಲಕರು ಎಷ್ಟು ಕೆರೆ ನುಂಗಿದ್ದಾರೆ ಎಂಬುದು ಗೊತ್ತಿದೆ. ಸಮಯ ಬಂದಾಗ ಎಲ್ಲವನ್ನೂ ಬಹಿರಂಗಪಡಿಸುವೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ಸುಮ್ಮನೆ ರಾಜಕೀಯಕ್ಕೆ ಬಿಟ್ ಕಾಯಿನ್, ಶೇಕಡ 40ರಷ್ಟು ಲಂಚ ಎಂದು ಮಾತನಾಡುತ್ತಿದ್ದಾರೆ. ಯಾವ ಸಾಕ್ಷ್ಯವನ್ನೂ ನೀಡುತ್ತಿಲ್ಲ. ಇವರು ಅಧಿಕಾರದಲ್ಲಿದ್ದಾಗ ಲಂಚ ಇರಲಿಲ್ಲವೆ’ ಎಂದು ಕೇಳಿದರು.

ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೇಕೆದಾಟು ಯೋಜನೆ ಬಗ್ಗೆ ಚರ್ಚಿಸಿರುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ. ಚರ್ಚೆಯ ಫಲವೇನು ಎಂಬುದನ್ನು ಬಹಿರಂಗಪಡಿಸಲಿ ಸವಾಲು ಹಾಕಿದರು.

ಒಎನ್‌ಜಿಸಿ ಅಧ್ಯಕ್ಷೆಯಾಗಿ ಅಲಕಾ



ಅಲಕಾ ಮಿತ್ತಲ್ (ಚಿತ್ರ: ಒಎನ್‌ಜಿಸಿ ವೆಬ್‌ಸೈಟ್)

ನವದೆಹಲಿ (ಪಿಟಿಐ): ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ (ಒಎನ್‌ಜಿಸಿ) ಮಧ್ಯಂತರ ಅಧ್ಯಕ್ಷರನ್ನಾಗಿ ಅಲಕಾ ಮಿತ್ತಲ್ ಅವರನ್ನು ನೇಮಕ ಮಾಡಲಾಗಿದೆ. ದೇಶದ ಅತಿದೊಡ್ಡ ತೈಲ ಮತ್ತು ನೈಸರ್ಗಿಕ ಅನಿಲ ರಫ್ತು ಕಂಪನಿಯಾಗಿರುವ ಒಎನ್‌ಜಿಸಿಯ ಅಧ್ಯಕ್ಷ ಸ್ಥಾನಕ್ಕೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಆರು ತಿಂಗಳ ಅವಧಿಗೆ ಅಥವಾ ಪೂರ್ಣಾವಧಿ ಅಧ್ಯಕ್ಷರ ನೇಮಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಅಲಕಾ ಅವರು ಈ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ.

30ಗಳ ಸಂಬಳದ 95 ಲಕ್ಷ ಉದ್ಯೋಗ ಮಾಯ!

ಒಂದನೇ ಪುಟದಿಂದ

‘ನಾವು ಈಗ ಆರ್ಥಿಕ ಪುನಶ್ಚೇತನದ ಹಂತದಲ್ಲಿ ಇದ್ದೇವೆ. ಕೆಲವು ವಲಯಗಳಲ್ಲಿ ಒಂದಿಷ್ಟು ಉದ್ಯೋಗ ಸೃಷ್ಟಿ ಆಗುತ್ತಿದ್ದವು. ಈಗ ಇನ್ನೊಂದು ಸುತ್ತಿನ ಲಾಕ್‌ಡೌನ್ ಏನಾದರೂ ಜಾರಿ ಆದಲ್ಲಿ, ಸಂಘಟಿತ ಹಾಗೂ ಅಸಂಘಟಿತ ವಲಯಗಳಲ್ಲಿ ಉದ್ಯೋಗ ನಷ್ಟದ ಸಾಧ್ಯತೆ ಇನ್ನಷ್ಟು ಹೆಚ್ಚಲಿದೆ’ ಎಂದು ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಸೆಕ್) ಅರ್ಥಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಕೃಷ್ಣ ರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.



ಪ್ರೊ.ಕೃಷ್ಣ ರಾಜ್

ಲಾಕ್‌ಡೌನ್ ಮತ್ತು ನಿರ್ಬಂಧಗಳಿಂದಾಗಿ ಸಂಘಟಿತ ಹಾಗೂ ಅಸಂಘಟಿತ ಆರ್ಥಿಕ ವಲಯಗಳ ಮೇಲೆ ಆಗಿರುವ ಪರಿಣಾಮಗಳ ಅಧ್ಯಯನದ ವಿಚಾರವಾಗಿ ಸರ್ಕಾರ ಗಂಭೀರವಾಗಿಲ್ಲ. ನಿರುದ್ಯೋಗ ಸಮಸ್ಯೆಯನ್ನು ಸರ್ಕಾರ ಅದೆಷ್ಟು ಗಂಭೀರವಾಗಿ ಪರಿಗಣಿಸಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಆರ್ಥಿಕ ಚಟುವಟಿಕೆಗಳ ಮೇಲೆ ನಿರ್ಬಂಧ ವಿಧಿಸಿದರೆ ಜನರ ಜೀವನೋಪಾಯಕ್ಕೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆಗಳು ತಲೆದೋರಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಸಾರ್ಕ್ ಸಭೆಗೆ ಭಾರತ ಅಡ್ಡಿ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಸಾರ್ಕ್ ಶೃಂಗಸಭೆ ನಡೆಸುವ ಪ್ರಕ್ರಿಯೆಗೆ ಭಾರತವು ಅಡ್ಡಿಪಡಿಸುತ್ತಿದ್ದು ಅದರ ಸಂಕುಚಿತ ವರ್ತನೆಯಿಂದ ಪ್ರಾದೇಶಿಕ ಸಹಕಾರವನ್ನು ಹೆಚ್ಚಿಸುವ ಮೌಲ್ಯಯುತ ವೇದಿಕೆಯನ್ನು ನಿಷ್ಕ್ರಿಯಗೊಳಿಸುತ್ತಿದೆ ಎಂದು ಪಾಕಿಸ್ತಾನ ಶುಕ್ರವಾರ ಆರೋಪಿಸಿದೆ.

ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ದೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ ದೇಶಗಳನ್ನು ಒಳಗೊಂಡಿರುವ ಪ್ರಾದೇಶಿಕ ಸಂಘಟನೆಯಾಗಿರುವ ಸಾರ್ಕ್ 2016ರಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿಲ್ಲ. 2014ರಲ್ಲಿ ಕಠ್ಮಂಡುವಿನಲ್ಲಿ ನಡೆದ ನಂತರ ಇಲ್ಲಿಯವರೆಗೆ ಯಾವುದೇ ದ್ವೈವಾರ್ಷಿಕ ಶೃಂಗಸಭೆಗಳು ನಡೆದಿಲ್ಲ ಎಂದೂ ಅದು ಹೇಳಿದೆ.

ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಆಳ್ವಾಸ್ ಪಾರಮ್ಯ; ಶಶಿಕಾಂತ್‌ಗೆ ಚಿನ್ನ

ಮಂಗಳೂರು 5ನೇ ಬಾರಿ ಚಾಂಪಿಯನ್

• ಮಹೇಶ್ ಎಸ್ ಕನ್ನೇಶ್ವರ

ಮೂಡುಬಿದಿರೆ: ಮಂಗಳೂರು ವಿಶ್ವವಿದ್ಯಾಲಯ, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಅಥ್ಲೆಟಿಕ್ ಕೂಟದಲ್ಲಿ ಮತ್ತೊಮ್ಮೆ ಪಾರಮ್ಯ ಮೆರೆಯಿತು. ಆಳ್ವಾಸ್ ಕಾಲೇಜಿನ ಸಹಯೋಗದಲ್ಲಿ ಇಲ್ಲಿನ ಸ್ವರಾಜ್ ಮೈದಾನದಲ್ಲಿ ಶುಕ್ರವಾರ ಕೊನೆಗೊಂಡ ಕೂಟದ 81ನೇ ಆವೃತ್ತಿಯ ಚಾಂಪಿಯನ್ ಪಟ್ಟ ಮಂಗಳೂರು ವಿವಿ ಮುಡಿಯನ್ನು ಅಲಂಕರಿಸಿತು.

ಆತಿಥೇಯ ವಿಶ್ವವಿದ್ಯಾಲಯದ ಅಥ್ಲೀಟ್‌ಗಳು 105 ಪಾಯಿಂಟ್ ಗಳಿಸಿ 5ನೇ ಬಾರಿ ಸಮಗ್ರ ಪ್ರಶಸ್ತಿ ಗೆದ್ದ ಸಾಧನೆ ಮಾಡಿದರು. ಲವ್ಲಿ ಪ್ರೊಫೆಷನಲ್ ವಿವಿ 42 ಪಾಯಿಂಟ್‌ಗಳೊಂದಿಗೆ ರನ್ನರ್ ಅಪ್ ಆದರೆ ರೋಹ್ಟಕ್‌ನ ಮಹರ್ಷಿ ವಿವಿ 37 ಪಾಯಿಂಟ್ ಗಳಿಸಿ ಮೂರನೇ ಸ್ಥಾನ ಗಳಿಸಿತು. ನಾಲ್ಕನೇ ಸ್ಥಾನ ಕೇರಳದ ಕೋಟಯಂನ ಮಹಾತ್ಮಗಾಂಧಿ ವಿವಿ (23 ಪಾಯಿಂಟ್) ಪಾಲಾಯಿತು.

ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ನಾಲ್ಕು ದಿನ ಮಿಂಚಿನ ಸಂಚಾರ ಮೂಡಿಸಿದ ಕೂಟದಲ್ಲಿ 8 ದಾಖಲೆಗಳು ಆದವು. ಈ ಪೈಕಿ 2 ಮಂಗಳೂರು ವಿವಿಯ ಕ್ರೀಡಾಪಟುಗಳ ಹೆಸರಿನಲ್ಲಿ ಸೇರಿಕೊಂಡವು. ತಲಾ 6 ಚಿನ್ನ ಮತ್ತು ಬೆಳ್ಳಿ, 4 ಕಂಚಿನ ಪದಕಗಳು ಈ ವಿವಿಯ ಪಾಲಾದವು. 20 ಮೀಟರ್ಸ್ ವೇಗದ ನಡಿಗೆಯಲ್ಲಿ ದಾಖಲೆ ಬರೆದ ಪಟಿಯಾಲ ವಿವಿಯ ಅಕ್ಷದೀಪ್ ಸಿಂಗ್ ಉತ್ತಮ ಅಥ್ಲೀಟ್ ಆಗಿ ಹೊರಹೊಮ್ಮಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಚಿನ್ನದ ಪದಕ ಗೆದ್ದವರಿಗೆ ₹ 25 ಸಾವಿರ, ಬೆಳ್ಳಿ ಹಾಗೂ ಕಂಚು ವಿಜೇತರಿಗೆ ಕ್ರಮವಾಗಿ ₹15 ಸಾವಿರ ಹಾಗೂ ₹10 ಸಾವಿರ ಮೊತ್ತವನ್ನು ನೀಡಿತು.


ವಿಕ್ರಾಂತ್ ಮಲಿಕ್ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಕೂಟ ದಾಖಲೆ ಮಾಡಿದವರಿಗೆ ₹ 25 ಸಾವಿರ ಲಭಿಸಿತು.

ಕೊನೆಯ ದಿನದ ಫಲಿತಾಂಶಗಳು: 200 ಮೀಟರ್ಸ್ ಓಟ: ಶಶಿಕಾಂತ್ (ಬೆಂಗಳೂರು ವಿವಿ)-1, ವಿಘ್ನೇಶ್ (ಮಂಗಳೂರು ವಿವಿ)-2, ಅಮನ್ ಖೋಖರ್ (ಮಹರ್ಷಿ ದಯಾನಂದ ವಿವಿ)-3. ಕಾಲ: 21. 30 ಸೆಕೆಂಡು; 800 ಮೀಟರ್ಸ್ ಓಟ: ಪರ್ವೇಜ್ ಖಾನ್ (ಮಂಗಳೂರು ವಿವಿ)-1, ದೇವಯ್ಯ ಟಿ.ಎಚ್ (ಮಂಗಳೂರು ವಿವಿ)-2, ಇರ್ಫಾನ್ (ನೆಹರೂ ಗ್ರಾಮ್ ಭಾರತಿ ವಿವಿ)3. ಕಾಲ: 1 ನಿಮಿಷ 52.42 ಸೆಕೆಂಡು; ಸ್ಟೀಪಲ್ ಚೇಸ್: ಲೋಕೇಶ್ ಚೌಧಾರ್ (ಮಹರ್ಷಿ ದಯಾನಂದ ವಿವಿ)-1, ಪ್ರಿನ್ಸ್ ರಾಜ್ (ಲವ್ಲಿ ಪ್ರೊಫೆಷನಲ್ ವಿವಿ)-2, ಸುಮಿತ್ ಕುಮಾರ್ (ಮಂಗಳೂರು ವಿವಿ)-3; (ಕಾಲ: 8 ನಿಮಿಷ 51.23 ಸೆಕೆಂಡು). ಕೂಟ ದಾಖಲೆ. ಹಿಂದಿನ ದಾಖಲೆ: ಹರಿಭಕ್ಷ್ ಸಿಂಗ್, ಮಂಗಳೂರು ವಿವಿ (ಕಾಲ: 9 ನಿಮಿಷ 15. 9 ಸೆಕೆಂಡು); 400 ಮೀಟರ್ಸ್ ಹರ್ಡಲ್ಸ್: ಸುರೇಂದರ್ ಎಸ್ (ಭಾರತೀಯಾರ್ ವಿವಿ)-1, ರೋಹಿತ್ ಎ (ಕ್ಯಾಲಿಕಟ್ ವಿವಿ)-2, ಪಿ. ಪ್ರವೀಣ್ ಕುಮಾರ್ (ಮಧುರೈ ಕಾಮರಾಜ್ ವಿವಿ-3. ಕಾಲ: 51.77 ಸೆಕೆಂಡು; ಹಾಫ್ ಮ್ಯಾರಥಾನ್: ಆರಿಫ್ ಆಲಿ (ಜನನಾಯಕ್ ಚಂದ್ರಶೇಖರ್ ವಿವಿ)-1, ಅನಿಲ್ ಕುಮಾರ್ (ಮಂಗಳೂರು ವಿವಿ)-2, ರೋಹಿತ್ ಯಾದವ್ (ನೆಹರೂ ಗ್ರಾಮ್ ಭಾರತಿ ಡೀಮ್ಡ್ ವಿವಿ)-3. (ಕಾಲ: 1 ತಾಸು 5 ನಿಮಿಷ 56.29 ಸೆಕೆಂಡು); 4x100 ಮೀ ರಿಲೆ: ಮಂಗಳೂರು ವಿವಿ -1, ಭಾರತೀಯಾರ್ ವಿವಿ-2, ಮದ್ರಾಸ್ ವಿವಿ-3; ಕಾಲ: 40.74 ಸೆ. ಕೂಟ ದಾಖಲೆ. ಹಿಂದಿನ ದಾಖಲೆ: ಮಂಗಳೂರು ವಿವಿ (40.83 ಸೆಕೆಂಡು); 4x400 ಮೀ ರಿಲೆ: ಮಂಗಳೂರು ವಿವಿ-1, ಚೌಧರಿ ಚರಣ್ ಸಿಂಗ್ ವಿವಿ-2, ಕೋಟಯಂ ಮಹಾತ್ಮ ಗಾಂಧಿ ವಿವಿ-3. ಕಾಲ: 3 ನಿಮಿಷ 11.91 ಸೆ; ಲಾಂಗ್ ಜಂಪ್: ಭೂಪೇಂಧರ್ (ಗುರು ಜಂಭೇಶ್ವರ್ ವಿವಿ)-1, ಜಸ್ವಿನ್ ಅಲ್‌ಡ್ರಿನ್ (ಮದ್ರಾಸ್ ವಿವಿ)-2, ಶ್ರೀರಾಮ್ ವಿ (ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ)-3. ದೂರ: 7.64 ಮೀಟರ್ಸ್; ಜಾವೆಲಿನ್ ಥ್ರೋ: ವಿಕ್ರಾಂತ್ ಮಲಿಕ್ (ಮಂಗಳೂರು ವಿವಿ)-1, ಯಶ್‌ವೀರ್ ಸಿಂಗ್ (ಮಹರ್ಷಿ ದಯಾನಂದ ವಿವಿ)-2, ಅಜಯ್ ರಾಜ್ (ಲವ್ಲಿ ಪ್ರೊಫೆಷನಲ್ ವಿವಿ)-3. ದೂರ: 77. 82; ಹ್ಯಾಮರ್ ಥ್ರೋ: ದಮನೀತ್ ಸಿಂಗ್ (ಪಟಿಯಾಲ ವಿವಿ)-1, ಅಜಯ್ ಕುಮಾರ್ (ಮಂಗಳೂರು ವಿವಿ)-2, ಫಾರೂಕ್ ಅಹಮ್ಮದ್ (ದೀನ್ ದಯಾಳ್ ಉಪಾಧ್ಯಾಯ ವಿವಿ)-3. ದೂರ: 63 ಮೀಟರ್.


ಹರಿಯಾಣ ಸ್ಟೀಲರ್ಸ್ ಆವರಣದಲ್ಲಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದ ಬೆಂಗಾಲ್ ವಾರಿಯರ್ಸ್‌ನ ಮಣಿಂದರ್ ಸಿಂಗ್

ಪ್ರೊ ಕಬಡ್ಡಿ: ಹಾಲಿ ಚಾಂಪಿಯನ್ನರ ಮಣಿಸಿದ ಸ್ಟೀಲರ್ಸ್

ಪ್ಯಾಂಥರ್ಸ್‌ಗೆ ಮಣಿದ ಪಲ್ಟನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಜುನ್ ದೇಶ್ವಾಲ್ ಅವರ 'ಸೂಪರ್' ಆಟದ ನೆರವಿನಿಂದ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ ಶುಕ್ರವಾರದ ಪಂದ್ಯದಲ್ಲಿ ಗೆಲುವು ಸಾಧಿಸಿತು. ಜಿದ್ದಾಜಿದ್ದಿಯ ಹಣಾಹಣಿಯಲ್ಲಿ ಪ್ಯಾಂಥರ್ಸ್ 31-26ರಲ್ಲಿ ಪುಣೇರಿ ಪಲ್ಟನ್ ವಿರುದ್ಧ ಜಯ ಸಾಧಿಸಿದರು.

ಅರ್ಜುನ್ ಒಟ್ಟು 11 ಪಾಯಿಂಟ್ ಗಳಿಸಿ ಮಿಂಚಿದರು. ಆಲ್‌ರೌಂಡರ್ ಸಾಹುಲ್ ಕುಮಾರ್ ಮತ್ತು ಡಿಫೆಂಡರ್ ಸಂದೀಪ್ ಧುಲ್ ತಲಾ 4 ಪಾಯಿಂಟ್ ಕಲೆ ಹಾಕಿದರೆ ದೀಪಕ್ ಹೂಡಾ 3 ಪಾಯಿಂಟ್ ಗಳಿಸಿದರು. ಪುಣೇರಿ ಪರವಾಗಿ ಅಸ್ಲಾಂ ಇನಾಂದಾರ್ 6, ಪಂಕಜ್ ಮೋಹಿತೆ 4 ಮತ್ತು ಮೋಹಿತ್ ಗೋಯತ್ 3 ಪಾಯಿಂಟ್ ಗಳಿಸಿದರು.

ಚಾಂಪಿಯನ್ನರಿಗೆ ಆಘಾತ: ಹರಿಯಾಣ ಸ್ಟೀಲರ್ಸ್ ಹಾಲಿ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ವಿರುದ್ಧ 41-37ರಲ್ಲಿ ಜಯ ಗಳಿಸಿತು. ಮೀತು ಮತ್ತು ವಿಕಾಸ್ ಖಂಡೋಲ ಭರ್ಜರಿ ರೇಡಿಂಗ್ ಮೂಲಕ ಮಿಂಚಿದರು. ಮೀತು 10 ಟಚ್ ಪಾಯಿಂಟ್ ಗಳಿಸಿದರೆ ವಿಕಾಸ್ ಒಂದು ಬೋನಸ್ ಪಾಯಿಂಟ್ ನೊಂದಿಗೆ 9 ಪಾಯಿಂಟ್ ಗಳಿಸಿದರು.

9 ಬೋನಸ್ ಪಾಯಿಂಟ್ ಸೇರಿದಂತೆ 14 ಪಾಯಿಂಟ್‌ಗಳನ್ನು ಕಲೆ ಹಾಕಿದ ಬೆಂಗಾಲ್ ವಾರಿಯರ್ಸ್ ನಾಯಕ ಮಣಿಂದರ್ ಸಿಂಗ್ ಅವರ ಹೋರಾಟಕ್ಕೆ ಮೊಹಮ್ಮದ್ ನಬಿಭಕ್ಷ್ ಆಲ್‌ರೌಂಡ್ ಆಟದ ಮೂಲಕ ಸಹಕಾರ ನೀಡಿದರು. 9 ಪಾಯಿಂಟ್ ಗಳಿಸಿದರು.

ಮೊದಲಾರ್ಧದ ಮುಕ್ತಾಯಕ್ಕೆ 18-15ರ ಮುನ್ನಡೆ ಸಾಧಿಸಿದ್ದ ವಾರಿಯರ್ಸ್ ನಂತರ ಮುಗ್ಗರಿಸಿತು. ದ್ವಿತೀಯಾರ್ಧದ ಆರಂಭದಲ್ಲೇ ವಾರಿಯರ್ಸ್ ತಂಡವನ್ನು ಆಲ್‌ಔಟ್ ಮಾಡಿದ ಹರಿಯಾಣ ಸಮಬಲ ಸಾಧಿಸಿತು. ನಂತರ ಜಯದತ್ತ ಮುನ್ನಡೆಯಿತು.


ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	7	5	1	1	28
ದಬಂಗ್ ಡೆಲ್ಲಿ	6	4	-	2	26
ಪಟ್ನಾ ಪೈರೇಟ್ಸ್	6	4	1	1	24
ತಮಿಳ್ ತಲೈವಾಸ್	7	2	1	4	22
ಯು ಮುಂಬಾ	6	2	1	3	20
ಹರಿಯಾಣ ಸ್ಟೀಲರ್ಸ್	7	3	3	1	20
ಜೈಪುರ್ ಪಿಂಕ್ ಪ್ಯಾಂಥರ್ಸ್	7	3	4	-	18
ಬೆಂಗಾಲ್ ವಾರಿಯರ್ಸ್	7	3	4	-	17
ಗುಜರಾತ್ ಜೈಂಟ್ಸ್	6	1	3	2	14
ಯುಪಿ ಯೋಧಾ	6	1	3	2	14
ಪುಣೇರಿ ಪಲ್ಟನ್	7	2	5	-	11
ತೆಲುಗು ಟೈಟನ್ಸ್	6	-	4	2	10

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಇಂದಿನ ಪಂದ್ಯ (ರಾತ್ರಿ)

ಯುಪಿ ಯೋಧಾ Vs ದಬಂಗ್ ಡೆಲ್ಲಿ 7.30
ಯು ಮುಂಬಾ – ತೆಲುಗು ಟೈಟನ್ಸ್ 8.30
ಗುಜರಾತ್ ಜೈಂಟ್ಸ್ – ಪಟ್ನಾ ಪೈರೇಟ್ಸ್ 9.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್


ಪಂಕಜ್ ಶರ್ಮಾ

ಪಿವಿಎಲ್: ಬೆಂಗಳೂರು ತಂಡಕ್ಕೆ ಪಂಕಜ್

ಬೆಂಗಳೂರು: ಫೆಬ್ರುವರಿ 15ರಿಂದ ಕೊಚ್ಚಿಯಲ್ಲಿ ನಡೆಯಲಿರುವ ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ಪಂಕಜ್ ಶರ್ಮಾ ಅವರು ಬೆಂಗಳೂರು ಟಾರ್ಪಿಡೋಸ್ ತಂಡದ ಪರ ಆಡಲಿದ್ದಾರೆ.

ಹಿಮಾಚಲ ಪ್ರದೇಶದ ರೈತ ಕುಟುಂಬದಲ್ಲಿ ಜನಿಸಿರುವ ಪಂಕಜ್, ಭಾರತದ ಸೇನೆಯಲ್ಲಿ ಹವಿಲ್ದಾರ್ ಆಗಿದ್ದಾರೆ. 2018ರ ಏಷ್ಯನ್ ಗೇಮ್ಸ್‌ನಲ್ಲಿ ಅವರು ರಾಷ್ಟ್ರೀಯ ತಂಡದ ಪರ ಕಣಕ್ಕಿಳಿದಿದ್ದರು.

ಪಂಕಜ್ ಶರ್ಮಾ ಅವರು ಸದ್ಯ ಸಿಕಂದರಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಿಧಾನಗತಿಯ ಬೌಲಿಂಗ್‌ಗೆ ಫೀಲ್ಡರ್ ಸಂಖ್ಯೆ ಕಡಿತ!

ದುಬೈ (ಪಿಟಿಐ): ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ನಿಗದಿತ ಸಮಯದಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದಿದ್ದರೆ 30 ಯಾರ್ಡ್ ವೃತ್ತದಿಂದ ಹೊರಗಿರುವ ಒಬ್ಬ ಫೀಲ್ಡರ್ ಸಂಖ್ಯೆಯನ್ನು ಕಡಿಮೆ ಮಾಡಲಾಗುವುದು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ. ಈ ತಿಂಗಳಿನಲ್ಲಿಯೇ ಈ ನಿಯಮ ಜಾರಿಗೆ ಬರಲಿದೆ.

ದ್ವಿಪಕ್ಷೀಯ ಟಿ20 ಸರಣಿಗಳಲ್ಲಿ ಇನಿಂಗ್ಸ್ ಮಧ್ಯದಲ್ಲಿ ಪಾನೀಯ ವಿರಾಮದ ಆಯ್ಕೆಯನ್ನೂ ತಂಡಗಳಿಗೆ ಕೌನ್ಸಿಲ್ ನೀಡಿದೆ. 'ಸಾಮಾನ್ಯವಾಗಿ ಪಂದ್ಯದ ಮೊದಲ ಆರು ಓವರ್‌ಗಳಲ್ಲಿ ಐದು ಫೀಲ್ಡರ್‌ಗಳಿಗೆ 30 ಯಾರ್ಡ್ ವೃತ್ತದಿಂದ ಹೊರಗಿರುವ ಅವಕಾಶ ಇರುತ್ತದೆ. ಆದರೆ ಬೌಲಿಂಗ್ ಮಾಡುತ್ತಿರುವ ತಂಡವು ನಿಗದಿತ ಓವರ್‌ಗಳನ್ನು ಪೂರ್ಣಗೊಳಿಸುವ ಸ್ಥಿತಿ ಕಂಡುಬರದಿದ್ದರೆ ಈ ಫೀಲ್ಡರ್‌ಗಳ ಸಂಖ್ಯೆ ನಾಲ್ಕಕ್ಕೆ ಇಳಿಸಲಾಗುತ್ತದೆ' ಎಂದು ಐಸಿಸಿ ತಿಳಿಸಿದೆ.

ನೋವುಂಡ ಜಾನಿಗೆ ಶತಕದ ಸಂಭ್ರಮ

ಆ್ಯಷಸ್ ಟೆಸ್ಟ್ ಸರಣಿ: ಅರ್ಧಶತಕ ಗಳಿಸಿದ ಬೆನ್ ಸ್ಟೋಕ್ಸ್

ಸಿಡ್ನಿ (ಎಎಫ್‌ಪಿ): ಬ್ಯಾಟಿಂಗ್ ವೈಫಲ್ಯದಿಂದ ಕುಸಿತಕ್ಕೊಳಗಾಗಿ ಫಾಲೊ ಆನ್ ಆತಂಕದಲ್ಲಿದ್ದ ಇಂಗ್ಲೆಂಡ್ ತಂಡಕ್ಕೆ ಆಸರೆಯಾದ ಜಾನಿ ಬೇಸ್ಟೊ ಹೆಬ್ಬೆರಳಿಗೆ ಆದ ಗಾಯವನ್ನೂ ಲೆಕ್ಕಿಸದೆ ಆಸ್ಟ್ರೇಲಿಯಾ ನೆಲದಲ್ಲಿ ಮೊದಲ ಶತಕ ಸಿಡಿಸಿದರು.

ಬೇಸ್ಟೊ ಅವರ ಅಮೋಘ ಶತಕ (ಬ್ಯಾಟಿಂಗ್ 103; 140 ಎಸೆತ, 8 ಬೌಂಡರಿ, 3 ಸಿಕ್ಸರ್) ಮತ್ತು ಅವರು ಬೆನ್ ಸ್ಟೋಕ್ಸ್ (66; 91 ಎ, 9 ಬೌಂ, 1 ಸಿ) ಜೊತೆ ಸೇರಿಸಿದ 128 ರನ್‌ಗಳ ಬಲದಿಂದ ಇಂಗ್ಲೆಂಡ್ ತಂಡ ಚೇತರಿಕೆ ಕಂಡಿತು. ಆ್ಯಷಸ್ ಸರಣಿಯ ನಾಲ್ಕನೇ ಪಂದ್ಯದ ಮೂರನೇ ದಿನದಾಟ ಮುಕ್ತಾಯಗೊಂಡಾಗ ಪ್ರವಾಸಿಗರು 7 ವಿಕೆಟ್‌ಗಳಿಗೆ 258 ರನ್ ಗಳಿಸಿದ್ದು ಆಸ್ಟ್ರೇಲಿಯಾದ ಮೊದಲ ಇನಿಂಗ್ಸ್ ಮೊತ್ತ ಹಿಂದಿಕ್ಕಲು ಇನ್ನೂ 158 ರನ್ ಬೇಕಾಗಿದೆ. ಆಸ್ಟ್ರೇಲಿಯಾ 8ಕ್ಕೆ 416 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. ಇಂಗ್ಲೆಂಡ್ 36 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಸಂದರ್ಭದಲ್ಲಿ ಬೆನ್ ಸ್ಟೋಕ್ಸ್ ಜೊತೆಗೂಡಿದ ಬೇಸ್ಟೊ 60 ರನ್ ಗಳಿಸಿದ್ದಾಗ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಹೆಬ್ಬೆರಳಿಗೆ ಗಾಯಗೊಂಡು ಕ್ರೀಸ್‌ನಿಂದ ತೆರಳುವ ಸ್ಥಿತಿ ಉಂಟಾಗಿತ್ತು. ಆದರೆ ದಿಟ್ಟತನ ಪ್ರದರ್ಶಿಸಿದ ಅವರು ಬ್ಯಾಟಿಂಗ್ ಮುಂದುವರಿಸಲು ನಿರ್ಧರಿಸಿದರು.


ಶತಕ ಗಳಿಸಿ ಸಂಭ್ರಮಿಸಿದ ಜಾನಿ ಬೇಸ್ಟೊ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 8ಕ್ಕೆ 416; ಇಂಗ್ಲೆಂಡ್ (ಗುರುವಾರ 5 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 13): 70 ಓವರ್‌ಗಳಲ್ಲಿ 7ಕ್ಕೆ 258 (ಬೆನ್ ಸ್ಟೋಕ್ಸ್ 66, ಜಾನಿ ಬೇಸ್ಟೊ ಬ್ಯಾಟಿಂಗ್ 103, ಮಾರ್ಕ್ ವುಡ್ 39, ಜ್ಯಾಕ್ ಲೀಚ್ ಬ್ಯಾಟಿಂಗ್ 4; ಪ್ಯಾಟ್ ಕಮಿನ್ಸ್ 68ಕ್ಕೆ2, ಮಿಚೆಲ್ ಸ್ಟಾರ್ಕ್ 49ಕ್ಕೆ1, ಸ್ಕಾಟ್ ಬೊಲ್ಯಾಂಡ್ 25ಕ್ಕೆ2, ಕ್ಯಾಮರಾನ್ ಗ್ರೀನ್ 24ಕ್ಕೆ1, ನೇಥನ್ ಲಯನ್ 71ಕ್ಕೆ1).

ಎಲ್‌ಎಲ್‌ಸಿಯಲ್ಲಿ ಸ್ಟುವರ್ಟ್ ಬಿನ್ನಿ

ನವದೆಹಲಿ (ಪಿಟಿಐ): ಮಾಜಿ ಕ್ರಿಕೆಟಿಗರಾದ ಮೊಹಮ್ಮದ್ ಕೈಫ್ ಮತ್ತು ಸ್ಟುವರ್ಟ್ ಬಿನ್ನಿ ಅವರನ್ನು ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನ ಇಂಡಿಯಾ ಮಹಾರಾಜಾಸ್ ತಂಡದಲ್ಲಿ ಸೇರಿಸಿಕೊಳ್ಳಲಾಗಿದೆ. ಪಂದ್ಯಗಳು 20ರಿಂದ ಮಸ್ಕತ್‌ನಲ್ಲಿ ನಡಯಲಿವೆ.


ಸ್ಟುವರ್ಟ್ ಬಿನ್ನಿ

ಸಾಯ್ ಕೇಂದ್ರದಲ್ಲಿ ಕೋವಿಡ್ ಸೋಂಕು

ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರು ಕೇಂದ್ರದಲ್ಲಿ ಕೋವಿಡ್-19 ಸೋಂಕು ಕಾಣಿಸಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಎಲ್ಲ ಕೇಂದ್ರಗಳಲ್ಲೂ ಪಾಲಿಸುವಂತೆ ಹೊಸ ಎಸ್‌ಒಪಿಯನ್ನು ಸಾಯ್ ಕೇಂದ್ರ ಕಚೇರಿ ಬಿಡುಗಡೆ ಮಾಡಿರುವ ಬೆನ್ನಲ್ಲೇ ಈ ವಿಷಯ ಬಹಿರಂಗಗೊಂಡಿದೆ. ಕನಿಷ್ಠ 15 ಅಥ್ಲೀಟ್‌ಗಳಲ್ಲಿ ಸೋಂಕು ಕಾಣಿಸಿಕೊಂಡಿದ್ದು ಈ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.

ಡಿಸೆಂಬರ್ 30ರಿಂದ ಈ ತಿಂಗಳ ನಾಲ್ಕರ ನಡುವೆ ನಡೆಸಿದ ಪರೀಕ್ಷೆಗಳಲ್ಲಿ ಪಾಸಿಟಿವ್ ವರದಿ ಬಂದಿದೆ. ಸೋಂಕಿತರಲ್ಲಿ ಹೆಚ್ಚಿನವರು ಜಂಪಿಂಗ್ ಮತ್ತು ದೂರ-ಮಧ್ಯಮ ದೂರ ಅಂತರದ ಓಟಗಾರರು.

ಹನುಮ ವಿಹಾರಿ, ಶ್ರೇಯಸ್‌ಗೆ ಅವಕಾಶ ಸಿಗಲಿದೆ: ದ್ರಾವಿಡ್

ಜೊಹಾನ್ಸ್‌ಬರ್ಗ್ (ಪಿಟಿಐ): ಹನುಮ ವಿಹಾರಿ ಮತ್ತು ಶ್ರೇಯಸ್ ಅಯ್ಯರ್ ಅವರು ಅವಕಾಶಗಳು ಸಿಕ್ಕಿದಾಗಲೆಲ್ಲ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಆದರೆ ಹೆಚ್ಚು ಅವಕಾಶಗಳಿಗಾಗಿ ಸ್ವಲ್ಪ ಕಾಯಬೇಕಾದ ಪರಿಸ್ಥಿತಿ ಇದೆ ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ಗುರುವಾರ ಮುಕ್ತಾಯಗೊಂಡ ಜೊಹಾನ್ಸ್‌ಬರ್ಗ್ ಟೆಸ್ಟ್‌ನಲ್ಲಿ ವಿರಾಟ್ ಕೊಹ್ಲಿ ಅವರಿಗೆ ಬೆನ್ನುನೋವು ಕಾಡಿದ ಕಾರಣ ಮತ್ತು ಶ್ರೇಯಸ್ ಅಯ್ಯರ್‌ಗೆ ಹೊಟ್ಟೆಯಲ್ಲಿ ಬೇನೆ ಕಾಣಿಸಿಕೊಂಡ ಕಾರಣ ಹನುಮ ವಿಹಾರಿ ಅವರನ್ನು ಅಂತಿಮ 11ರಲ್ಲಿ ಸೇರಿಸಿಕೊಳ್ಳಲಾಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಅವರು ಅಜೇಯ 40 ರನ್ ಗಳಿಸಿದ ಕಾರಣ ದಕ್ಷಿಣ ಆಫ್ರಿಕಾದ ಜಯಕ್ಕೆ 200ಕ್ಕೂ ಹೆಚ್ಚು ಮೊತ್ತದ ಗುರಿ ನೀಡಲು ಭಾರತಕ್ಕೆ ಸಾಧ್ಯವಾಗಿತ್ತು. ಹನುಮ ವಿಹಾರಿ ಅವರ ಸಾಮರ್ಥ್ಯಕ್ಕೆ ತಕ್ಕ ಅವಕಾಶಗಳು ಸಿಗುತ್ತಿಲ್ಲ.

'ಹನುಮ ವಿಹಾರಿ ಮತ್ತು ಶ್ರೇಯಸ್ ಅಯ್ಯರ್ ಅವರು ಅತ್ಯುತ್ತಮ ಬ್ಯಾಟರ್‌ಗಳು. ಆದರೆ ಸದ್ಯ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಿಗೆ ಆದ್ಯತೆ ನೀಡಬೇಕಾಗಿದೆ. ಹನುಮ ಮತ್ತು ಶ್ರೇಯಸ್‌ಗೆ ಇನ್ನೂ ಸಾಕಷ್ಟು ಅವಕಾಶಗಳ ಸಾಧ್ಯತೆಗಳಿವೆ' ಎಂದು ದ್ರಾವಿಡ್ ಹೇಳಿದರು.


ರಾಹುಲ್ ದ್ರಾವಿಡ್ –ಪಿಟಿಐ ಚಿತ್ರ

ಮಂಡಿರಜ್ಜು ನೋವಿನಿಂದ ಬಳಲುತ್ತಿರುವ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಕೇಪ್‌ಟೌನ್‌ನಲ್ಲಿ ನಡೆಯಲಿರುವ ಕೊನೆಯ ಟೆಸ್ಟ್‌ಗೆ ಅಲಭ್ಯರಾಗಿರುವರು ಎಂದು ದ್ರಾವಿಡ್ ವಿವರಿಸಿದರು. ಪಂದ್ಯ ಇದೇ 11ರಂದು ಆರಂಭವಾಗಲಿದೆ.

ಐಎಸ್‌ಎಲ್: ಮುಂಬೈ ಬೆಂಗಾಲ್–ಸಮಬಲ

ವಾಸ್ಕೊ (ಪಿಟಿಐ): ಮುಂಬೈ ಸಿಟಿ ಎಫ್‌ಸಿ ವಿರುದ್ಧ ದಿಟ್ಟ ಆಟ ವಾಡಿದ ಎಸ್‌ಸಿ ಈಸ್ಟ್ ಬೆಂಗಾಲ್ ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಶನಿವಾರದ ಪಂದ್ಯದಲ್ಲಿ ಗೋಲುರಹಿತ ಡ್ರಾ ಸಾಧಿಸುವಲ್ಲಿ ಯಶಸ್ವಿಯಾಯಿತು.

ಮುಂಬೈ ಸಿಟಿ ಪಂದ್ಯದುದ್ದಕ್ಕೂ ಆಧಿಪತ್ಯ ಸ್ಥಾಪಿಸಿತು. ಆದರೆ ಚೆಂಡನ್ನು ಗುರಿ ಮುಟ್ಟಿಸಲು ಎಸ್‌ಸಿ ಈಸ್ಟ್ ಬೆಂಗಾಲ್ ಅವಕಾಶ ನೀಡಲಿಲ್ಲ. ಚೆಂಡಿನ ಮೇಲೆ ಹಿಡಿತದಲ್ಲಿ ಹಿಂದೆ ಬಿದ್ದ ಈಸ್ಟ್ ಬೆಂಗಾಲ್‌ಗೂ ಗೋಲು ಗಳಿಸಲು ಆಗಲಿಲ್ಲ. ಈ ಡ್ರಾದೊಂದಿಗೆ ಮುಂಬೈ ಸಿಟಿ ಎಫ್‌ಸಿ ಮತ್ತು ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತು.

ಗುರುವಾರ ಜಯ ಗಳಿಸಿದ್ದ ತಂಡ 10 ಪಂದ್ಯಗಳ ಪೈಕಿ ಐದರಲ್ಲಿ ಗೆಲುವು ಸಾಧಿಸಿದೆ. ಒಂದು ಪಂದ್ಯವನ್ನೂ ಗೆಲ್ಲದ ಈಸ್ಟ್ ಬೆಂಗಾಲ್ ಪಟ್ಟಿಯ ಕೊನೆಯ ಸ್ಥಾನದಲ್ಲಿದೆ.

ಶನಿವಾರ ಎರಡು ಪಂದ್ಯಗಳನು ನಡೆಯಲಿದ್ದು ಬ್ಯಾಂಬೊಲಿನ್‌ನಲ್ಲಿ ಎಟಿಕೆ ಮೋಹನ್ ಬಾಗನ್ ಮತ್ತು ಒಡಿಶಾ ಎಫ್‌ಸಿ ತಂಡಗಳು ಸೆಣಸಲಿವೆ. ಈ ಪಂದ್ಯ ರಾತ್ರಿ 7.30ಕ್ಕೆ ನಡೆಯಲಿದೆ. 9.30ಕ್ಕೆ ಆತಿಥೇಯ ಎಫ್‌ಸಿ ಗೋವಾ ಮತ್ತು ಚೆನ್ನೈಯಿನ್ ಎಫ್‌ಸಿ ನಡುವೆ ಹಣಾಹಣಿ ನಡೆಯಲಿದೆ.

ಸೆಮಿಗೆ ಬೋಪಣ್ಣ ಜೋಡಿ

ಅಡಿಲೇಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಅಡಿಲೇಡ್ ಎಟಿಪಿ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಸಾನಿಯಾ ಮಿರ್ಜಾ ಮತ್ತು ಅವರ ಜೊತೆಗಾರ್ತಿ ಉಕ್ರೇನ್‌ನ ನಾದಿಯಾ ಕಿಚೆನೊಕ್ ಡಬ್ಲ್ಯುಟಿಎ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು.

ಶುಕ್ರವಾರ ನಡೆದ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಕರ್ನಾಟಕದ ಬೋಪಣ್ಣ ಮತ್ತು ರಾಮ್‌ಕುಮಾರ್ ಭರ್ಜರಿ ಜಯ ಸಾಧಿಸಿದರು. 6-1, 6-3ರಿಂದ ಫ್ರಾನ್ಸ್ ಮತ್ತು ಮೊನಾಕೊದ ಬೆಂಜಮಿನ್ ಬೊಂಜಿ ಮತ್ತು ಹ್ಯೂಗೊ ನಿಸ್ ಅವರನ್ನು ಪರಾಭವಗೊಳಿಸಿದರು.


ರೋಹನ್ ಬೋಪಣ್ಣ

ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಶ್ರೇಯಾಂಕರಹಿತ ಭಾರತದ ಜೋಡಿಯು ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ, ಬೋಸ್ನಿಯಾ– ಮೆಕ್ಸಿಕೊ ಆಟಗಾರರಾದ ತೊಮಿಸ್ಲಾವ್ ಬ್ರಿಕಿಕ್ ಮತ್ತು ಸ್ಯಾಂಟಿಯಾಗೊ ಗೊಂಜಾಲೆಜ್ ಎದುರು ಆಡಲಿದ್ದಾರೆ.

ಸಾನಿಯಾ ಮತ್ತು ನಾದಿರಾ ನಾಲ್ಕರ ಘಟ್ಟದ ಸೆಣ ಸಾಟದಲ್ಲಿ 1-6, 6-2, 8-10ರಿಂದ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಮತ್ತು ಸ್ಟಾರ್ಮ್ ಸ್ಯಾಂಡರ್ಸ್ ಎದುರು ಎಡವಿದರು.

ಕುಸ್ತಿ: ಸ್ವದೇಶಿ ಕೋಚ್‌ಗಳ ತರಬೇತಿ ಬಯಸಿದ ಬಜರಂಗ್, ರವಿ ದಹಿಯಾ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಕಂಚಿನ ಪದಕ ವಿಜೇತ, ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಸ್ವದೇಶದ ಕೋಚ್ ತರಬೇತಿಯಲ್ಲೇ 2024ರ ಪ್ಯಾರಿಸ್ ಕೂಟಕ್ಕೆ ಸಜ್ಜುಗೊಳ್ಳಲು ನಿರ್ಧರಿಸಿದ್ದಾರೆ. ಮಹತ್ವದ ಸಮಯವನ್ನು ಅನ್ಯ ದೇಶದಲ್ಲಿ ವಿದೇಶಿ ಕೋಚ್‌ಗಳ ಜೊತೆಗೆ ವ್ಯಯಿಸಲು ಅವರು ಬಯಸಿಲ್ಲ.

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ರವಿ ದಹಿಯಾ ಕೂಡ ವಿದೇಶದಿಂದ ವೈಯಕ್ತಿಕ ತರಬೇತುದಾರರನ್ನು ನೇಮಿಸಿಕೊಳ್ಳುವ ಬದಲು ಭಾರತೀಯ ತರಬೇತುದಾರರ ಮಾರ್ಗದರ್ಶನ ಪಡೆಯಲು ಆದ್ಯತೆ ನೀಡುವುದಾಗಿ ಭಾರತ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) ತಿಳಿಸಿದ್ದಾರೆ.


ರವಿ ದಹಿಯಾ ಮತ್ತು ಬಜರಂಗ್ ಪೂನಿಯಾ– ಪಿಟಿಐ ಚಿತ್ರ

ಭಾರತದ ಕೋಚ್‌ಗಳೊಂದಿಗೆ, ಜಾರ್ಜಿಯಾದ ಶಾಕೊ ಬೆಂಟಿನಿಡಿಸ್ ಮತ್ತು ರಷ್ಯಾದ ಕಮಲ್ ಮಾಲಿಕೊವ್ ಅವರು ಕ್ರಮವಾಗಿ ಬಜರಂಗ್ ಮತ್ತು ರವಿ ಅವರಿಗೆ ತರಬೇತಿ ನೀಡಿದ್ದರು.

ಬೆಂಟಿನಿಡಿಸ್ ಜೊತೆಗಿನ ಒಪ್ಪಂದ ಕೊನೆಗೊಂಡಾಗಿನಿಂದ ಬಜರಂಗ್ ಅವರು ವಿದೇಶಿ ಕೋಚ್ ಅನ್ನು ನೇಮಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವರ ಹುಡುಕಾಟವು ಫಲ ನೀಡಿಲ್ಲ.ರಷ್ಯಾದಲ್ಲಿ ಸದ್ಯ ನಡೆಯುತ್ತಿರುವ ತರಬೇತಿ ಶಿಬಿರದ ಸಮಯದಲ್ಲಿಯೂ ಅವರು ತರಬೇತುದಾರರನ್ನು ಹುಡುಕುತ್ತಿದ್ದರು.

ಜೊಕೊವಿಚ್ ಇರುವ ಹೋಟೆಲ್‌ನಲ್ಲೇ ಉಳಿದುಕೊಂಡಿರುವ ಆಟಗಾರ್ತಿ

ರೆನಾಟ ವೊರಕೋವಗೂ ನಿರ್ಬಂಧ

ಮೆಲ್ಬರ್ನ್ (ಎಎಫ್‌ಪಿ): ಸರ್ಬಿಯಾದ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು 'ಗೃಹಬಂಧನ'ದಲ್ಲಿರಿಸಿದ ಬೆನ್ನಲ್ಲೇ ಜೆಕ್ ಗಣರಾಜ್ಯದ ಮಹಿಳಾ ಟೆನಿಸ್ ಪಟು ರೆನಾಟ ವೊರಕೋವ ಅವರನ್ನು ಕೂಡ ಆಸ್ಟ್ರೇಲಿಯಾ ವಶಕ್ಕೆ ಪಡೆದಿರುವುದು ವರದಿಯಾಗಿದೆ. ಇದೇ 17ರಿಂದ ನಡೆಯಲಿರುವ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಬಂದಿದ್ದ ವೊರಕೋವ ಅವರನ್ನು ಶುಕ್ರವಾರ ವಶಕ್ಕೆ ಪಡೆದು ಜೊಕೊವಿಚ್ ಇರುವ ಹೋಟೆಲ್‌ನಲ್ಲೇ ಇರಿಸಲಾಗಿದೆ.

38 ವರ್ಷದ ಆಟಗಾರ್ತಿಯನ್ನು ಆಸ್ಟ್ರೇಲಿಯಾದ ಗಡಿ ರಕ್ಷಣಾ ಪಡೆಯ ಅಧಿಕಾರಿಗಳು ವಶಕ್ಕೆ ಪಡೆದು ಮೆಲ್ಬರ್ನ್‌ನ ಪಾರ್ಕ್ ಹೋಟೆಲ್ ಕಟ್ಟಡದೊಳಗೆ ಕರೆದುಕೊಂಡು ಹೋಗಿರುವ ಚಿತ್ರಗಳು ಮತ್ತು ವಿಡಿಯೊಗಳು ಬಹಿರಂಗವಾಗಿವೆ. ಅವರು ಕೂಡ ಲಸಿಕೆ ಹಾಕಿಸಿಕೊಳ್ಳದೆ ಕೋವಿಡ್ ನಿಯಮ ಉಲ್ಲಂಘಿಸಿದ್ದಾರೆ ಎಂದು ಹೇಳಲಾಗಿದ್ದು ತವರಿಗೆ ಮರಳುವಂತೆ ಸೂಚಿಸಲಾಗಿದೆ. ಅವರು ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಗೆ ಪ್ರವೇಶಿಸಿದ್ದರು.


ರೆನಾಟ ವೊರಕೋವ– ಎಎಫ್‌ಪಿ ಚಿತ್ರ

ನೊವಾಕ್‌ಗೆ 'ಫ್ರೆಂಚ್'ನಲ್ಲಿ ಅವಕಾಶ: ಫ್ರೆಂಚ್ ಓಪನ್ ಟೂರ್ನಿಯಲ್ಲಿ ನೊವಾಕ್ ಜೊಕೊವಿಚ್ ಆಡಲು ಅಡ್ಡಿ ಇಲ್ಲ ಎಂದು ಫ್ರಾನ್ಸ್‌ನ ಕ್ರೀಡಾ ಸಚಿವ ರೊಕ್ಸಾನ ಮರಾಸಿನೊ ತಿಳಿಸಿದ್ದಾರೆ. ಲಸಿಕೆ ನಿಯಮ ಉಲ್ಲಂಘಿಸಿದ್ದ ಕಾರಣ ಜೊಕೊವಿಚ್ ಅವರ ವೀಸಾ ತಡೆಹಿಡಿದಿರುವ ಆಸ್ಟ್ರೇಲಿಯಾದ ಅಧಿಕಾರಿಗಳು ಹೋಟೆಲ್ ಕೊಠಡಿಯಲ್ಲಿ ಇರಿಸಿದ್ದಾರೆ. ಹೀಗಾಗಿ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡುವ ಸಾಧ್ಯತೆ ಇಲ್ಲ.

'ಆಯೋಜಕರು ಕೋವಿಡ್–19ರ ಹಿನ್ನೆಲೆಯಲ್ಲಿ ಕೆಲವು ಆರೋಗ್ಯ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ. ಆದರೂ ನೊವಾಕ್ ಜೊಕೊವಿಚ್ ಅವರಂಥ ಶ್ರೇಷ್ಠ ಆಟಗಾರರ ಮೇಲೆ ನಿರ್ಬಂಧ ಹೇರಲು ಸಾಧ್ಯವಿಲ್ಲ. ಆಸ್ಟ್ರೇಲಿಯಾದಲ್ಲಿ ಇರುವಂಥ ನಿರ್ಬಂಧಗಳು ಫ್ರಾನ್ಸ್‌ನಲ್ಲಿ ಇಲ್ಲ' ಎಂದು ಸಚಿವರು ತಿಳಿಸಿದ್ದಾರೆ.

ಆಟಗಾರರ ಮೇಲಿನ ನಿಷೇಧ ತೆರವು

ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಕ್ರಿಕೆಟ್ ಆಟಗಾರರ ಮೇಲೆ ಹೇರಿದ್ದ ನಿಷೇಧವನ್ನು ಶ್ರೀಲಂಕಾ ಶುಕ್ರವಾರ ವಾಪಸ್ ತೆಗೆದುಕೊಂಡಿದೆ. ಇಂಗ್ಲೆಂಡ್ ಪ್ರವಾಸ ಕೈಗೊಂಡಿದ್ದಾಗ ನಿಯಮ ಉಲ್ಲಂಘಿಸಿದ್ದ ಉಪನಾಯಕ ಕುಶಾಲ್ ಮೆಂಡಿಸ್, ಆರಂಭಿಕ ಬ್ಯಾಟರ್ ಧನುಷ್ಕ ಗುಣತಿಲಕ ಹಾಗೂ ವಿಕೆಟ್ ಕೀಪರ್ ನಿರೋಷನ್ ಡಿಕ್ವೆಲ್ಲಾ ಮೇಲೆ ಒಂದು ವರ್ಷ ನಿಷೇಧ ಹೇರಲಾಗಿತ್ತು. ಇದೀಗ ಆರೇ ತಿಂಗಳಲ್ಲಿ ಅದನ್ನು ತೆರವುಗೊಳಿಸಲಾಗಿದೆ. ಜಿಂಬಾಬ್ವೆ ಎದುರಿನ ಏಕದಿನ ಸರಣಿಗಾಗಿ ತಂಡದ ಆಯ್ಕೆಗೆ ಈ ಮೂವರು ಲಭ್ಯ ಇರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಯಾಫ್, ರಾಷ್ಟ್ರೀಯ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್ ಮುಂದಕ್ಕೆ

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ ಓಮ್ರೈಕ್ರಾನ್‌ನ ತ್ವರಿತ ಹರಡುವಿಕೆ ಹಿನ್ನೆಲೆಯಲ್ಲಿ ಭಾರತ ಅಥ್ಲೆಟಿಕ್ಸ್ ಫೆಡರೇಷನ್(ಎಎಫ್‌ಐ), ನಾಗಾಲ್ಯಾಂಡ್‌ನಲ್ಲಿ ಜನವರಿ 15ರಂದು ನಡೆಯಬೇಕಿದ್ದ ಸ್ಯಾಫ್ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್ ಮತ್ತು ರಾಷ್ಟ್ರೀಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ಗಳನ್ನು ಮುಂದೂಡಿದೆ.

'ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ನಿಗದಿಯಾಗಿದ್ದ ಸ್ಯಾಫ್ ಮತ್ತು ರಾಷ್ಟ್ರೀಯ ಕಂಟ್ರಿ ಚಾಂಪಿಯನ್‌ಷಿಪ್‌ಗಳನ್ನು ಕೋವಿಡ್ ಹೆಚ್ಚಳದ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ಶೀಘ್ರ ಪ್ರಕಟಿಸಲಾಗುವುದು' ಎಂದು ಎಎಫ್‌ಐ ಟ್ವೀಟ್ ಮಾಡಿದೆ.

ನಾಗಾಲ್ಯಾಂಡ್ ಮೊದಲ ಬಾರಿ ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಆಯೋಜಿಸಬೇಕಿತ್ತು.

ಆರ್ಚರಿಗೂ ಕೋವಿಡ್ ಕಾಟ: ಪಂಜಾಬ್‌ನ ಮೊಹಾಲಿಯಲ್ಲಿ ಜನವರಿ 18ರಿಂದ 22ರವರೆಗೆ ನಡೆಯಬೇಕಿದ್ದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಆರ್ಚರಿ ಚಾಂಪಿಯನ್‌ಷಿಪ್ ಮುಂದೂ ಡಲಾಗಿದೆ. ಶೀಘ್ರದಲ್ಲೇ ಪರಿಷ್ಕೃತ ವೇಳಾಪಟ್ಟಿಯನ್ನು ತಿಳಿಸಲಾಗುವುದು ಎಂದು ಟೂರ್ನಿಯ ಆಯೋಜನಾ ಕಾರ್ಯದರ್ಶಿ ಸಿಂಗ್ ಕಾಂಗ್ ಹೇಳಿದ್ದಾರೆ.

ಯುವ ಅಥ್ಲೆಟಿಕ್ಸ್ ಮುಂದೂಡಿಕೆ

ಕೋವಿಡ್ ಹೆಚ್ಚಳದ ಕಾರಣದಿಂದಲೇ ಕರ್ನಾಟಕ ರಾಜ್ಯ ಯೂತ್ ಅಥ್ಲೆಟಿಕ್ ಕೂಟವನ್ನು ಮುಂದೂಡಲಾಗಿದೆ. ಇದೇ 11 ಮತ್ತು 12ರಂದು ಹೊಸಕೋಟೆಯಲ್ಲಿ ಈ ಕೂಟ ನಡೆಯಬೇಕಿತ್ತು.